ಶೂದ್ರ

RAYMOND WILLIAMS

ಈ ಸಂಚಿಕೆಯಲ್ಲಿ

ಬಸವರಾಜ ಸಬರದ
ಕೆ. ಆರ್. ಸಂಧ್ಯಾರೆಡ್ಡಿ
ಉತ್ತನೂರು ರಾಜಮ್ಮ ವಿ. ಶೆಟ್ಟಿ
ಮ. ನ. ಜವರಯ್ಯ
ಉದಯರವಿ. ಶಿ. ವಿ
ಎಲ್. ಎನ್. ಮುಕುಂದರಾಜ್
ಸಿದ್ಧರಾಮಯ್ಯ
ಟಿ. ಎನ್. ಪ್ರಕಾಶಕಮ್ಮರಡಿ
ಕೆ. ಎಂ. ಮುನಿಕೃಷ್ಣಪ್ಪ
ಕಿ. ರಂ. ನಾಗರಾಜ
ಯಶವಂತಚಿತ್ತಾಲ
ಸುದ್ದಿಯ ಗುದ್ದಾಟ
ಕನಸಿಗೊಂದು ಕಣ್ಣು

WRITING IN SOCIETY

ಅರಮನೆ - ಕವನ
ಪುಟ 16-17

Drama is a special kind of use of quite general processes of presentation, representation, Signification.

–RAYMOND WILLIAMS

ಬೆಲೆ : 3-50

ದೂರವಾಣಿ : 643337

ಮುಕ್ತಚರ್ಚೆಗಾಗಿ ಶೂದ್ರ ತಿಂಗಳ ಪತ್ರಿಕೆ

ಸಂಚಿಕೆ : 10 ಆಗಸ್ಟ 1989 ಸಂಪುಟ : 15

ಸಹಾಯಕ ಸಂಪಾದಕರು : ನಿರ್ಮಲಾ ರೆಡ್ಡಿ – ಜಿ. ವಿ. ಆನಂದಮೂರ್ತಿ
ಕೆ. ಎನ್. ಅರುಣ್ – ಟಿ. ಸಿ. ಮಹೇಶ್
ಉತ್ತನೂರ್ ರಾಜಮ್ಮ ವಿ. ಶೆಟ್ಟಿ–ಸ. ರಘುನಾಥ್
ಜರಗನಹಳ್ಳಿಶಿವಶಂಕರ್-ಎಲ್. ಎನ್. ಮುಕುಂದರಾಜ್

ಶೂದ್ರಕ್ಕೆ ಚಂದಾ ಕಳಿಸಿ. ಆಜೀವ ಚಂದಾ ಬಾಬ್ತು ಕಂತುಗಳಲ್ಲಿ ಕೊಡುವವರು ಸ್ವಲ್ಪ ಜಾಗ್ರತೆ ಕೊಟ್ಟರೆ ಒಳಿತು. ಚಂದಾದ ರೀತಿಯಲ್ಲಿ ನಾಲ್ಕೈದು ವರ್ಷ ಕೊಟ್ಟರೆ ನಿಜವಾಗಿಯೂ ತೊಂದರೆಯಾಗುತ್ತದೆ. ಶೂದ್ರ ಬರದಿದ್ದರೆ ಪತ್ರ ಬರೆಯಿರಿ. ಚಂದಾ ವನ್ನು ಎಂ. ಒ. ಮೂಲಕ ಕಳುಹಿಸುವವರು ದಯಮಿಟ್ಟು ಕೌಂಟರ್ ಭಾಗದಲ್ಲಿ ವಿಳಾಸ ಬರೆಯಿರಿ. ಲೇಖನ ಮತ್ತು ಕವನ ಕಳುಹಿಸುವವರು 15 ಪೈಸೆಯ ರಿಪ್ಲೈ ಕಾರ್ಡಿಡಿ ಚೆಕ್ ಮೂಲಕ ಕಳುಹಿಸುವವರು 5 ರೂ. ಹೆಚ್ಚುವರಿ ತುಂಬಿ.

ಮುಖಚಿತ್ರ : **ರೆಮೂಂಡ್ ವಿಲಿಯ್ಸಂ,** ವಿಲಿಯ್ಸಂ ರವರು ಕಳೆದ ವರ್ಷ ನಿಧನ ರಾದರು. ಕಳೆದ ಹದಿನೈದು ವರ್ಷಗಳಲ್ಲಿ ಅವರ ಸಾಕಷ್ಟು ಲೇಖನಗಳನ್ನು ಬಳಸಿ ಕೊಂಡಿದ್ದೇವೆ. ಅವರ ನೆನಪಿಗಾಗಿ ಈ ಚಿತ್ರ ಮತ್ತು ಕಿ. ರಂ. ಅವರ ಲೇಖನ

ಸಂ.

ನೀವು ಕಳಿಸುವ ಚಂದಾ ಶೂದ್ರದ ಬೆಳವಣಿಗೆಯ ಸಂಕೇತ

ವಾರ್ಷಿಕ ಚಂದಾ : 40-00 ರೂ. ಪುಸ್ತಕ ಭಂಡಾರಗಳಿಗೆ 45-00 ರೂ.
ಆಜೀವ ಚಂದಾ 300-00 ರೂ. (ಮೂರು ಕಂತುಗಳಲ್ಲಿ)

ಶೂದ್ರ ಶ್ರೀನಿವಾಸ್, ನಂ. 1, 3 ನೇ ಕ್ರಾಸ್, ಬಾಲಾಜಿನಗರ, ಸುದ್ದುಗುಂಟೆಪಾಳ್ಯ
ಡಿ. ಆರ್. ಕಾಲೇಜ್ ಅಂಚೆ, ಬೆಂಗಳೂರು-560 029

ಕನ್ನಡ ಕಾದಂಬರಿಗಳಲ್ಲಿ ಮುಸ್ಲಿಂ ಸಂಸ್ಕೃತಿಯ ಸಂವೇದನೆಗಳು

–ಬಸವರಾಜ ಸಬರದ

ಕನ್ನಡ ಕಾದಂಬರಿ ಕ್ಷೇತ್ರ ಬದುಕಿನ ವಿವಿಧ ಮಜಲುಗಳಲ್ಲಿ ತನ್ನನ್ನು ಗುರುತಿಸಿ ಕೊಂಡು ಜನಪ್ರಿಯ ಸಾಹಿತ್ಯಪ್ರಕಾರವಾಗಿದೆ. ಈ ದೇಶದ ವಿವಿಧ ಸಂಸ್ಕೃತಿಯ ಒಳನೋಟಗಳನ್ನು ಪರಿಚಯಿಸುವಲ್ಲಿ 'ಕಾದಂಬರಿ' ಸೃಜನಶೀಲ ಸಾಹಿತ್ಯಪ್ರಕಾರವಾಗಿ ಆಕರ್ಷಕವಾಗಿದೆ. ಕನ್ನಡ ಸಾಹಿತ್ಯದ ನಿಜವಾದ ಸುವರ್ಣಯುಗವೆಂದರೆ ಈ ಶತಮಾನದ ಹೊಸಗನ್ನಡ ಸಾಹಿತ್ಯವೆಂದು ಅಭಿಮಾನದಿಂದ ಹೇಳಬಹುದಾಗಿದೆ.

ಕನ್ನಡ ಸಾಹಿತ್ಯ ಹಿಂದೂ ಸಂಸ್ಕೃತಿಯಿಂದ ಅನುಭವಗಳನ್ನು ಪಡೆದು ಕೊಂಡಂತೆ ಇಂದು ಮುಸ್ಲಿಂ ಮತ್ತು ದಲಿತ ಸಂಸ್ಕೃತಿಯ ಅನುಭವಗಳನ್ನು ಮೈಗೂಡಿಸಿ ಕೊಂಡಿದೆ. ಕನ್ನಡಕ್ಕೆ ಅಪರಿಚಿತವಾಗಿದ್ದ ಮುಸ್ಲಿಂ ಸಂಸ್ಕೃತಿಯ ಅನೇಕ ಸಂವೇದನೆ ಗಳು ಇಂದು ಕನ್ನಡ ಸಾಹಿತ್ಯದಲ್ಲಿ ವಿಜೃಂಭಿಸತೊಡಗಿವೆ. ಎಲ್ಲ ಸಂಸ್ಕೃತಿಯ ಸಂವೇದನೆ ಗಳನ್ನು ಒಗ್ಗೂಡಿಸಿಕೊಂಡು ಇಂದು ನಿಜಕ್ಕೂ ಕನ್ನಡ ಸಾಹಿತ್ಯ ಶ್ರೀಮಂತವಾಗಿದೆ; ವೈವಿಧ್ಯಮಯವಾಗಿ ಬೆಳೆಯುತೊಡಗಿದೆ. ಹೀಗಾಗಿ ಕನ್ನಡ ಸಾಹಿತ್ಯದ ಮಜಲುಗಳು ಇಂದು ವಿಸ್ತಾರಗೊಂಡಿವೆ. ಇದುವರೆಗೂ ಕಾಣದೇ ಇದ್ದಂತಹ ದುಡಿವ ವರ್ಗದ ಬೇರೆ ಬೇರೆ ಜನರ ಹೊಸ–ಹೊಸ ಅನುಭವಗಳನ್ನು ಕೂಡಿಸಿಕೊಂಡು ಇಂದಿನ ಸಾಹಿತ್ಯ ಮೈದುಂಬಿಕೊಳ್ಳತೊಡಗಿದೆ. ದಲಿತರು–ಶೂದ್ರರು–ಮುಸ್ಲಿಂರು ಹೊಸಗನ್ನಡ ಸಾಹಿತ್ಯ ದಲ್ಲಿ ದನಿ ಎತ್ತಿದ್ದಾರೆ. ಇವರೆಲ್ಲ ತಾವು ಹುಟ್ಟಿಬಂದ ಜನಾಂಗದ ಇತಿ–ಮಿತಿಗಳನ್ನು– ವೈಶಿಷ್ಟ್ಯತೆಗಳನ್ನು ಹೇಳುತ್ತಲೇ ಒಟ್ಟು ಜನಸಮುದಾಯದ ಸಮಾನತೆಯ ವ್ಯವಸ್ಥೆ ಗಾಗಿ ಹಾತೊರೆಯುವವರಾಗಿದ್ದಾರೆ. ಈ ಲೇಖನದಲ್ಲಿ ಬಳಸಿದ "ಮುಸ್ಲಿಂ ಲೇಖಕರು" ಎಂಬಂತಹ ಪದ ಆ ಸಂಸ್ಕೃತಿಯ ಸಂವೇದನೆಯ ಹಿನ್ನೆಲೆಯಲ್ಲಿ ಬಳಸಲಾಗಿದೆಯೇ ಹೊರತು, ಮುಸ್ಲಿಂ ಸಾಹಿತ್ಯ-ದಲಿತ ಸಾಹಿತ್ಯವೆಂದು ಬೇರ್ಪಡಿಸುವುದಕ್ಕಾಗಿ ಅಲ್ಲ. ಆ ಜನಾಂಗದಲ್ಲಿ ಬೆಳೆದುಬಂದ ಲೇಖಕರ ಕಾದಂಬರಿಗಳನ್ನು ಮಾತ್ರ ಇಲ್ಲಿ ತೆಗೆದುಕೊಳ್ಳ ಲಾಗಿದೆ.

ಮುಸ್ಲಿಂ ಜನಾಂಗದ ಬದುಕನ್ನು ಕುರಿತು ಇದೂವರೆಗೆ ಬೇರೆ ಲೇಖಕರು ಬರೆದಿಲ್ಲ ವೆಂದಲ್ಲ. ಆದರೆ, ಮುಸ್ಲೀಮರ ಸಂಸ್ಕೃತಿಯನ್ನು ಆ ಜನಾಂಗದಿಂದ ಬಂದವರೇ

ಬಸವರಾಜ ಸಬರದ, ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ-585106

ರೂಪಿಸಿದಾಗ ಹೆಚ್ಚು ವಸ್ತುನಿಷ್ಠವಾಗುತ್ತದೆ. ಆ ನಿಟ್ಟಿನಲ್ಲಿ ಮುಸ್ಲಿಂ ಲೇಖಕರ ಕೊಡುಗೆ' ಎಂದು ಹೆಸರಿಸಲಾಗಿದೆಯೇ ಹೊರತು ಜಾತಿಯನ್ನು ಆಧಾರವಾಗಿಟ್ಟು ಕೊಂಡು ಇಲ್ಲಿ ವಿಂಗಡಣೆ ಮಾಡಿಲ್ಲ. ಕನ್ನಡ ಸಾಹಿತ್ಯಕ್ಕೆ ತುಂಬಾ ಹೊಸತಾಗಿರುವ ಇಲ್ಲಿನ ಅನುಭವಗಳು ಕೇವಲ ಮುಸ್ಲಿಂ ಜನಾಂಗದವರಿಗಷ್ಟೇ ಸೀಮಿತವಾಗಿರದೆ ಎಲ್ಲ ಮನುಷ್ಯರ ಅನುಭವಗಳಾಗಿವೆ. ಹಸಿವು–ಬಡತನ–ಮೌಢ್ಯತೆ-ಅನಕ್ಷರತೆ ಮುಸ್ಲಿಂ ಬಾಂಧವರನ್ನು ಕಾಡಿದಂತೆ, ಇತರ ಬಡವರನ್ನೂ ಕಾಡಿದೆ. ಮುಸ್ಲೀಂ ಧರ್ಮದ ಹಿನ್ನೆಲೆಯಲ್ಲಿ ಈ ಸಮಸ್ಯೆಗಳು ಹೇಗೆ ರೂಪ ಪಡೆದಿವೆಯೆಂಬುದನ್ನು ಅಭ್ಯಸಿಸುವದು ಇಲ್ಲಿ ಮಹತ್ವವಾಗುತ್ತದೆ. ಮುಸ್ಲೀಂ ಜನಾಂಗದಿಂದ ಬಂದ ಲೇಖಕರೇ ಆ ಅನುಭವಗಳನ್ನು ರೂಪಿಸಿರುವದರಿಂದ ಅವು ಆ ಜನಾಂಗದ ನಿಜವಾದ ದಾಖಲೆಗಳಾಗುತ್ತವೆ. ಇದು ವರೆಗೆ ಸಾಹಿತ್ಯದಲ್ಲಿ–ಸಮಾಜದಲ್ಲಿ ಕಡೆಗಣಿಸಲ್ಪಟ್ಟಿದ್ದ ಸಮಾಜದ ಬೇರೆ-ಬೇರೆ ಜನಾಂಗದ ಅನುಭವಗಳನ್ನು ವಿಶ್ಲೇಷಿಸುವದು, ಅದರ ಇತಿ-ಮಿತಿಗಳನ್ನು ಗುರುತಿಸುವದು, ಹೊಸತನವನ್ನು ಸ್ವಾಗತಿಸುವದು ಬೆಳವಣಿಗೆಯ ದೃಷ್ಟಿಯಿಂದ ಆರೋಗ್ಯಕರವಾದ ನಿಲುವಾಗುತ್ತದೆ. ಸಾಹಿತ್ಯ–ಸಂಸ್ಕೃತಿಗಳು ಸೌಹಾರ್ದತೆಗೆ ದಾರಿಮಾಡಿ ಕೊಟ್ಟಂತಾಗುತ್ತದೆ.

ಕನ್ನಡದಲ್ಲಿ ಶಿಶುನಾಳ ಶರೀಫಸಾಹೇಬರಿಂದ ಮುಸ್ಲೀಂ ಲೇಖಕರ ಪರಂಪರೆ ಪ್ರಾರಂಭವಾಗುತ್ತದೆ. ಶಿಶುನಾಳರ ಪದಗಳು ಹಿಂದೂ ಸಂಸ್ಕೃತಿಯ ಆಧ್ಯಾತ್ಮದ ಲಯಹಿಡಿದು ಹೊರಟರೆ, ನವ್ಯೋತ್ತರ ಸಂದರ್ಭದ ಮುಸ್ಲೀಂ ಲೇಖಕರ ಕೃತಿಗಳು ಮುಸ್ಲೀಂ ಸಂಸ್ಕೃತಿಯ ಬದುಕಿನ ಒಳನೋಟಗಳನ್ನು ಪರಿಚಯಿಸುತ್ತವೆ. ಮುಸ್ಲೀಂ ಲೇಖಕರು ಕನ್ನಡದಲ್ಲಿ ಆಧ್ಯಾತ್ಮಿಕ ಕ್ಷೇತ್ರದ ಮೂಲಕ ಪ್ರವೇಶಪಡೆದು, ಸಾಮಾಜಿಕ ಕ್ಷೇತ್ರದಲ್ಲಿ ಬೆಳೆದುನಿಂತಿದ್ದಾರೆ. ಅಂತೆಯೇ, ನವ್ಯೋತ್ತರದ ಸಂದರ್ಭಕ್ಕೆ ಹೊಸಗನ್ನಡ ಸಾಹಿತ್ಯದಲ್ಲಿ ಅತ್ಯಂತ ಮಹತ್ವದ ಸ್ಥಾನವಿದೆ. ಶೋಷಣೆಗೊಳಗಾದ ದಲಿತರು, ಶೂದ್ರರು, ಮುಸ್ಲೀಮರು, ಲಂಬಾಣಿಗಳು ಇಲ್ಲಿ ಅಧಿಕೃತವಾಗಿ ದನಿ ಎತ್ತಿದ್ದಾರೆ. ಕನ್ನಡ ಸಾಹಿತ್ಯದ ಮುಖಾಂತರ ಬದುಕಿನ ಮತ್ತೊಂದು ಮಗ್ಗುಲನ್ನು ಪರಿಚಯಿಸಿ ಕೊಟ್ಟಿದ್ದಾರೆ.

ಕಾದಂಬರಿ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮುಸ್ಲೀಂ ಲೇಖಕರಲ್ಲಿ ಪ್ರಮುಖವಾಗಿ ಎರಡು ಭಾಗಗಳನ್ನಾಗಿ ಮಾಡಬಹುದು. 1940ರಿಂದ 1975ರವರೆಗೆ ಒಂದು ಹಂತವನ್ನು, 1975ರಿಂದ 1988ರವರೆಗೆ ಮತ್ತೊಂದು ಹಂತವನ್ನು ಮಾಡಬಹುದಾಗಿದೆ.

ಮೊದಲನೆಯ ಹಂತದ ಕಾದಂಬರಿಕಾರರಲ್ಲಿ ಎಂ. ಅಕಬರ ಅಲಿ ಮತ್ತು ಎಂ.

ಶೂದ್ರ

ಜೀವನ ಇವರು ಪ್ರಮುಖರಾಗುತ್ತಾರೆ. ಎರಡನೆಯ ಹಂತದ ಲೇಖಕರಲ್ಲಿ ಸಾರಾ ಅಬೂಬಕರ್, ಫಕೀರ ಮುಹಮದ್ ಕಟ್ಪಾಡಿ, ಬೋಳುವಾರು ಮುಹಮದ್ ಕುಂಞ, ಅಬ್ದುಲ್ ಮಜೀದಖಾನ್, ಅಸಫ್‌ಅಲಿ ಮುಜಾವರ್, ಬಾನು ಮುಸ್ತಾಕ–ಇವರೆಲ್ಲಾ ಗಮನಾರ್ಹ ಕೊಡುಗೆಯನ್ನು ಕೊಟ್ಟಿದ್ದಾರೆ. ಹಾಗೆ ನೋಡಿದರೆ 'ಮುಮ್ತಾಜ್' ಪ್ರಥಮ ಮುಸ್ಲೀಂ ಲೇಖಕಿಯಾಗಿ ಕಾಣುತ್ತಾರೆ. ಆದರೆ ಅವರ ಕೃತಿ 'ಪರದೇಶಿ' 1989ರಲ್ಲಿ ತರಂಗದ ಮೂಲಕ ಪ್ರಕಟವಾಗಿದೆ.

ಮೊದಲನೇ ಹಂತ–ಪ್ರಾರಂಭಿಕವಾಗಿರುವುದರಿಂದ ಅಂತಹ ಸತ್ವಪೂರ್ಣ ಕಾದಂಬರಿ ಆ ಸಂದರ್ಭದಲ್ಲಿ ಬರಲಿಲ್ಲವೆಂದೇ ಹೇಳಬಹುದು. 1942ರ ಸಂದರ್ಭದಲ್ಲಿ ಪ್ರಕಟವಾದ ಎಂ. ಅಕಬರ ಅಲಿಯವರ ಕಾದಂಬರಿ ಗಮನಸೆಳೆಯುತ್ತದೆ. ಅಂತರ್ಜಾತಿ ವಿವಾಹದ ಸಮಸ್ಯೆಯನ್ನು ಬಿಡಿಸುವ ಈ ಕಾದಂಬರಿ ಸಮಾಜದ ಅನಿಷ್ಟತೆಯನ್ನು ಎತ್ತಿ ಹೇಳುತ್ತದೆ. ''ನಿರೀಕ್ಷೆಯಲ್ಲಿ'' ಎಂಬುದು ಈ ಕಾದಂಬರಿಯ ಶೀರ್ಷಿಕೆಯಾಗಿದೆ. ಈ ಕಾದಂಬರಿಯ ನಾಯಕ ಬೇರೆ ಜಾತಿಯವಳನ್ನು ಪ್ರೇಮಿಸಿದಾಗ ಅವರ ವಿವಾಹಕ್ಕೆ ಅಡ್ಡಗೋಡೆಯಾಗಿ ನಿಂತ ಈ ಜಾತಿ ಎಂತಹ ಕ್ರೌರ್ಯತನದಿಂದ ಕೂಡಿದ್ದೆಂಬುದನ್ನು ಇಲ್ಲಿ ಹೇಳಲಾಗಿದೆ.

ಎಂ. ಜೀವನ ಅವರು ಬರೆದ 'ಹುತಾತ್ಮನ ಹೆಂಡತಿ' ಕಾದಂಬರಿ ಸ್ವಾತಂತ್ರ್ಯ ಹೋರಾಟಗಾರನ ಹೆಂಡತಿಯಾದ ಯಮುನಾಬಾಯಿಯ ವಿಷಯಲಂಪಟತನವನ್ನು ಹೇಳುತ್ತದೆ. ಆದರೆ ಇದೊಂದು ಉತ್ತಮ ಕಾದಂಬರಿಯಾಗುವ ಯಾವ ಲಕ್ಷಣವನ್ನೂ ಹೊಂದಿಲ್ಲ. ಈ ಕಾದಂಬರಿಯನ್ನು ಓದಿದನಂತರ ಕಾಮಶಾಸ್ತ್ರವನ್ನು ಓದಿದ ಅನುಭವ ವಾಗುತ್ತದೆ. ಕಾದಂಬರಿಯ ವಸ್ತು, ಆಶಯ, ಧೋರಣೆ ಇದಾವುದನ್ನೂ ಕಲಾತ್ಮಕ ವಾಗಿ ಸ್ಪರ್ಶಿಸದ ಈ ಲೇಖಕ, ಕೇವಲ ಯಮುನಾಬಾಯಿಯ ಕಾಮದ ಚೇಷ್ಟೆಗಳನ್ನು ವರ್ಣಿಸುವಲ್ಲಿಯೇ ತಮ್ಮ ಶ್ರಮವನ್ನು ವ್ಯರ್ಥಗೊಳಿಸಿದ್ದಾರೆ.

ಸಾರಾ ಅಬೂಬಕರ್ ಅವರ 'ಚಂದ್ರಗಿರಿಯ ತೀರದಲ್ಲಿ' ಮತ್ತು 'ಸಹನಾ'; ಫಕೀರ್ ಮುಹಮ್ಮದ್ ಕಟ್ಪಾಡಿಯವರ 'ಸರಕುಗಳು' ಮತ್ತು ಬೋಳುವಾರು ಮುಹಮದ್ ಕುಂಞ ಅವರ 'ಜೆಹಾದ್'–ಈ ನಾಲ್ಕು ಕಾದಂಬರಿಗಳನ್ನು ಇಲ್ಲಿ ಪ್ರಾತಿನಿಧಿಕವಾಗಿ ಆರಿಸಿಕೊಂಡು ವಿಶ್ಲೇಷಿಸಲಾಗಿದೆ. ಈ ಕಾದಂಬರಿಗಳೊಂದಿಗೆ ಅಬ್ದುಲ್ ಮಜೀದಖಾನ್ ಅವರ 'ಅಂಧೇರಿ ನಗರ'(1984) ಮತ್ತು 'ದಿಗಂತ'(1986) ಕಾದಂಬರಿಗಳನ್ನು ಹೆಸರಿಸಬಹುದಾಗಿದೆ. ಸಾರಾ ಅಬೂಬಕರ್ ಅವರ 'ವಜ್ರಗಳು' (1988) ಕಾದಂಬರಿ ಕೂಡಾ ಗಮನಾರ್ಹವಾಗಿದೆ. ಅಸಫ್ ಅಲಿ ಮುಜಾವರ ಅವರ

'ಸಾವಿನ ಸುಳಿ'(1983), ಎಂ. ದಸ್ತಗೀರ್ ಅವರ 'ಹುಲ್ಲುಗಾವಲು'(1984) ಕಾದಂಬರಿಗಳು ಸಂಸ್ಕೃತಿಯ ಸಂವೇದನೆಯ ದೃಷ್ಟಿಯಿಂದ ಅಷ್ಟು ಮಹತ್ವವಾಗದೇ ಇರುವದರಿಂದ ಅವುಗಳನ್ನು ಇಲ್ಲಿ ಕೈಬಿಡಲಾಗಿದೆ. 1989ರವರೆಗೆ ಪ್ರಕಟವಾದ ಕಾದಂಬರಿಗಳಲ್ಲಿ ಕೇವಲ ನಾಲ್ಕು ಕಾದಂಬರಿಗಳನ್ನು ಪ್ರಾತಿನಿಧಿಕವಾಗಿ ಆಯ್ಕೆಮಾಡಿ ಕೊಂಡು ಮುಸ್ಲಿಂ ಸಂಸ್ಕೃತಿಯ ಸಂವೇದನೆಗಳನ್ನು ಗುರುತಿಸುವುದು ಈ ಲೇಖನದ ಉದ್ದೇಶವಾಗಿದೆ.

ಸಾರಾ ಅಬೂಬಕರ್ ಅವರ 'ಚಂದ್ರಗಿರಿಯ ತೀರದಲ್ಲಿ' ಮತ್ತು 'ಸಹನಾ' ಕಾದಂಬರಿಗಳಲ್ಲಿ ಮುಸ್ಲಿಂ ಜನಾಂಗದ ದುಡಿವ ವರ್ಗದವರ ಬದುಕು ಪರಿಣಾಮಕಾರಿ ಯಾಗಿ ಬಂದಿದೆ. ಆ ಅಮಾಯಕ ಜನರ ಮೌಢ್ಯ-ಸಣ್ಣತನ-ತ್ಯಾಗ-ಮಾನವೀಯತೆ ಗುಣಗಳಿಂದ ಕೂಡಿದ ಈ ಕಾದಂಬರಿಗಳು ಮಾನವೀಯ ಬದುಕಿನ ವ್ಯಾಖ್ಯೆಯಂತಿವೆ. ಫಕೀರ್ ಮಹಮ್ಮದ್ ಕಟ್ಪಾಡಿಯವರ 'ಸರಕುಗಳು' ಮುಸ್ಲಿಂ ಬಡಹೆಣ್ಣುಮಕ್ಕಳು ಹೇಗೆ ಶ್ರೀಮಂತರ ಸರಕುಗಳಾಗುತ್ತಾರೆಂಬುದನ್ನು ತಿಳಿಸುತ್ತಲೇ ಪ್ರೀತಿಯ ಅನಂತತೆ ಯನ್ನು ಹೇಳುತ್ತದೆ. ಬೊಳುವಾರು ಮಹಮ್ಮದ್ ಕುಂಞ ಅವರ 'ಜೆಹಾದ್' ಮತೀಯ ಪ್ರಭಾವಗಳನ್ನು ಹತ್ತಿಕ್ಕುತ್ತಲೇ ಬಂಡಾಯದ ಗುಣದಿಂದ ಝಳಪಿಸುತ್ತದೆ.

'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯಲ್ಲಿ ಬರುವ ಚಂದ್ರಗಿರಿ ನದಿ ಬದುಕಿನ ಸಾವು-ನೋವುಗಳ ಸಂಕೇತವಾಗಿದೆ. ಕಿಳಿಯೂರು ಮತ್ತು ಕಾವಳ್ಳಿಯ ನಡುವೆ ಧುಮ್ಮಿಕ್ಕಿ ಹರಿಯುವ ಈ ನದಿ ಆ ಜನತೆಯ ಜೀವನ ಪ್ರೀತಿಯ ಪ್ರವಾಹವಾಗಿ ಒಮ್ಮೆ ಹರಿದರೆ, ಮತ್ತೊಮ್ಮೆ ಅಲ್ಲಿಯ ಜನತೆಯ ಸಣ್ಣತನ-ಮೌಢ್ಯಗಳನ್ನು ಅರಗಿಸಿ ಕೊಳ್ಳಲಾರದೆ ನಾದಿರಾಳಂತಹ ಮುಗ್ಧರನ್ನು ಕೊಚ್ಚಿಕೊಂಡುಹೋಗುತ್ತದೆ.

ನಾದಿರಾ ರಶೀದ್‌ನೊಂದಿಗೆ ನಿಕಾಹ ಮಾಡಿಕೊಂಡು ನೆಮ್ಮದಿಯ ಜೀವನ ಸಾಗಿಸುತ್ತಿದ್ದಾಗ, ತನ್ನ ತವರುಮನೆ ಕಿಳಿಯೂರು ಮತ್ತು ಗಂಡನಮನೆ ಕಾವಳ್ಳಿಯ ನಡುವೆ ಧುಮ್ಮಿಕ್ಕಿ ಹರಿವ ಚಂದ್ರಗಿರಿ ನದಿ ಆಕೆಗೆ ಜೀವನೋತ್ಸಾಹದ ಸಂಕೇತವಾಗು ತ್ತದೆ. ಒಂದು ಪುಟ್ಟ ಗಂಡುಮಗುವಿಗೆ ಜನ್ಮವಿತ್ತಾಗಲಂತೂ ಆಕೆ ತನ್ನ ಬದುಕು ಸಾರ್ಥಕವೆಂದುಕೊಳ್ಳುತ್ತಾರೆ. ಕಿಳಿಯೂರಿನ ಮಹಮ್ಮದ್‌ಖಾನ್ ಆಗಲಿ ಕಾವಳ್ಳಿಯ ರಶೀದ್‌ನಾಗಲಿ ಶ್ರೀಮಂತರಲ್ಲ; ದುಡಿದುಬದುಕುವ ಜನ. ಮಾವ-ಅಳಿಯರಲ್ಲಿ ವೈಮನಸ್ಯ ಹುಟ್ಟಲು ಪ್ರಮುಖವಾಗಿ ಹಣವೇ ಕಾರಣವಾಗುತ್ತದೆ. ತನ್ನ ಎರಡನೆಯ ಮಗಳು ಜೀಮೀಲಳ ಮದುವೆಗಾಗಿ ಮಹಮ್ಮದ್‌ಖಾನ್ ತನ್ನ ಅಳಿಯ ರಶೀದ್‌ನಲ್ಲಿ ಹಣದ ಸಹಾಯಕೇಳಿದಾಗ, ರಶೀದ್ ತನ್ನಲ್ಲಿ ಹಣವಿಲ್ಲವೆಂದು ತಿಳಿಸುವದು, ಆಗ

ಮಹಮ್ಮದ್‌ಖಾನ್ ಅಳಿಯನ ಮೇಲೆ ಸಿಟ್ಟಾಗಿ ಬಂದು ಅದನ್ನು ಸೇಡಿನ ರೂಪದಲ್ಲಿ ಪರಿವರ್ತಿಸುವದು ಆಲೋಚನೆಗೀಡುಮಾಡುತ್ತದೆ.

ಇದಕ್ಕಿಂತಲೂ ಮುಖ್ಯವಾಗಿ ಈ ದೇಶದಲ್ಲಿ ಬೇರುಬಿಟ್ಟಿರುವ ಮೂಢನಂಬಿಕೆ ಅಂಧಸಂಪ್ರದಾಯಗಳು ಇಲ್ಲಿನ ಜನತೆಯ ಬದುಕನ್ನು ಸುಲಿದುತಿಂದಿವೆ. ವರದಕ್ಷಿಣೆ ಯಂತಹ ಕ್ರೂರಪದ್ಧತಿಯಿಂದ ಇಲ್ಲಿನ ಜನರ ಬದುಕೇ ದಿಕ್ಕುತಪ್ಪಿದಂತಾಗಿದೆ ಯೆಂಬುದನ್ನು ಕಾದಂಬರಿ ಹೇಳುತ್ತದೆ. ಮಹಮ್ಮದ್‌ಖಾನ್ ತನ್ನ ಅಳಿಯ ರಶೀದ್ ನಲ್ಲಿ ಹಣವನ್ನು ಕೇಳುವದು, ಜಮೀಲಳ ವರದಕ್ಷಿಣೆಗಾಗಿ. ಆ ವರದಕ್ಷಿಣೆ ಕೊಡದಿದ್ದರೆ ಮಗಳಮದುವೆ ಮುರಿದುಹೋಗುವ ಭಯವೇ ಖಾನ್‌ನಲ್ಲಿ ಸೇಡಿನ ಮನೋಭಾವ ವನ್ನು ಸ್ಥಾಯಿಗೊಳಿಸುತ್ತದೆ. ಅಂತೆಯೇ ಆತ ಒಬ್ಬ ತಂದೆಯಾಗಿಯೂ ಮಗಳು ನಾದಿರಾಳ ಬದುಕಿಗೆ ಅಡ್ಡಗೋಡೆಯಾಗುತ್ತಾನೆ. ರಶೀದ್‌ನೂ ಕೂಡ ಮಾವನ ಒತ್ತಾಯಕ್ಕೆ ಮಣಿದು 'ತಲಾಕ್' ಕೊಡುತ್ತಾನೆ.

'ತಲಾಕ್'ದ ಸಂದರ್ಭ ಮುಗಿದನಂತರ ಮೀನು ಮಾರುವ ಪಾರುವಿನಿಂದ ತನ್ನ ತಂದೆಯೇ ಇದಕ್ಕೆ ಕಾರಣವೆಂದು ಸ್ಪಷ್ಟವಾಗುವುದು. ಆಕೆ ಮತ್ತೆ ತನ್ನ ಗಂಡ ಮತ್ತು ಮಗುವಿಗಾಗಿ ಹಂಬಲಿಸುವದು ಕರುಣಾಮಯವಾಗಿದೆ.

ಮಹಮ್ಮದ್‌ಖಾನ್ ಅನಾರೋಗ್ಯದಿಂದ ಹಾಸಿಗೆಹಿಡಿದಾಗ, ನಾದಿರಾ ತನ್ನ ಗಂಡ ನಿಗಾಗಿ ಹಂಬಲಿಸುತ್ತಿದ್ದಾಗ, 'ತಲಾಕ್‌ನ ನಿಜವಾದ ಬಣ್ಣ ಬಯಲಾಗುತ್ತದೆ. ರಶೀದ್ ಒಮ್ಮೆ ತಲಾಕ್ ಕೊಟ್ಟನಂತರ ಈಗ ನಾದಿರಾ ಅವನನ್ನು ಕೂಡುವಂತಿಲ್ಲ. ಮತ್ತೆ ನಿಕಾಹ ಮಾಡುವುದಾದರೆ ಮೊದಲು ಬೇರೊಬ್ಬನೊಂದಿಗೆ ನಿಕಾಹ ಮಾಡಿಕೊಂಡು ಆತ ನೊಂದಿಗೆ ಒಂದು ದಿನರಾತ್ರಿ ಕಳೆದು ನಂತರ ಆತ–ತಲಾಕ್ ಕೊಟ್ಟ ನಂತರ, ತನ್ನ ಮೊದಲಿನ ಗಂಡನೊಂದಿಗೆ ನಿಕಾಹ ಮಾಡಿಕೊಳ್ಳಬಹುದೆಂದು ಮೌಲ್ವಿಗಳು ಹೇಳಿದಾಗ ನಾದಿರಾ ತತ್ತರಿಸಿಹೋಗುತ್ತಾಳೆ.

ಒಂದು ನಿಮಿಷದಲ್ಲಿ ಮೂರುಸಲ 'ತಲಾಕ್' ಎಂದಾಕ್ಷಣ ಅದು ತಲಾಕ್ ಆಗ ಲಾರದು. ಖುರಾನ್‌ನಲ್ಲಿ ಈ 'ತಲಾಕ್'ನ್ನು ಮೂರು ಬೇರೆ–ಬೇರೆ ಸಂದರ್ಭಗಳಲ್ಲಿ ಹೇಳುವ ನಿಯಮವಿದೆ. ಮೂರುತಿಂಗಳಲ್ಲಿ ಪ್ರತ್ಯೇಕ-ಪ್ರತ್ಯೇಕವಾಗಿ ಹೇಳುವ ತಲಾಕ್ ಎಂದರೆ, ಖುರಾನ್ ಒದಗಿಸಿದ ಮೂರು ಅವಕಾಶಗಳು ಎಂದರ್ಥ. ಈ ಅವಧಿಯಲ್ಲಿ ಗಂಡ-ಹೆಂಡತಿ ಕೂಡಿಯೇ ವಾಸಿಸುತ್ತಿರಬೇಕು. ಈ ಸಂಕ್ರಮಣಾವಸ್ಥೆಯಲ್ಲಿ ಗಂಡ– ಹೆಂಡತಿಯೊಂದಿಗೆ ಸಂಪರ್ಕ ಪಡೆದರೆ ಆ ತಲಾಕ್ ಮುರಿದುಬೀಳುತ್ತದೆ. 'ತಲಾಕ್'ನ ಈ ಮೂಲಉದ್ದೇಶವನ್ನು ಆಚರಣೆಗೆ ತರದೆ, ಕೇವಲ ತಮ್ಮ ಸ್ವಾರ್ಥಕ್ಕಾಗಿ ಮುಸ್ಲಿಂ

ಶೂದ್ರ

ಪುರುಷರು ಒಂದೇ ಸಮಯದಲ್ಲಿ ಮೂರುಸಲ ತಲಾಕ್ ಹೇಳಿ ಕೈತೊಳೆದುಕೊಂಡು ಮತ್ತೊಂದು ಮದುವೆಗೆ ಸಿದ್ಧರಾಗುತ್ತಾರೆ.

ಕುರಾನನ್ನು ಟೀಕಿಸದೆ, ಅದನ್ನು ತಪ್ಪಾಗಿ ಆಚರಿಸುತ್ತಿರುವ ಮೂರ್ಖರನ್ನು-ಸ್ವಾರ್ಥಿಗಳನ್ನು ಲೇಖಕಿ ನಿರ್ಭಿಡೆಯಿಂದ ವಿಡಂಬಿಸಿದ್ದಾರೆ. ಯಾವುದೇ ಧರ್ಮದ ಮೂಲಸಿದ್ಧಾಂತಗಳು ಜನಹಿತಕಾರಿಯಾಗಿಯೇ ಇರುತ್ತವೆ. ಆದರೆ ಅದರ ಅನುಯಾಯಿಗಳು ಮಾತ್ರ ತಮ್ಮ ಸ್ವಾರ್ಥಕ್ಕಾಗಿ ಅದರಲ್ಲಿ ಬದಲಾವಣೆಗಳನ್ನು ಮಾಡಿಕೊಂಡು ಧರ್ಮದ ಹೆಸರಿನಲ್ಲಿ ಜನತೆಯನ್ನು ಶೋಷಿಸುತ್ತಾರೆ. ಲೇಖಕಿ ತನ್ನ ಕಥಾನಾಯಕಿಯಾದ ನಾದಿರಾಳನ್ನು ಬಲಿಕೊಡುವುದರ ಮೂಲಕ ನಿಜವಾದ ಮಾನವೀಯ ಧರ್ಮದ ಸ್ಥಾಪನೆಗಾಗಿ ಹಾತೊರೆದಿದ್ದಾರೆ.

ಗಂಡಸರು ತಮಗಿಷ್ಟ ಬಂದಾಗ ತಲಾಕ್ ಕೊಡುವುದು, ಮತ್ತೊಂದು ಮದುವೆಯಾಗುವುದು, ತಲಾಕ್‌ನ ಕಾರಣ ಕೊಡದೇ ಇರುವುದು ಮತ್ತು ಆ ಹೆಣ್ಣಿಗೆ ಜೀವನಾಂಶ ಕೊಡದೇಯಿರುವುದು ಇವೆಲ್ಲ ಸಂಗತಿಗಳು ಇವತ್ತಿನ ಸಮಾಜದಲ್ಲಿ ದಿನನಿತ್ಯ ನಡೆಯುತ್ತವೆ. ಸಾರಾ ಅವರ ಈ ಕಾದಂಬರಿ ಇಂತಹ ಜಟಿಲ ಸಮಸ್ಯೆಗಳಿಗೆ ಅರ್ಥಪೂರ್ಣ ಉತ್ತರವಾಗಿದೆ.

'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯಲ್ಲಿ 'ತಲಾಕ್' ಒಂದು ಸಮಸ್ಯೆಯಾಗಿ ಕಾಡಿದರೆ, 'ಸಹನಾ' ಕಾದಂಬರಿಯಲ್ಲಿ ಆ ಸಮಸ್ಯೆಯನ್ನು ಎದುರಿಸಿ ನಿಲ್ಲುವ ಬದುಕಿನ ಹೋರಾಟವಿದೆ. ಸಾರಾ ಅಬೂಬಕರ್ ಅವರು ಮೊದಲ ಕಾದಂಬರಿಯಲ್ಲಿ ಸಾಧಿಸಲಾರದ್ದನ್ನು ಇಲ್ಲಿ ಸಾಧಿಸಿತೋರಿಸಿದ್ದಾರೆ. ಮಹಿಳೆಯ ಬದುಕಿನ ಸಮಸ್ಯೆಗೆ ಸಂಬಂಧಿಸಿದ ಕನ್ನಡದ ಒಂದು ವಿಶಿಷ್ಟ ಕಾದಂಬರಿ ಇದು. ಈ ಕಾದಂಬರಿಯ ನಾಯಕಿ ನಸೀಮ ಪುಸ್ತಕದ ಶೀರ್ಷಿಕೆಯಾದ 'ಸಹನಾ' ಆಗದೇ ಆ ಸಹನೆಯನ್ನು ಮೀರಿ ಬದುಕಿನ ಹೋರಾಟದಲ್ಲಿ ತನ್ನನ್ನು ಗುರುತಿಸಿಕೊಳ್ಳುವುದರಿಂದ ಗಮನ ಸೆಳೆಯುವ ಪಾತ್ರವಾಗಿ ಕಾಣುತ್ತಾಳೆ.

ಗಂಡ-ಹೆಂಡತಿಯಾಗಿದ್ದ ಸಕೀನಾ, ನಸೀಮಳ ತಾಯಿ. ಈಕೆ ಬೇರೆಯವರ ಮನೆಗೆಲಸಮಾಡಿ ಮಗಳನ್ನು ಸಾಕುತ್ತಾಳೆ. ನಸೀಮಳ ಬಾಲ್ಯದ ಗೆಳತಿ ಸಫಿಯ ಹಾಗೂ ಆಗಾಗ ಸಹಾಯಮಾಡಿದ ನೆರೆಹೊರೆಯ ಪಾತಜ್ಜಿ ತನ್ನ ಆಶ್ಚರ್ಯಕರ ಪ್ರಶ್ನೆಗಳಿಗೆ ಉತ್ತರ ನೀಡುವ ಸೋದರಮಾವ ಅಬ್ದುಲ್‌ಖಾದಿರ್. ನಸೀಮಳ ಬಾಲ್ಯದ ಒಡನಾಟ ಇಷ್ಟಕ್ಕೆ ಕೊನೆಗೊಳ್ಳುವುದಿಲ್ಲ. ಇವರೆಲ್ಲರಿಗಿಂತಲೂ ಗಾಢ ಸಂಬಂಧವನ್ನಿಟ್ಟುಕೊಂಡಿರುವುದು ಆಕೆ ಪ್ರಕೃತಿಯೊಂದಿಗೆ. ಹತ್ತಿರದ ಗುಡ್ಡದ ಕಡೆ ಓಡುವುದು, ಗೇರುಬೀಜ, ಮಾವಿನಕಾಯಿಗಳನ್ನು ಕಿತ್ತುಕೊಂಡು ತಿನ್ನುವುದು, ನದಿಯ ಕಲ್ಲಿಗೆ ಅಂಟಿಕೊಂಡಿದ್ದ

ಚಿಪ್ಪನ್ನು ಕತ್ತಿಯಿಂದ ಕೆತ್ತಿ ತೆಗೆದು ಮನೆಗೆ ತಂದು ಬೇಯಿಸಿ ಅದರೊಳಗಿನ ಮಾಂಸ ಬಗೆದು ಪಲ್ಯ ಮಾಡುವುದು, ಚಿಪ್ಪಿನ ಮೀನನ್ನು ತೆಗೆದುತರುವುದು ಹೀಗೆ ಬಾಲ್ಯ ದಿಂದಲೇ ನಸೀಮ ಪ್ರಕೃತಿಯೊಂದಿಗೆ ಬೆಳೆದವಳು.

ಗಂಡನ ಮನೆಯಲ್ಲಿನ ಬಡತನ, ಸುತ್ತಮುತ್ತಲಿನ ಕೊಳಕುತನ, ಅತ್ತೆಯ ಕ್ರೂರತನ, ಗಂಡನ ಸಣ್ಣತನಗಳಿಂದ ನಸೀಮ ನೋವಿನ ಕುಲುಮೆಯಲ್ಲಿ ಸಿಕ್ಕಿ ತತ್ತರಿಸು ತ್ತಾಳೆ. ಹದಿನಾಲ್ಕನೇ ವರ್ಷದಲ್ಲೇ ಒಂದು ಮಗುವಿನ ತಾಯಿಯಾಗುತ್ತಾಳೆ. ಅತ್ತೆಯ ಮೌಢ್ಯತೆಯಿಂದ ತನ್ನ ಮಗಳು ಸತ್ತುಹೋದಾಗ ಬರದ ಕ್ಷಾಮದಲ್ಲಿ ತತ್ತರಿಸುವ ಭೂಮಿಯಂತೆ ಬಾಯಿಬಿಡುತ್ತಾಳೆ. ಬೀಡಿಕಟ್ಟುತ್ತಾ ತನ್ನೆಲ್ಲ ಕನಸುಗಳನ್ನು ಮರೆಯು ತ್ತಾಳೆ. ರೋಸಿಯೆಂಬ ಮಗಳನ್ನು, ಇಕ್ಬಾಲ್ ಎಂಬ ಮಗನನ್ನು ಹೆತ್ತು ಹದಿನಾರರ ಹರೆಯದಲ್ಲೇ ಮುದುಕಿಯಾಗುತ್ತಾಳೆ. ಗಂಡನ ಮನೆಯ ರೋಗಗ್ರಸ್ತ ವಾತಾವರಣ ದಲ್ಲಿ ನಸೀಮ ರೋಗಿಯಾಗುತ್ತಾಳೆ.

'ಗಂಡ'‚ 'ತಲಾಕ್', 'ಸಂಸಾರ', 'ಸಮಾಜ' ಇವೆಲ್ಲವನ್ನೂ ಮೀರಿ ಬೆಳೆಯು ತ್ತಾಳೆ. ಮುಗ್ಧೆಯಾಗಿದ್ದ ನಸೀಮ ಇಡೀ ಸಮಾಜ ವ್ಯವಸ್ಥೆಯನ್ನೇ ಅಲ್ಲಾಡಿಸಿ ಬಿಡುವ ಧೀರೋದಾತ್ತೆಯಾಗಿ ಕಾಣುತ್ತಾಳೆ.

ತನ್ನೆದುರಿಗೆ ತನ್ನ ಗಂಡ ಮತ್ತೊಬ್ಬಳನ್ನು ಮದುವೆಯಾಗಿ ಕರೆತಂದಾಗ ನಸೀಮಳ ಬಾಳು ಧಗಧಗಿಸಿ ಉರಿಯತೊಡಗುತ್ತದೆ. ಅಲ್ಲಿಂದ ಸಹನೆಯ ಮುಸುಕನ್ನು ಹರಿದು ಹೊರಬರುತ್ತಾಳೆ. ಕೊನೆಯ ಹಂತದಲ್ಲಿ ಗಂಡನಬೆದರಿಕೆಗೆ ಬಗ್ಗಲಾರದೆ, ಸಮಾಜವ್ಯವಸ್ಥೆಯ ಅನಿಷ್ಟಗಳಿಗೆ ಕುಗ್ಗಲಾರದೆ ಬಂದುದ್ದನ್ನು ಎದುರಿಸಿ ಮುನ್ನಡೆ ಯುವ ಭೋರ್ಗರೆಯುವ ನದಿಯಾಗುತ್ತಾಳೆ.

ಈ ಚಿಕ್ಕಹುಡುಗಿಯ ಮನಸ್ಸಿನಲ್ಲಿದ್ದ ಮೂರು ಸಣ್ಣ ಆಸೆಗಳನ್ನು ನೆರವೇರಿಸ ಲಾರದ ಭ್ರಷ್ಟವ್ಯವಸ್ಥೆ ಇದೆಂಬುದನ್ನು ಕಾದಂಬರಿ ಸ್ಪಷ್ಟವಾಗಿ ನಿರೂಪಿಸಿದೆ. ತಾನು ದೂರದಿಂದ ಕಂಡ ರೈಲುಗಾಡಿಯಲ್ಲಿ ಕುಳಿತು ಉಳ್ಳಾಲದ ದರ್ಗಾಕ್ಕೆ ಹೋಗಬೇಕು; ತಾನೊಂದು ಆಡನ್ನು ಸಾಕಿ ಅದರ ಹಾಲನ್ನು ತಾನೇ ಕರೆಯಬೇಕು; ತನಗೊಂದು ಕೆಂಪು ರೇಶ್ಮೆಯ ಜರಿಯ ಹೂವಿನ ಲಂಗ ಹೊಲಿಸಬೇಕು—ಈ ಮೂರು ಪುಟ್ಟ ಆಸೆ ಗಳನ್ನು ಈಡೇರಿಸದ ಈ ವ್ಯವಸ್ಥೆಯ ಸ್ವಾರ್ಥತನವನ್ನು ಕಾದಂಬರಿ ವಿವರವಾಗಿ ವಿಶ್ಲೇಷಿಸಿದೆ.

ಪಾಷಾ ಮತ್ತೊಂದು ಮದುವೆಯನ್ನು ಮಾಡಿಕೊಂಡು ಬಂದಾಗ ನಸೀಮ ಪರಿತಪಿಸುತ್ತಿರುವ ಚಿತ್ರಣವನ್ನು ಲೇಖಕಿ ತುಂಬಾ ಪರಿಣಾಮಕಾರಿಯಾಗಿ ಹೇಳಿದ್ದಾರೆ.

ಕೇವಲ ಕ್ಷಮಾಧರಿತ್ರಿಯಾಗಿದ್ದರೆ ಅಥವಾ ಬರಿ ಸಹನಾ ಹಾಗೇ ಉಳಿದಿದ್ದರೆ ನಸೀಮಳಂತವರ ಬದುಕು ಅಯ್ಯೋ ಎನ್ನಿಸಿ ಮರೆತುಬಿಡಬಹುದಾಗಿತ್ತು. ಆದರೆ, ಲೇಖಕಿ ಇಲ್ಲಿ ನಸೀಮಳನ್ನು ಮನುಷ್ಯ ಚೇತನದ ಸಂಕೇತವನ್ನಾಗಿ ಮಾಡಿದ್ದಾರೆ; ಸಹನೆಯನ್ನು ಮೀರಿ ಸ್ಫೋಟಗೊಳ್ಳುವ ಬದುಕಿನ ಛಲಗಾರ್ತಿಯನ್ನಾಗಿ ಮಾಡಿದ್ದಾರೆ.

ಮನುಷ್ಯನ ನೋವಿನ ಬದುಕೇ ಬಂಡಾಯದ ಪಾಠವನ್ನು ಹೇಳಿಕೊಡುತ್ತದೆಂಬುದಕ್ಕೆ ಈ ಕಾದಂಬರಿಯಲ್ಲಿ ಬರುವ ನಸೀಮ ಸ್ಪಷ್ಟ ಉದಾಹರಣೆಯಾಗಿದ್ದಾಳೆ. ಮುಸ್ಲಿಂ ಜನಾಂಗದ ಮೌಢ್ಯತೆಯ ಸಂಕೇತವಾಗಿ ಬರುವ ಪಾಷಾ ಕೊನೆಯ ಹಂತದಲ್ಲಿ ಅವಳನ್ನು ಹೆದರಿಸಲು ಪ್ರಯತ್ನಿಸುತ್ತಾನೆ. ಆಕೆ ಕೊಡುವ ಉತ್ತರ ಮುಸ್ಲಿಂ ಮಹಿಳೆಯರಿಗಷ್ಟೇ ಅಲ್ಲದೆ ಇಡೀ ಸ್ತ್ರೀ ಸಮೂಹಕ್ಕೆ ಅನುಕರಣೀಯವಾಗಿದೆ.

ಫಕೀರ್ ಮುಹಮ್ಮದ್ ಕಟ್ಪಾಡಿಯವರ 'ಸರಕುಗಳು' ಕಾದಂಬರಿ ಮುಸ್ಲಿಂ ಬಡಜನಾಂಗದ ನೋವಿನ ಕಥೆಯನ್ನು ತುಂಬಾ ಪರಿಣಾಮಕಾರಿಯಾಗಿ ಹೇಳುತ್ತದೆ. ಸಾರಾ ಅವರ ಎರಡೂ ಕಾದಂಬರಿಗಳಲ್ಲಿ ಮುಸ್ಲಿಂ ಜನಾಂಗದ ಸಂಪ್ರದಾಯಸ್ಥರ ಮೌಢ್ಯ–ಸ್ವಾರ್ಥ, ಸೇಡಿನಮನೋಭಾವ ನಿಚ್ಚಳವಾಗಿ ಕಂಡಿದ್ದರೆ, ಕಟ್ಪಾಡಿಯವರು ಇವೆಲ್ಲವುಗಳನ್ನು ವಿವರಿಸುತ್ತ ಮುಸ್ಲಿಂರಲ್ಲಿಯೇ ಇರುವ ಶ್ರೀಮಂತ–ಬಡವರ ನಡುವೆ ಇರುವ ಕಂದಕವನ್ನು ತೋರಿಸುತ್ತಾರೆ. ಜಾತಿಗಿಂತ ಈ ದೇಶದಲ್ಲಿ ವರ್ಗ ಹೇಗೆ ಪ್ರಮುಖ ಸಮಸ್ಯೆಯಾಗಬಲ್ಲದೆಂಬುದನ್ನು ಲೇಖಕರು ಇಲ್ಲಿ ಸೂಕ್ಷ್ಮವಾಗಿ ಹೇಳಿದ್ದಾರೆ. ಈ ದೇಶದಲ್ಲಿ ಜಾತಿ ದೊಡ್ಡ ಸಮಸ್ಯೆ ನಿಜ. ಆದರೆ ಅದಕ್ಕಿಂತಲೂ ಮುಖ್ಯವಾದ ಸಮಸ್ಯೆಯೆಂದರೆ ಆರ್ಥಿಕ ಅಸಮಾನತೆ. ಈ ಅಂಶವನ್ನು ಕಾದಂಬರಿ ಇಲ್ಲಿ ಪರೋಕ್ಷವಾಗಿ ಸೂಚಿಸಿದೆ. ಮುಸ್ಲಿಂ ಬಡಹೆಣ್ಣುಮಕ್ಕಳು, ಶ್ರೀಮಂತ ಅರಬರ ಸರಕುಗಳಾಗಿ ನರಳುವ ಚಿತ್ರಣವನ್ನು ಕಾದಂಬರಿಕಾರ ಪರಿಣಾಮಕಾರಿಯಾಗಿ ಮಾಡಿಸಿದ್ದಾರೆ.

ಬಡವಿಧವೆಯಾದ ಹಾಜೀಮ, ಹಫ್ಸಾ, ಜುಲೇಖಾ ಮತ್ತು ನಫೀಸಾ ಎಂಬ ಮೂರು ಹೆಣ್ಣುಮಕ್ಕಳನ್ನು ಬೆಳೆಸುವುದು ಈ ಸಮಾಜವ್ಯವಸ್ಥೆಯಲ್ಲಿ ಎಷ್ಟು ಕಷ್ಟಕರವಾದದ್ದೆಂಬ ಅಂಶವನ್ನು ಸ್ಪಷ್ಟಪಡಿಸಲಾಗಿದೆ. ಮುಮ್ಮಟ್ಟಿ ಎಂಬ ಹಾಜಿಮಳ ಗಂಡು ಮಗ ತಾನು ಮದುವೆಯಾದ ನಂತರ ಹೆಂಡತಿಯೊಂದಿಗೆ ಬೇರೆ ಸಂಸಾರ ಹೂಡಿದಾಗ, ಹಾಜಿಯು ತನ್ನ ಮುಪ್ಪಿನ ವಯಸ್ಸಿನಲ್ಲಿ ಮನೆಯ ಜವಾಬ್ದಾರಿ ಹೊರುತ್ತಾಳೆ. ಹಿರಿಯ ಮಗಳು ಜುಲೇಖಾ ಈಗಾಗಲೇ ಅರಬ ಶ್ರೀಮಂತರ ಹೆಂಡತಿಯಾಗಿ, ಅವರು ಈ ದೇಶಕ್ಕೆ ಬಂದಾಗ ಹೋಟೆಲ್‌ಗೆ ಹೋಗಿ ಅವರ ಆಸೆಯನ್ನು ಈಡೇರಿಸಿಬರುವ

ಶೂದ್ರ

ಅಸಹಾಯಕ ಹೆಣ್ಣಾಗಿ ಕಾಣುತ್ತಾಳೆ. ಈ ಶ್ರೀಮಂತ ಅರಬರು ಬಡಮುಸ್ಲೀಂ ಹೆಣ್ಣು ಮಕ್ಕಳೊಂದಿಗೆ ನಿಕಾಹದ ನಾಟಕವಾಡಿ, ಒಂದಿಷ್ಟು ಹಣವನ್ನು ಚೆಲ್ಲಿ ಅವರನ್ನು ಖರೀದಿಸುತ್ತಾರೆ.

ಮುಸ್ಲೀಂ ಜನಾಂಗದ ಹಾಜಿಮಳಂತಹ ಬಡ ವಿಧವೆಯ ನೋವಿನ ಚಿತ್ರಣ ಒಂದೆಡೆ ಇದ್ದರೆ, ಮತ್ತೊಂದೆಡೆ ಅದೇ ಜನಾಂಗದ ಸೈದುಕೋಯರಂತಹ ಶ್ರೀಮಂತರ ಬದುಕಿನ ಮಗ್ಗಲುಗಳನ್ನು ಪರಿಚಯಿಸಿದ್ದಾರೆ. ಸೈದುಕೋಯ ಶ್ರೀಮಂತನ ಹೆಂಡತಿ ಷರೀಪಮ್ಮ. ಅವರಿಗಿರುವ ಇಬ್ಬರು ಮಕ್ಕಳಲ್ಲಿ ಜುಬೇದಾಳಿಗೆ ಈಗಾಗಲೇ ಮದುವೆಯಾಗಿದೆ; ಸಲೀಮ ಮದುವೆಯ ವಯಸ್ಸಿಗೆ ಬಂದಿದ್ದಾನೆ. ಷರೀಫಮ್ಮನ ಮನೆಯಲ್ಲಿ ಮನೆಗೆಲಸ ಮಾಡಿಬದುಕುತ್ತಿದ್ದ ಹಾಜಿಮ, ತನ್ನ ಕೊನೆಯ ಮಗಳು ನಫೀಸಾಳನ್ನು ಆಗಾಗ ಆ ಕೆಲಸಕ್ಕೆ ಕಳಿಸುತ್ತಾಳೆ. ನಫೀಸಾಳ ಅಚ್ಚುಕಟ್ಟುತನ, ಅವಳ ಮುಗ್ಧ ಸೌಂದರ್ಯ, ಸರಳ ನಡೆ–ನುಡಿ ಸಲೀಮನಿಗೆ ತುಂಬಾ ಹಿಡಿಸುತ್ತವೆ. ಸಲೀಮ ನಫೀಸಾಳನ್ನು ಪ್ರೀತಿಸಲು ಪ್ರಾರಂಭಿಸುತ್ತಾನೆ. ಒಂದು ದಿನ ಮಳೆ ಸುರಿದು ರಾತ್ರಿಯಾದಾಗ, ನಫೀಸಾಳನ್ನು ಅವಳ ಮನೆಗೆ ಬಿಟ್ಟುಬರಲು ಷರೀಫಮ್ಮ ಸಲೀಮನನ್ನು ಕಳುಹಿಸುತ್ತಾಳೆ. ಎರಡು ಮುಗ್ಧ ಮನಸ್ಸುಗಳ ಪ್ರೀತಿ ಆ ಬೆಳದಿಂಗಳಲ್ಲಿ ಒಂದಾಗುತ್ತದೆ. ಅದನ್ನು ಲೇಖಕರು ಸುಂದರವಾಗಿ ಹೇಳುತ್ತಾರೆ.

ಆದರೆ ಈ ಬೆಳದಿಂಗಳ ಬೆಳಕು, ತೆಂಗಿನ ಗಿಡಗಳ ಸೊಗಸು ನಫೀಸಾಳ ಬದುಕಲ್ಲಿ ಹಸಿರಾಗಲಿಲ್ಲ. ಸಲೀಮ, ನಫೀಸಳನ್ನು ಪ್ರೀತಿಸುತ್ತಿದ್ದಾನೆಂಬ ಸುದ್ದಿ ತಿಳಿದ ತಕ್ಷಣವೇ ಸೈದುಕೋಯ ಸಿಡಿಮಿಡಿಗೊಂಡ. ಮನೆಗೆಲಸ ಮಾಡುವವಳ ಮಗಳನ್ನು ತನ್ನ ಸೊಸೆಯನ್ನಾಗಿ ತಂದುಕೊಳ್ಳುವುದು ಷರೀಪಮ್ಮನಿಗೆ ಸರಿಕಾಣಲಿಲ್ಲ. ಹೀಗಾಗಿ, ಆಕೆ ನಫೀಸಾಳನ್ನು ಮನೆಗೆಲಸದಿಂದ ಬಿಡಿಸಿದಳು. ಸೈದುಕೋಯ ತನ್ನ ಅಂತಸ್ತಿಗೆ ತಕ್ಕುದಾದ ಸುಲೇಮಾನ್ ಹಾಜಿಯೊಡನೆ ಸಂಬಂಧ ಬೆಳೆಸಿ ಆತನ ಮಗಳು ಆಯೇಷಾಳೊಡನೆ ಸಲೀಮನಿಗೆ ಒತ್ತಾಯದ ಮದುವೆ ಮಾಡಿದ. ಇತ್ತ ನಫೀಸಾ ಬಡತನದ ಬದುಕಿನಲ್ಲಿ ಬೆಂದು ಬಸವಳಿಯತೊಡಗಿದಳು.

ಈ ಸನ್ನಿವೇಶವನ್ನು ಲೇಖಕರು ತುಂಬಾ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಮುಸ್ತಫಾ ಎಂಬ ಈ ಮುದಿ ಅರಬ ಹಿಂದೆ ನಫೀಸಾಳ ತಾಯಿಯಾದ ಹಾಜಿಮಳೊಂದಿಗೆ ನಿಕಾಹ್ ಮಾಡಿಕೊಂಡು ಸುಖಪಟ್ಟು ಅವಳಿಗೆ ತಲಾಕ್ ಕೊಟ್ಟು ಹೋಗಿದ್ದ. ಈಗ ಅದೇ ಹಣದ ಚೀಲದೊಂದಿಗೆ ಆಕೆಯ ಮಗಳು ನಫೀಸಾಳನ್ನು ನಿಕಾಹ್ ಮಾಡಿಕೊಳ್ಳಲು ಬಂದಿರುವ ದೃಶ್ಯ ಕರುಳು ಕೊರೆಯುವಂತಿದೆ. ಮುಸ್ತಫಾನ ಮುದಿ ಮುಖ

ವನ್ನು ಕಂಡ ಹಾಜಿಯು ಇವನೇ ತನ್ನ ಹಿಂದಿನ ಪತಿಯೆಂದು ಚೀರುವುದು, ಅಲ್ಲಿಗೆ ನಫೀಸಾಳ ನಿಕಾಹ್ ಮುರಿದುಬೀಳುವುದು, ಅರಬ್ ಮುಸ್ತಫಾ ಒಂದಿಷ್ಟು ಹಣ ಕೊಟ್ಟು ಅಲ್ಲಿಂದ ಪಾರಾಗುವುದು—ಈ ಎಲ್ಲ ಸನ್ನಿವೇಶಗಳು ಈ ದೇಶದ ಬಡವರ ಬದುಕಿನ ದುರಂತವನ್ನು ಹೇಳುತ್ತವೆ.

ನಫೀಸಾ-ಹಾಜಿಮರಂತಹ ಬಡಹೆಣ್ಣುಮಕ್ಕಳಿಗೆ ಒಂದುರೀತಿಯಿಂದ ತಮ್ಮ ಪಕ್ಕದ ಶ್ರೀಮಂತರಾದ ಸೈದುಕೋಯರಿಂದ ಶೋಷಣೆ ನಡೆದರೆ, ಅರಬ್ ದೇಶದ ಮುಸ್ತಫಾರಂತಹ ಶ್ರೀಮಂತರಿಂದ ಮತ್ತೊಂದು ರೀತಿಯ ಶೋಷಣೆ ನಡೆದಿದೆ. ಅಚ್ಚುಕೋಯಿನಂತವರು ಈ ಸಮಾಜ ವ್ಯವಸ್ಥೆಯ ಪ್ರತಿನಿಧಿಗಳಂತೆ ಕಾಣಿಸುತ್ತಾರೆ. ಇಲ್ಲಿ ಶೋಷಣೆಗೊಳಗಾದವರು, ಶೋಷಣೆ ಮಾಡುವವರು, ಶೋಷಣೆಗೆ ಕಾರಣ ರಾದವರು ಎಲ್ಲರೂ ಮುಸ್ಲಿಂರೇ ಆದರೂ ಇವರಿಗೆ ತಮ್ಮ ಜನರ ಅಭಿಮಾನಕ್ಕಿಂತ ಹಣದ ಅಭಿಮಾನ, ಅಂತಸ್ತಿನ ಅಭಿಮಾನ ದೊಡ್ಡದೆನಿಸುತ್ತದೆ.

ಸುಲೇಮನ್‌ಹಾಜಿ ತನ್ನ ಮನೆಯಲ್ಲಿಯೇ ತನ್ನ ಅಳಿಯ ಬಂದಿರಬೇಕೆಂಬ ಮಾತನ್ನು ಸಲೀಮಾ ಒಪ್ಪದಾಗುವುದು, ಒತ್ತಾಯದಿಂದ ಮಾಡಿದ ನಿಕಾಹ್ ಮುರಿದು ಬೀಳುವುದು, ಸಲೀಮ ಆಯೇಷಾಳಿಗೆ ತಲಾಕ್ ಕೊಡುವುದು. ಕೊನೆಗೆ, ತಾನು ಪ್ರೀತಿಸುತ್ತಿದ್ದ ನಫೀಸಾಳೊಂದಿಗೆ ನಿಕಾಹ್ ಮಾಡಿಕೊಳ್ಳಲು ಸಿದ್ಧವಾಗುವುದು ಕಾದಂಬರಿಯ ಮುಂದಿನ ಬೆಳವಣಿಗೆಗಳಾಗುತ್ತವೆ.

ಸಲೀಮ, ನಫೀಸಾಳನ್ನು ಮದುವೆಯಾಗಲು ಸಿದ್ಧನಾಗುವುದಷ್ಟೇ ಇಲ್ಲಿ ಪ್ರಮುಖ ವಾಗುವುದಿಲ್ಲ. ಗುಡಿಸಲುಗೇರಿಯ ಕಳೆಗುಂದಿದ ಮುಖಗಳಲ್ಲಿ ಹೊಸಬೆಳಕು ಒದ ಬೇಕೆಂಬ ಆಶಯವನ್ನು ಕಾದಂಬರಿ ಇಲ್ಲಿ ಮುಡಿದುಕೊಂಡಿರುವುದರಿಂದ ಕಟ್ಟಾಡಿ ಪ್ರಮುಖ ಲೇಖಕರಾಗಿ ಕಾಣುತ್ತಾರೆ. ಇಲ್ಲಿಯ 'ತಲಾಕ್' ಸಲೀಮನಂತವರಿಗೆ ವರ ದಾನವಾಗಿದೆ. ಎಳ್ಳಷ್ಟು ಪ್ರೀತಿಯಿಲ್ಲದವಳೊಡನೆ ಒತ್ತಾಯದ ಸಂಸಾರ ಮಾಡು ವುದಕ್ಕಿಂತ, ಮನಸ್ಸಿಗೆ ಒಪ್ಪಿಗೆಯಾದವಳನ್ನು ಮದುವೆಯಾಗಿ, ನೆಮ್ಮದಿಯ ಬದುಕನ್ನು ಸಾಗಿಸುವುದು ತುಂಬಾ ಮುಖ್ಯವಾಗುತ್ತದೆ.

ಬೋಳುವಾರು ಮುಹಮದ್ ಕುಂಞ ಈ ಎಲ್ಲ ಲೇಖಕರಿಗಿಂತ ತುಂಬಾ ವಿಶಿಷ್ಟ ವಾಗಿ ಕಾಣುತ್ತಾರೆ. ವಿನೋದದ ಮಾತುಗಳನ್ನಾಡುತ್ತಲೇ ನೋವಿನ ಆಳವನ್ನು ತೆರೆದುತೋರಿಸುತ್ತಾರೆ. ಸಮಾಜ ವ್ಯವಸ್ಥೆಯ ಕರಾಳ ಸ್ವರೂಪವನ್ನು ಕಂಡು ಕಿಡಿ ಕಾರುತ್ತ ಸೇಡಿನಮನೋಭಾವ ಹುಟ್ಟಿಸುವ ಬದಲು, ವಿಷಾದ ವ್ಯಕ್ತಪಡಿಸುತ್ತಲೇ

ಶೂದ್ರ

ಬದುಕಿನ ಅನಿವಾರ್ಯತೆಯನ್ನು ಒತ್ತಿಹೇಳುತ್ತಾರೆ. ಬಂಡಾಯದ ಲೇಖಕರಲ್ಲಿಯೇ ಬೊಳುವಾರು ತನ್ನ ವಿಶಿಷ್ಟ ಮುದ್ರೆಯನ್ನು ಮೂಡಿಸುವುದು ಈ ಕಾರಣಗಳಿಂದ.

'ಜೆಹಾದ್' ಅವರ ಮೊದಲ ಕಾದಂಬರಿಯಾಗುವುದರ ಜತೆಗೆ ಮಹತ್ವದ ಕಾದಂಬರಿಯೂ ಆಗಿದೆ. ಮುತ್ತಪ್ಪಾಡಿಯ ರಹೀಂ ಸಾಹುಕಾರರ ದಬ್ಬಾಳಿಕೆ–ಸಣ್ಣತನ ಗಳನ್ನು, ಕರೀಂಖಾನರ ಮಾನವೀಯತೆ–ವಿಶಾಲತೆಗಳನ್ನು; ಕಾಸಿಂನ ಪ್ರಾಮಾಣಿಕತೆ ಯನ್ನು, ಸಲೀನ ಟೀಚರ್ ಅವರ ಪ್ರೀತಿ-ತ್ಯಾಗದ ನಡುವೆ ಸ್ನೇಹ ಸೇತುವೆಯಾದ ಜೀವನಪ್ರೀತಿಯನ್ನು ಹೇಳುತ್ತಲೇ ರಷೀದನನ್ನು ಬಂಡಾಯಗಾರನನ್ನಾಗಿ ಲೇಖಕರು ರೂಪಿಸುತ್ತಾರೆ; ಪ್ರೈಚಳಿಬಿಟ್ಟು ಬದುಕುವಂತೆ ಸಲ್ಮಾಳನ್ನು ಸಿದ್ಧಗೊಳಿಸುತ್ತಾರೆ.

ಆಮಿನಮ್ಮ ತೀರಿಕೊಂಡಾಗ ರಷೀದ-ಸಲ್ಮಾ, ಅಣ್ಣತಂಗಿಯರು ಅನಾಥರಾಗು ತ್ತಾರೆ. ಮುತ್ತಪ್ಪಾಡಿಯ ಜಮಾತಿನ ಪ್ರೆಸಿಡೆಂಟ್ ರಹೀಂ ಸಾಹುಕಾರರು ತಮ್ಮ ಗತ್ತಿ ನಲ್ಲಿ, ಧರ್ಮದ ಹೆಸರಿನಲ್ಲಿ ರಷೀದನನ್ನು ಹತ್ತಿಕ್ಕಲು ಪ್ರಯತ್ನಿಸುತ್ತಾರೆ. ಆಗ ಕರೀಂ ಖಾನರ ಸಹಾಯದಿಂದ ಸಲೀನ ಟೀಚರ್ ರಷೀದ–ಸಲ್ಮಾರನ್ನು ತನ್ನ ಮನೆಗೆ ಕರೆದು ಕೊಂಡುಹೋಗಿ ಪಾಲನೆ ಪೋಷಣೆ ಮಾಡುವುದು; ಅವರಿಬ್ಬರನ್ನು ಮತೀಯ ಕಂದಕ ದಿಂದ ಬಿಡಿಸಿಕೊಂಡು ಬಂದು ಶಿಕ್ಷಣ ನೀಡಿ ಸ್ವತಂತ್ರವಾಗಿ ಬೆಳೆದುನಿಲ್ಲುವಂತೆ ಸಜ್ಜು ಗೊಳಿಸುವುದೂ ತುಂಬಾ ಮುಖ್ಯವೆನಿಸುತ್ತದೆ. ಜಮಾತಿನ ಹಿರಿಯ ಸದಸ್ಯರಾದ ಕರೀಂ ಖಾನರು ಅದೇ ಜನಾಂಗದವರಾದರೂ ಅವರು ಗುಣ–ಸ್ವಭಾವಗಳಿಂದ ರಹೀಂ ಸಾಹುಕಾರ ರಿಗಿಂತ ತುಂಬಾ ಭಿನ್ನವಾಗಿ ಕಾಣುತ್ತಾರೆ.

ರಹೀಂ ಸಾಹುಕಾರ ತಾನು ಜಮಾತಿನ ಪ್ರೆಸಿಡೆಂಟ್ ಎಂಬ ಸೊಕ್ಕಿನಿಂದ ಮೆರೆದರೆ, ಅದೇ ಜಮಾತಿನ ಸದಸ್ಯರಾಗಿ ಕರೀಂಖಾನರು ಧರ್ಮದ ಹೆಸರಿನಲ್ಲಿ ನಡೆಯುವ ಮತೀಯ ಸಣ್ಣತನಗಳನ್ನು ವಿರೋಧಿಸುತ್ತಾರೆ; 'ಖಾನಜ್ಜ' ಎಂದು ಎಲ್ಲರ ಗೌರವಕ್ಕೆ ಪಾತ್ರರಾಗುತ್ತಾರೆ. ಮಾನವೀಯತೆಗಿಂತ ಮಿಗಿಲಾದದ್ದು ಮತ್ತೊಂದು ಧರ್ಮ ವಿಲ್ಲವೆಂಬ ಮಾತನ್ನು ಈ ಕಾದಂಬರಿಯಲ್ಲಿನ ಕರೀಂಖಾನ ಮತ್ತು ಸಲೀನ ಟೀಚರ್ ಪಾತ್ರಗಳು ತೋರಿಸಿಕೊಟ್ಟಿವೆ. ಕರೀಂಖಾನ ಮುಸ್ಲಿಂ ಜನಾಂಗಕ್ಕೆ ಸೇರಿದರೂ, ಸಲೀನ ಕ್ರಿಶ್ಚಿಯನ್ ಧರ್ಮದವಳಾದರೂ ಅವರಿಬ್ಬರಲ್ಲಿ ಸ್ಫುರಿಸುವ ಮಾನವೀಯತೆ ಪ್ರೀತಿ-ತ್ಯಾಗದ ಗುಣಗಳೇ ನಿಜವಾದ ಧರ್ಮಗಳೆಂಬುದನ್ನು ಸೂಚಿಸಲಾಗಿದೆ, ಅವರಿಬ್ಬರ ಬೆಳಕಿನಲ್ಲಿ ರಷೀದ ಮತ್ತು ಸಲ್ಮಾ ಬೆಳೆದುನಿಲ್ಲುವುದು ಇಲ್ಲಿ ತೀರಾ ಮುಖ್ಯವಾಗುತ್ತದೆ.

ತಾನು ಮತ್ತು ತನ್ನ ತಂಗಿ ಶಾಲೆಗೆ ಹೋಗಬಾರದು ಎಂಬುದು ರಹೀಂ ಸಾಹುಕಾರರ ಆಜ್ಞೆ. ಆದರೆ, ರಷೀದ ಆ ಆಜ್ಞೆಯನ್ನು ಮುರಿಯುವುದರ ಮೂಲಕ ಸಂಪ್ರದಾಯ ಮತ್ತು ಹೊಸಬೆಳವಣಿಗೆಯ ನಡುವೆ ಇರುವ ಅಂತರವನ್ನು ಸ್ಪಷ್ಟ ಪಡಿಸುತ್ತಾನೆ. ತಾನು ಕ್ರಿಶ್ಚಿಯನ್ನರ ಮನೆಯಲ್ಲಿದ್ದು ಕಾಫರ್‌ನೆಂದೆನಿಸಿಕೊಂಡರೂ ಇದ್ದಲ್ಲಿಯೇ ನಮಾಜು ಮಾಡುತ್ತಾನೆ. ಇತ್ತ ಧರ್ಮದ ಚೌಕಟ್ಟಿನಿಂದ ಸಂಪೂರ್ಣ ಬಿಡಿಸಿಕೊಳ್ಳಲಾರದೆ, ಅತ್ತ ಪ್ರಗತಿಪರ ಆಲೋಚನೆಯನ್ನು ಬಿಟ್ಟುಕೊಡದೆ ರಷೀದ ಸಂಕ್ರಮಣ ಸ್ಥಿತಿಯಲ್ಲಿ ಸಿಲುಕುತ್ತಾನೆ. ಆದರೆ, ಅದೇ ಸಲ್ಮಾ ಮೌನವಾಗಿದ್ದು ಕೊಂಡೇ ಇದೆಲ್ಲವನ್ನೂ ದಾಟಿ ಮುಂದೆಹೋಗುತ್ತಾಳೆ. ಕಾಸಿಂನಂತಹ ಸೈಕಲ್ ರಿಪೇರಿ ಅಂಗಡಿಯ ಹುಡುಗ ಬದುಕಿನಿಂದ ಕಲಿತಪಾಠದಿಂದ ಸತ್ಯದ ಸಿದ್ಧಾಂತಗಳನ್ನು ಹುಟ್ಟು ಹಾಕುತ್ತಾನೆ.

ಈ ಕಾದಂಬರಿಯಲ್ಲಿ ಕೇವಲ ಕಥೆಯಿಲ್ಲ; ನಾಯಕ-ಖಳನಾಯಕರ ಘರ್ಜನೆ ಯಿಲ್ಲ, ಬದುಕಿನ ಹುಡುಕಾಟವಿದೆ; ವ್ಯವಸ್ಥೆಯನ್ನು ಅರ್ಥೈಸಿಕೊಳ್ಳುವ ಶಿಸ್ತಿನ ಕ್ರಮ ವಿದೆ. ಅಂತೆಯೇ, ಇಲ್ಲಿ ಸೋಲು–ಗೆಲುವುಗಳಿಲ್ಲ. ಮೇಲುಕೀಳುಗಳಿಲ್ಲ. ಅರಿವಿನ ಸ್ಫೋಟವಿದೆ, ಮಾನವೀಯತೆಯ ಮೊರೆತವಿದೆ. ಹೀಗಾಗಿ, ಜೆಹಾದ್ ಉಳಿದ ಕೃತಿ ಗಳಿಗಿಂತ ತುಂಬಾ ವಿಶಿಷ್ಟವಾಗಿ ಕಾಣುತ್ತದೆ. ಸ್ವರ್ಗ–ನರಕ, ಸಂಪ್ರದಾಯ–ಮೌಢ್ಯಾ ಚರಣೆ ಪ್ರತಿಯೊಂದನ್ನು ಪ್ರಶ್ನಿಸುವ ರಷೀದ, ಏನೂ ಪ್ರಶ್ನಿಸದ ಸಲ್ಮಾ ಮತ್ತು ಕಾಸಿಂರಷ್ಟು ಎತ್ತರವಾಗಿ ಬೆಳೆಯದೇ ಇರುವುದು ಹೆಚ್ಚಿನ ಕುತೂಹಲವನ್ನು ಹುಟ್ಟಿಸು ತ್ತದೆ.

ಹೀಗೆ, ಈ ಕಾದಂಬರಿಯ ನಾಯಕ ಸಂಪ್ರದಾಯವನ್ನು ಸಂಪೂರ್ಣ ತಿರಸ್ಕರಿ ಸದೆ, ಆದರೆ, ಅದನ್ನು ಒಪ್ಪದೆ; ಧಾರ್ಮಿಕ ಆಚರಣೆಗಳನ್ನು ಆಚರಿಸುತ್ತಲೇ, ವೈಚಾರಿಕತೆಯನ್ನು ಬಿಟ್ಟುಕೊಡದೆ ಬದುಕಿನ ದ್ವಂದ್ವಸ್ಥಿತಿಯಲ್ಲಿ ಮುಳುಗುತ್ತಾನೆ. ನೌಕರಿ ಸಲುವಾಗಿ ಸಲೀನ ಟೀಚರ್ ಸಲಹೆಯಂತೆ–ಮುಂದೆ ಈತ ಮಂಗಳೂರಿಗೆ ಹೋದಾಗ ರೋಸಿಯ ಎದುರು ಸಣ್ಣವನಾಗಿ ಕಾಣಿಸುತ್ತಾನೆ. ಪೀಟರ್‌ನ ಮಾತನ್ನು ಒಪ್ಪಿಕೊಳ್ಳುತ್ತಾನೆ. ಮುತ್ತಪ್ಪಾಡಿಯಲ್ಲಿ ತುಂಬಾ ಪ್ರಗತಿಪರನಂತೆ ಕಾಣುವ ಈತ ಮಂಗಳೂರಲ್ಲಿ ರೋಸಿ-ಪೀಟರ್ ಎದುರುಗಡೆ ವಿಶಿಷ್ಟನಾಗಿ ಕಾಣುವುದಿಲ್ಲ. ಮುಸ್ಲಿಂ ಜನಾಂಗದಲ್ಲಿ ಬೇರುಬಿಟ್ಟಿರುವ ಗೊಡ್ಡು ಸಂಪ್ರದಾಯಗಳನ್ನು ರಷೀದ ತಿರಸ್ಕರಿಸಬಲ್ಲ. ಆದರೆ, ಕ್ರಿಶ್ಚಿಯನ್ ಜನಾಂಗದಲ್ಲಿ ಇರುವ ಸಾಮಾಜಿಕ ಸಮಾನತೆ-ಹೃದಯ ವೈಶಾಲ್ಯತೆ ಯನ್ನು ಆತ ತಲುಪಲಾರ. ರೋಸಿ ಚೆಲ್ಲುಚೆಲ್ಲಾಗಿ ವರ್ತಿಸುವುದು ಆತನಿಗೆ ಹಿಡಿಸು ವುದಿಲ್ಲ. ಆದರೆ, ರೋಸಿಯಿಂದ ದೂರ ಇರಲಾರ.

ಶಿ.ನ.ಗ

ರಷೀದ್ ವ್ರತ ಆಚರಿಸುವ ಸಂದರ್ಭದಲ್ಲಿ ಆಶಕ್ತತೆಯಿಂದ ಕಾನ್ವೆಂಟಿನಲ್ಲಿ ಪ್ರಜ್ಞೆ ಕಳೆದುಕೊಂಡು ಬಿದ್ದುಬಿಟ್ಟಾಗ ಪೀಟರ್ ಕೇಳುವ ಪ್ರಶ್ನೆಗಳು ರಷೀದನಿಗೆ ಸರಿಯೆನಿಸುತ್ತವೆ. ತನ್ನ ಹಠದಿಂದ ತಾನು ಎಲ್ಲರೆದುರು ಸಣ್ಣವನಾಗಿಬಿಟ್ಟೆ ಎಂಬ ಭಾವವು ರಷೀದನಲ್ಲಿ ಮೂಡುವುದು ಮುಖ್ಯವಾಗುತ್ತದೆ. ನನ್ನವರು ಎಂದು ಹೇಳಿಕೊಳ್ಳುವವರಾರೂ ಇಲ್ಲದಿರುವಾಗ ದೇವರನ್ನು ಇಲ್ಲವಾಗಿಸುವುದು ತನಗೆ ಸಾಧ್ಯವಿಲ್ಲವೆಂದಾಗ ಪೀಟರ್ ಹೇಳುವ ಮಾತುಗಳು ತುಂಬಾ ಗಮನಾರ್ಹವಾಗಿವೆ.

ಪೀಟರ್‌ನ ಈ ಮಾತುಗಳು ಲೇಖಕರ ಮೂಲ ಆಶಯಗಳಾಗಿವೆ. ಲೇಖಕ ಇಲ್ಲಿ ಪೀಟರ್‌ನ ಮೂಲಕ, ಕಾಸಿಂನ ಮೂಲಕ, ಸಲ್ಮಾಳ ಮೂಲಕ–ರಷೀದ್‌ನ ವ್ಯಕ್ತಿತ್ವವನ್ನು ಅಲ್ಲಾಡಿಸುವುದರ ಮೂಲಕ ಮಾನವೀಯ ಸಂಬಂಧಗಳ ಮಹತ್ವವನ್ನು ಎತ್ತಿ ಹಿಡಿಯುತ್ತಾರೆ. ಮುಸ್ಲೀಂ ಜನಾಂಗದ ಸಂಸ್ಕೃತಿಯಿಂದ ಬಂದ ಲೇಖಕನೊಬ್ಬ ಈ ಧರ್ಮ–ಮತಗಳ ಗೊಡ್ಡುತನಗಳನ್ನು ವಿನೋದದಿಂದ ತಿರಸ್ಕರಿಸುತ್ತಲೇ ಮಾನವೀಯತೆಯನ್ನು ಅಪ್ಪಿಕೊಳ್ಳುವುದು, ಪ್ರೀತಿಯ ಅನಂತತೆಯನ್ನು ಒಪ್ಪಿಕೊಳ್ಳುವುದು ಈ ದೇಶದ ಚರಿತ್ರೆಯಲ್ಲಿ ತುಂಬಾ ಮಹತ್ವದ ಸಂಗತಿಯಾಗುತ್ತದೆ. ಈ ಕಾರಣಗಳಿಂದಾಗಿಯೇ ಸಮಗ ಕುಂಞ ಒಬ್ಬ ದೊಡ್ಡ ಸಾಹಿತಿಯಾಗಿ ದೊಡ್ಡ ಮನುಷ್ಯನಾಗಿ ಕಾಣಿಸುವುದು.

ಸೈಕಲ್ ರಿಪೇರಿ ಮಾಡುತ್ತಾ ಜೀವನ ಸಾಗಿಸುವ ಮುತ್ತಪ್ಪಾಡಿಯ ಗೆಳೆಯ ಕಾಸೀಂನನ್ನು ರಷೀದ್ ತನ್ನ ತಂಗಿಯನ್ನು ಮದುವೆಯಾಗಲು ಕೇಳಿಕೊಂಡಾಗ, ಧರ್ಮ ಸಮಾಜಕ್ಕೆ ಹೆದರಿ ತನ್ನನ್ನು ಪ್ರೀತಿಸುತ್ತಿರುವ ರೋಸಿಯನ್ನು ಕೈಬಿಡುವ ಪ್ರಸಂಗ ಬಂದಿದೆಯಲ್ಲಾ ಎಂದು ವಿವರಿಸುವಾಗ ಕಾಸೀಂ ಕೊಡುವ ಉತ್ತರಗಳು ತುಂಬಾ ಗಮನಾರ್ಹವಾಗಿವೆ.

ತಾನು ಪ್ರಗತಿಪರ ಎಂದು ತೋರಿಸಿಕೊಂಡ ರಷೀದ್ ಸಾಧಿಸದೇ ಇದ್ದುದನ್ನು, ಮೌನವಾಗಿದ್ದುಕೊಂಡೇ ಸಾಧಿಸಿದ ಸಲ್ಮಾ ಮತ್ತು ಕಾಸಿಂ ಈ ಕಾರಣಕ್ಕಾಗಿ ಇಲ್ಲಿ ಮುಖ್ಯರಾಗುತ್ತಾರೆ. ಆದರೆ, ಕೊನೆಗೆ ರಷೀದ್ ಈ ಎರಡು ಪಾತ್ರಗಳ ಮೂಲಕ ತನ್ನ ತಪ್ಪನ್ನು ತಿದ್ದಿಕೊಂಡು ಮುನ್ನಡೆಯುವದು ಪ್ರಮುಖವಾಗುತ್ತದೆ. ನಿಜವಾದ ಬಂಡಾಯ ಬದುಕಿನ ಆಚರಣೆಯಲ್ಲಿರುತ್ತದೆಂಬುದನ್ನು ಈ ಕಾದಂಬರಿ ಸ್ಪಷ್ಟಪಡಿಸುತ್ತದೆ.

ಈ ಕಾದಂಬರಿಗಳ ಶೈಲಿ ಮತ್ತು ಇಲ್ಲಿ ಬಳಸಲಾದ ಭಾಷೆ ಕನ್ನಡಕ್ಕೆ ಹೊಸತನ

ವನ್ನು ತಂದುಕೊಟ್ಟಿದೆ. ಹಿಂದೂ–ಮುಸ್ಲೀಂ ಸಂಸ್ಕೃತಿಯ ಸಂವಹನ ಕ್ರಿಯೆಯಲ್ಲಿ ಅನೇಕ ನುಡಿಗಟ್ಟುಗಳು ಹುಟ್ಟಿಕೊಂಡು ಕನ್ನಡ ಭಾಷೆಯ ವಿಸ್ತಾರವನ್ನು ಹೆಚ್ಚಿಸಿವೆ. ಈ ಲೇಖಕರು ತಮ್ಮ ಜನಾಂಗದ ಬದುಕಿನ ನೋವು-ನಲಿವುಗಳನ್ನು ಇಲ್ಲಿ ಕಥೆಯಾಗಿ ಸಿರುವುದರಿಂದ ಸಹಜವಾಗಿಯೇ ಆ ಜನಾಂಗದ ಭಾಷೆ ಮತ್ತು ಸಂಸ್ಕೃತಿ ಇಲ್ಲಿ ದಾಖಲೆಯಾಗಿದೆ. ಭಾಷೆ–ವಸ್ತು-ಧೋರಣೆಗಳಲ್ಲಿ ಗಮನಾರ್ಹ ಬದಲಾವಣೆಯನ್ನು ಕಂಡ ನವ್ಯೋತ್ತರ ಕನ್ನಡ ಸಾಹಿತ್ಯ, ಕೇವಲ ಕನ್ನಡಿಗರಿಗಷ್ಟೇ ಸೀಮಿತವಾಗದೆ ಮನುಷ್ಯ ಜನಾಂಗದ ಬದುಕಿನ ಒಳನೋಟಗಳನ್ನು ಪರಿಚಯಿಸುತ್ತದೆ.

ಇಲ್ಲಿಯ ಲೇಖಕರಲ್ಲಿ ಸಾರಾ ಅಬೂಬಕರ್ ಅವರ ಶೈಲಿ ತುಂಬಾ ಸರಳ ಮತ್ತು ಸುಂದರ. ಕಟ್ಪಾಡಿಯವರ ಶೈಲಿ ಸಂಕೀರ್ಣವಾದರೆ, ಬೊಳುವಾರು ಅವರ ಶೈಲಿ ಕನ್ನಡಕ್ಕೆ ವಿಶಿಷ್ಟವೆನ್ನಿಸುತ್ತದೆ. ಕಾದಂಬರಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ದಲಿತರ ಬದುಕಿನ ಒಳನೋಟಗಳನ್ನು ಅವರ ನೋವು–ನಲಿವುಗಳನ್ನು ತುಂಬಾ ಕಲಾತ್ಮಕವಾಗಿ ಹೇಳಿದ ದೇವನೂರು ಮಹದೇವ ಮತ್ತು ಮನಜ ಅವರಂತೆ; ಮುಸ್ಲೀಂ ಬದುಕಿನ ಮೌಢ್ಯತೆ–ಸಣ್ಣತನಗಳನ್ನು ಬದುಕಿನ ಪ್ರಗತಿಪರ ಬೆಳವಣಿಗೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಕಟ್ಪಾಡಿ ಮತ್ತು ಕುಂಞ್ ತುಂಬಾ ಮುಖ್ಯವಾಗುತ್ತಾರೆ.

"ಅಲ್ಲಾಹು ಅಕ್‌ಬರ್....ಲಾಯಿಲಾಹ ಇಲ್ಲಲ್ಲಾ...."

"ಮರ್‌ಹಬಾ....ಮರ್‌ಹಬಾ"

"ಉಮ್ಮಾ ಆ ಹುಡುಗನನ್ನು ಕೆಲಸಕ್ಕೆ ಕಳಿಸಿ."

"ಮೌಲ್ವಿಗಳೇ, ನನ್ನ ಹೆಂಡತಿಯ ತಲಾಕ್ ಹೇಳಲುಬಂದೆ."

"ನೋಂಬುಮಾಡಿ ಅಲ್ಲಾಹನೊಂದಿಗೆ ದುವಾ ಮಾಡಬೇಕು."

"ಸಣ್ಣ ಪೆರ್ನಾಲ ಸುನ್ನತ್ ಸ್ನಾನವನ್ನು ಮಾಡುತ್ತಿದ್ದೇನೆ."

—ಈ ಮುಂತಾದ ವಾಕ್ಯಗಳು ಕನ್ನಡ ಭಾಷೆಗೆ ತುಂಬಾ ಹೊಸದಾಗಿ ಕಾಣುತ್ತವೆ. ಭಾಷೆಯ ನಿಜವಾದ ಬೆಳವಣಿಗೆಯಾಗುವುದು ಅದರ ಕೊಡು–ಕೊಳ್ಳುವಿಕೆಯಿಂದ. ಅಂತೆಯೇ, ನವ್ಯೋತ್ತರ ಕನ್ನಡ ಸಾಹಿತ್ಯದ ಭಾಷೆ ದಲಿತ ಬದುಕಿನ ನುಡಿಗಟ್ಟುಗಳನ್ನು, ಮುಸ್ಲೀಂ ಜನಾಂಗದ ಪಡೆನುಡಿಗಳನ್ನು, ಲಂಬಾಡಿಗರ ಭಾಷೆಯ ಸೊಗಡನ್ನು ಏಕಕಾಲಕ್ಕೆ ಕಟ್ಟಿಕೊಂಡು ಮುನ್ನಡೆದಿದೆ.

ಮುಸ್ಲಿಂ ಜನಾಂಗದ ಲೇಖಕರು ಕನ್ನಡದಲ್ಲಿ ಬರೆಯುತೊಡಗಿದ್ದರಿಂದ ಕನ್ನಡ ಸಾಹಿತ್ಯಕ್ಕೆ ಬದುಕಿನ ಮತ್ತೊಂದು ಮುಖ ದೊರೆತಂತಾಗಿದೆ. ಅಲಿಕತ್, ಜನ್ನತ್, ಜಮಾತ್, ದರ್ಸ್, ನೋಂಬು ಹಲಾಲ್, ಹದೀಸ್ ಮುಂತಾದ ಪದಗಳು ಕನ್ನಡ ಪದಗಳೊಂದಿಗೆ ಬೆರೆತುಕೊಂಡು ಮತ್ತೊಂದು ಭಾಷೆ–ಸಂಸ್ಕೃತಿಯ ಬಗೆಗೆ ಕುತೂಹಲವನ್ನು ಹುಟ್ಟಿಸುತ್ತವೆ.

ಸಾರಾ ಅಬೂಬಕರ್ ಸರಳತೆಯಲ್ಲಿಯೇ ಸ್ಪಷ್ಟತೆಯನ್ನು ಮೂಡಿಸಿದರೆ. ಕಟ್ಪಾಡಿಯವರು ತುಂಬಾ ಕಾವ್ಯಮಯ ಶೈಲಿಯಲ್ಲಿ ಗಮನಸೆಳೆಯುತ್ತಾರೆ. ಬೋಳುವಾರು ಅವರು ತಮ್ಮ ವಿನೋದ ಶೈಲಿಯಲ್ಲಿಯೇ ತೀಕ್ಷ್ಣತೆಯನ್ನು, ತೀವ್ರತೆ ಉಂಟುಮಾಡುವುದರ ಮೂಲಕ ನೆನಪುಳಿಯುತ್ತಾರೆ. ಈ ಲೇಖಕರ ನುಡಿಗಟ್ಟು, ಭಾಷಾಶೈಲಿ ಕನ್ನಡಕ್ಕೆ ಹೊಸರೀತಿಯ ಕೊಡುಗೆಯಾಗಿದೆ.

ಕನ್ನಡ ಕಾದಂಬರಿ ಸಾಹಿತ್ಯಕ್ಕೆ ಈ ಮುಸ್ಲಿಂ ಲೇಖಕರ ಕಾದಂಬರಿಗಳು ಮಹತ್ವದ ಕೊಡುಗೆಯಾಗಿವೆ. ಮನುಷ್ಯ ಜೀವನದ ನೆಲೆಗಳನ್ನು ಬೇರೆ-ಬೇರೆ ಸಂಸ್ಕೃತಿಯ ಹಿನ್ನೆಲೆಯಲ್ಲಿ ನೋಡುತ್ತ, ಒಟ್ಟಾರೆ ಮನುಷ್ಯ ಚೇತನದ ಅದಮ್ಯತೆಯನ್ನು ಹೇಳುತ್ತ, ಮನುಷ್ಯನ ಬದುಕನ್ನು ವಿಸ್ತಾರಗೊಳಿಸುತ್ತ, ಜೀವನ ಪ್ರೀತಿಯನ್ನು ಹುಟ್ಟುಹಾಕುತ್ತಲೇ ಬಂಡಾಯ ಮನೋಭಾವದಿಂದ ಝಳಪಿಸುವ ಈ ಕೃತಿಗಳು ಸರ್ವೋತ್ತರದ ಪ್ರಮುಖ ಅನುಭವಗಳಾಗುತ್ತವೆ.

ಸಾರಾ, ಕಟ್ಪಾಡಿಯವರು ಕೇವಲ ಮುಸ್ಲಿಂ ಜನಾಂಗದ ಬದುಕನ್ನು ತಮ್ಮ ಕಾದಂಬರಿಗಳಲ್ಲಿ ವಿಶ್ಲೇಷಿಸಿದರೆ, ಬೋಳುವಾರು ಮಾತ್ರ ಮುಸ್ಲಿಂ ಬದುಕನ್ನು ಬೇರೆ ಸಂಸ್ಕೃತಿಯ ನೆಲೆಗಳ ಮುಖಾಂತರ ಗುರುತಿಸಲು ಪ್ರಯತ್ನಿಸುತ್ತಾರೆ. ಸಾರಾ ಮತ್ತು ಕಟ್ಪಾಡಿಯವರ ಕಾದಂಬರಿಗಳಲ್ಲಿ ಕೇವಲ ಮುಸ್ಲಿಂ ಜನತೆಯ ನೋವು–ನಲಿವುಗಳ, ಮೌಢ್ಯತೆ-ಸಣ್ಣತನಗಳ ವಿವರವಿದ್ದರೆ, ಕುಂಞ್ ಅವರ ಕಾದಂಬರಿಯಲ್ಲಿ ಮುಸ್ಲಿಂ-ಕ್ರಿಶ್ಚಿಯನ್ ಜನಾಂಗದ ಬದುಕಿನ ಸಂಘರ್ಷವಿದೆ.

ಸಾರಾ ಅವರು ಆ ಜನಾಂಗದ ಮೌಢ್ಯತೆಯನ್ನು–ಸಣ್ಣತನಗಳನ್ನು ಹೇಳುತ್ತಲೇ ನಸೀಮಳಂತಹ ಪಾತ್ರದ ಮೂಲಕ ತಣ್ಣನೆಯ ಬಂಡಾಯವನ್ನು ಹುಟ್ಟುಹಾಕಿದರೆ, ಕಟ್ಪಾಡಿಯವರು ಯಾವುದೇ ತೀರ್ಪನ್ನು ಕೊಡದೆ ಯಥಾಸ್ಥಿತಿಯನ್ನು ತುಂಬಾ ಕಲಾತ್ಮಕವಾಗಿ ಮತ್ತು ಪರಿಣಾಮಕಾರಿಯಾಗಿ ತೆರೆದಿಡುತ್ತಾರೆ. ಅನಂತಮೂರ್ತಿಯವರ 'ಸಂಸ್ಕಾರ', 'ಘಟಶ್ರಾದ್ಧ'ಗಳಂತೆ ಇವರ ಕೃತಿಗಳು ಮುಸ್ಲಿಂ ಜನಾಂಗದ

ಒಳನೋಟಗಳನ್ನು ಯಥಾವತ್ತಾಗಿ ಹಿಡಿದಿಟ್ಟುಕೊಂಡಿವೆ. ಬೋಳುವಾರು ಅವರು ಮಾತ್ರ ಇದಕ್ಕಿಂತ ಸ್ವಲ್ಪ ಭಿನ್ನವಾಗಿ ಬರೆಯುತ್ತಾ ತಮ್ಮ ವಿನೋದದ ಶೈಲಿಯಲ್ಲಿಯೇ ಈ ಸಮಾಜ ವ್ಯವಸ್ಥೆಯ ಕ್ರೌರ್ಯವನ್ನು ಒತ್ತಿಹೇಳುತ್ತಾರೆ. ವಿಭಿನ್ನ ಸಂಸ್ಕೃತಿಯ ವ್ಯಕ್ತಿಗಳ ಸಂಘರ್ಷದೊಂದಿಗೆ ಮನುಷ್ಯಚೇತನದ ಸಾಧ್ಯತೆಗಳನ್ನು ತೆರೆದಿಡುತ್ತಾರೆ. ಕನ್ನಡ ಕಾದಂಬರಿ ಕ್ಷೇತ್ರಕ್ಕೆ ಈ ಮೇಲೆ ಉಲ್ಲೇಖಿಸಿದ ಎಲ್ಲ ಲೇಖಕರ ಕೊಡುಗೆಯೂ ಅಪಾರವಾಗಿದೆ ಮತ್ತು ಅನಿವಾರ್ಯವಾಗಿದೆ.

ಅರಮನೆ

ಅರಮನೆಯ ತುಂಬ ಗೋಡೆಗಳು ಕಂಬಗಳು
ಕೋಣೆ ಬಾಗಿಲು ಪರದೆಗಳು
ಬೆಳ್ಳಿ ಬಂಗಾರ ಮುತ್ತು ರತ್ನ
ಉಸಿರು ಕಟ್ಟಿಸುವಷ್ಟು, ಕಣ್ಣು ಕೋರೈಸುವಷ್ಟು
ಆಗಸವ ಚುಂಬಿಸುವ ಮಾಳಿಗೆ
ತಲೆ ಎತ್ತಿದರೆ ಉಳುಕೀತು ಕತ್ತು
ಜೋಪಾನ
ಮೆರೆಯುತಿದೆ
ಇಂದ್ರನಗರಿಯನೆ ಧರೆಗೆಳೆತಂದ ಸುಮ್ಮಾನ
ನೆಲಕಾಣದು ರತ್ನಗಂಬಳಿ ಹಾಸು
ಹೆಜ್ಜೆ ಮೂಡದ ಹಾದಿ
ಆಳೆತ್ತರದ ಕನ್ನಡಿಗಳಲ್ಲಿ
ಬಿಂಬವಿಲ್ಲ ಬರಿಯ ಪ್ರತಿಬಿಂಬ
ಕಲ್ಲು ಮರ ಬೆಳ್ಳಿ ಬಂಗಾರಗಳಲ್ಲಿ ಕಲೆಯು ಬಂದಿ
ಗೋಡೆ ಬಾಗಿಲು ಚಾವಣಿ ಚಿತ್ರದಲ್ಲಿ ಹೂಬಳ್ಳಿ ಮೃಗ ಪಕ್ಷಿ ಸೆರೆ

ಕೆ.ಆರ್. ಸಂಧ್ಯಾರೆಡ್ಡಿ, ನಂ. 588, ಭವಾನಿ ನಗರ, ಗವೀಪುರಂ ಬಡಾವಣೆ, ಬೆಂಗಳೂರು-19

ಈ ಕಲೆಯ ಬಲೆಯಲ್ಲಿ ವೈಭವದ ನೆಲೆಯಲ್ಲಿ
ಎದೆಯ ಭಾವಗಳಿಗೆಲ್ಲ ಮುಕವಲ್ಲು ವೇಷ
ಕುಸುರಿ ಕಲೆಯ ದಪ್ಪ ಬಾಗಿಲ ಹಿಂದಿನ ಕತ್ತಲುಗಳಲ್ಲಿ
ನಡೆದದ್ದು
ಹೊಸದೇನಲ್ಲ ಬಿಡಿ
ಅದೇ ಹುಲುಮನಸಿನ ಹುಲು ಮನುಜರ
ನಶ್ವರದ ಬದುಕಿನಾಟ

ಊರಗದ್ದಲವಿಲ್ಲ, ಪಿಸುಮಾತಿಗೆಡೆಯಿಲ್ಲ
ಪ್ರೇಮಿಗಳ ನಗೆಯಿಲ್ಲ ಗಂಡಹೆಂಡಿರ ಕಲಹವಿಲ್ಲ
ಮಗುವಿನಳುವಿಲ್ಲ

ಈಗ ಇದು–ಆಟ ನಿಂತ ಮೈದಾನ
ಉಸಿರು ಕಟ್ಟಿಸುವ ಮೌನ
ಸಂಕಟ
ಅದುಮಿ ಹಿಡಿದಂತೆ ಕೋಗಿಲೆಯ ಕೊರಳು
ಇಣುಕಿನೋಡಿದೆ
ಅರಮನೆಯ ಹೊರಗೆ
ಗೋಡೆಯುಂಚಿನ ಮೇಲೆ
ಜೋಡಿ ಪಾರಿವಾಳ
ಮರಿಯ ಎಳೆಗಂಪು ಬಾಯಿಂಗೆ
ಪ್ರೀತಿಯ ತುತ್ತು
ಅರಮನೆಯ ಮರೆಸಿತ್ತು

–ಕೆ.ಆರ್. ಸಂಧ್ಯಾರೆಡ್ಡಿ

ಬಯಲ ಮಾತು

ನಿನಗೆ ಗೊತ್ತಿಲ್ಲ
ಹೊರಗೊಂದು ಬಯಲಿದೆ
ಬಯಲಲ್ಲಿ ಸುಳಿಯುವ
ತಂಗಾಳಿಯಿದೆ
ತೇಲಾಡುವ ಮುಗಿಲಿದೆ
ಸೆಕೆ ಅಮರಿ
ಮೈಬೆವರಿ ಬೇಡ
ಒಲೆ ಮುಂದೆ ಕುಂಡ
ನಿನ್ನ ಬೆನ್ನಲ್ಲಿ
ತೂರಿ ಬರುವ ಸೂರ್ಯನ
ಗವಾಕ್ಷಿಯ ಕಿರಣಗಳು
ನಿನ್ನೊಡಲು ಬಿಸಿ ಮಾಡಿ
ಪುಲಕ ನೀಡಬಲ್ಲವು
ತಡಮಾಡದೆ
ಮೈ ಒಡ್ಡು ವಿಯಾದರೆ,
ಹಾಯೆನಿಸುವ ಮನಸು
ಹಗುರಗೊಳ್ಳುವ ಮೈ
ನಿನ್ನದಾಗಬಲ್ಲದು
ಮೂಲೆಗೇ ಇಂಗದೆ
ಹರಿದು ಹೊರನಡೆ,
ಹಸಿರು ಹಬ್ಬುವೆ
ಚಿಗುರ ತಬ್ಬುವೆ.

—ಉತ್ತನೂರು ರಾಜಮ್ಮ ವಿ. ಶೆಟ್ಟಿ

ಉತ್ತನೂರು ರಾಜಮ್ಮ ವಿ. ಶೆಟ್ಟಿ W/o ವಿಶ್ವನಾಥಶೆಟ್ಟಿ, ವಕೀಲರು,
ಅಂಜನಿ ಬಡಾವಣೆ, ಚಿಂತಾಮಣಿ, ಕೋಲಾರ ಜಿಲ್ಲೆ

ದಲಿತ ಸಾಹಿತ್ಯ : ಚರಿತ್ರೆಯ ಕೆಲವು ಟಿಪ್ಪಣಿಗಳು

ಮ. ನ. ಜವರಯ್ಯ

ಇಪ್ಪತ್ತನೆ ಶತಮಾನದ ದಲಿತ ಸಾಹಿತ್ಯದ ನೆಲೆಯಲ್ಲಿ ನಿಂತು ಇಡೀ ಕನ್ನಡ ಸಾಹಿತ್ಯದ ಚರಿತ್ರೆಯನ್ನು ಅವಲೋಕಿಸಿದಾಗ ಎರಡು ಸತ್ಯ ಸಂಗತಿಗಳು ಗೋಚರಿಸುತ್ತದೆ. (1) ಕನ್ನಡ ಸಾಹಿತ್ಯಕ್ಕೆ ಸಾವಿರ ವರ್ಷಗಳ ಚರಿತ್ರೆಯಿದೆ. (2) ಅದೇ ಸಂದರ್ಭದಲ್ಲಿ ಕರ್ನಾಟಕದಲ್ಲಿ ಸಮಕಾಲೀನ ದಲಿತ ಸಾಹಿತ್ಯ ಅದೇ ಸಾವಿರ ವರ್ಷಗಳಹಿಂದಿನ ದಲಿತ ಲೇಖಕ ಮಾದಾರ ಚೆನ್ನಯ್ಯನಿಂದ ತನ್ನ ಆರಂಭವನ್ನು ಕಂಡುಕೊಳ್ಳುತ್ತದೆ. ಅದೇ ಪರಿಯಲ್ಲಿ ಈಗ್ಗೆ ಎಂಟುನೂರು ವರ್ಷಗಳ ಹಿಂದೆ ಕರ್ನಾಟಕದಲ್ಲಿ ಆರಂಭವಾದ ಶೈವ ಧರ್ಮದ ಜನಪರ ಆಂದೋಲನದ ಮುಂಚೂಣಿಯಲ್ಲಿ ಡೋಹಾರ ಕಕ್ಕಯ್ಯ, ಮಾದಾರ ಧೂಳಯ್ಯರೇ ಮುಂತಾದ ದಲಿತ ವರ್ಗದ ಸಂತ ಲೇಖಕರು ಕೂಡ,ಸಾವಿರ ವರ್ಷಗಳ ಹಿಂದೆ ಸಂತ ಲೇಖಕನೇ ಆದ ಮಾದಾರ ಚೆನ್ನಯ್ಯ ಹಾಕಿಕೊಟ್ಟ ಧಾರ್ಮಿಕ ಸಾಮಾಜಿಕ ಹಾದಿಯಲ್ಲೇ ಮುನ್ನಡೆದಿದ್ದಾರೆ. ಆದರೆ ಹತ್ತರಿಂದ ಹನ್ನೆರಡನೇ ಶತಮಾನದ ಈ ಕಾಲಾಂತರದಲ್ಲಿ ಕರ್ನಾಟಕದಲ್ಲಿ ಕಾಣಿಸಿಕೊಂಡ ಈ ದಲಿತ ಲೇಖಕರ ನಂತರ ರಾಷ್ಟ್ರದ ಸ್ವಾತಂತ್ರ್ಯಯುಗದವರೆಗೂ ದಲಿತವರ್ಗದ ಒಬ್ಬನೇ ಒಬ್ಬ ಲೇಖಕನನ್ನು ಕಾಣಲು ಸಾಧ್ಯವಾಗಲಿಲ್ಲ. ಅರ್ಥಾತ್, ವೈದಿಕ ಧಾರ್ಮಿಕ ಪರಂಪರೆ ಹಾಗೂ ಜಮೀನ್ದಾರಿ ವ್ಯವಸ್ಥೆ ಕಳೆದ ಎಂಟುನೂರು ವರ್ಷಗಳ ಅವಧಿಯಲ್ಲಿ ದಲಿತರ ಮೇಲಿನ ತನ್ನ ಮುಷ್ಟಿಯನ್ನುಮತ್ತಷ್ಟು ಬಿಗಿಗೊಳಿಸಿಕೊಂಡೇ ಮುನ್ನಡೆದಿದೆ. ಅಲ್ಲದೇ ಅದೇ ಎಂಟು ನೂರು ವರ್ಷಗಳ ಅಂತರದಲ್ಲಿ ಕನ್ನಡದಲ್ಲಿ ಸೃಷ್ಟಿಯಾದ ಜೈನಸಾಹಿತ್ಯ, ಶೈವಸಾಹಿತ್ಯ, ಮತ್ತು ವೈದಿಕ ಸಾಹಿತ್ಯಗಳು ದಲಿತ ವರ್ಗಕ್ಕೆ ದಾಸ್ಯವನ್ನು ಬೋಧಿಸಿ ಅವರಿಗೆ ಜನ್ಮಾಂತರ ಮತ್ತು ಮೋಕ್ಷದ ಮಾರ್ಗಗಳನ್ನು ತೋರಿದುವೇ ಹೊರತು, ಅವರ ಬಂಧ ವಿಮೋಚನೆ ಆ ಸಾಹಿತ್ಯದಿಂದ ಎಂದೂ ಸಾಧ್ಯವಾಗಲಿಲ್ಲ.

ಕನ್ನಡದ ದಲಿತಸಾಹಿತ್ಯದ ಚರಿತ್ರೆಯ ದೃಷ್ಟಿಯಲ್ಲಿ 1945 ರ ನಂತರದ ಒಂದು ಅಪೂರ್ವ ದಾಖಲೆ ಇಲ್ಲಿ ಅತ್ಯಂತ ಕುತೂಹಲಭರಿತವಾದುದು ಎಂದೆನಿಸದೆ ಇರುವಂತಿಲ್ಲ. ಅದೆಂದರೆ ಆದುನಿಕ ಕನ್ನಡ ಸಾಹಿತ್ಯದ ಪ್ರಪ್ರಥಮ ಪ್ರಾಧ್ಯಾಪಕ ಪ್ರೊ. ಟಿ. ಎಸ್. ವೆಂಕಣ್ಣಯ್ಯನವರು ಎಂಬುದು ಎಷ್ಟರಮಟ್ಟಿಗೆ ಸತ್ಯವೋ, ಕನ್ನಡದ ಪ್ರಪ್ರಥಮ ದಲಿತ ಲೇಖಕ ಕೂಡ ಅದೇ ವೆಂಕಣ್ಣಯ್ಯನವರ ಶಿಷ್ಯ ಜಿ. ವೆಂಕಟಯ್ಯನವರು ಎಂಬುದು ಕೂಡ ಅಷ್ಟೇ ಸತ್ಯಸಂಗತಿ ಯಾಗಿದೆ. ಅಂದರೆ ಅವರು 'ವೆಂಕಣ್ಣಯ್ಯ'

ಮ.ನ. ಜವರಯ್ಯ, ನಂ. ಇ-47,ಮೊದಲ ಹಂತ, ಕುವೆಂಪುನಗರ. ಮೈಸೂರು-570023

ಇವರು 'ವೆಂಕಣ್ಣಯ್ಯ' ಅಷ್ಟೇ ವ್ಯತ್ಯಾಸ ಬಹುಶಃ ಚಾರಿತ್ರಿಕವಾಗಿ ಮುಖ್ಯವೆನಿಸುವ ಇನ್ನೂ ಒಂದು ಸತ್ಯಸಂಗತಿ ಎಂದರೆ ಕನ್ನಡ ನವೋದಯ(Romantic) ಸಾಹಿತ್ಯ ಟಿ. ಎಸ್. ವೆಂಕಣ್ಣಯ್ಯನವರಿಂದ ಆರಂಭವಾದರೆ, ಆಧುನಿಕ ದಲಿತಸಾಹಿತ್ಯ ಜಿ. ವೆಂಕಟಯ್ಯನವರಿಂದ ಆರಂಭವಾಗುತ್ತದೆ. ಅದರಲ್ಲೂ ಜಿ. ವೆಂಕಟಯ್ಯನವರ 'ಮುರಿದ ಮದುವೆ' ಎಂಬ ಒಂದು ಕಾದಂಬರಿ 1951ರಲ್ಲಿ ಸ್ವತಃ ವೆಂಕಣ್ಣಯ್ಯನವರ ಗ್ರಂಥ ಮಾಲೆಯಿಂದಲೇ ಪ್ರಕಟವಾದುದು ಕೂಡ ಒಂದು ಮಹತ್ವದ ಸಂಗತಿ ಎನಿಸುತ್ತದೆ.

ಇನ್ನು ಅವರ ಬಗ್ಗೆ ಇಲ್ಲಿ ದಾಖಲಿಸಬಹುದಾದ ಇನ್ನೊಂದು ಮುಖ್ಯ ಸಂಗತಿ ಎಂದರೆ ಡಾ॥ ಬಾಬಾಸಾಹೇಬ್ ಅಂಬೇಡ್ಕರ್‌ರವರನ್ನು ಜಿ. ವೆಂಕಟಯ್ಯನವರು ಅತ್ಯಂತ ಹತ್ತಿರದಿಂದ ಬಲ್ಲವರಾಗಿದ್ದುದು ಮಾತ್ರವಲ್ಲದೆ, ಅವರ ಮೊಟ್ಟಮೊದಲ ಕೃತಿ 1944ರಲ್ಲಿ ಪ್ರಕಟವಾದ 'ಬುದ್ಧದೇವ'. ಅಂದರೆ, ಸಮಕಾಲೀನ ದಲಿತ ಸಾಹಿತ್ಯದ ಮೂಲಪ್ರೇರಣೆಗಳಲ್ಲಿ ಒಂದು 'ಬುದ್ಧ' ತದನಂತರ ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಎಂಬುದನ್ನಿಲ್ಲಿ ನೆನಪಿಡಬೇಕು. ಅಷ್ಟೇ ಅಲ್ಲದೆ, ಆಧುನಿಕ ಮರಾಠಿಯಲ್ಲಿ ಪ್ರಪ್ರಥಮ ಸೃಜನಶೀಲ ದಲಿತ ಲೇಖಕ 1960ರ ದಶಕದ ದಿ॥ ಅಣ್ಣಾರಾವ್ ಸಾಠೆ ಎಂಬುದು ಹೇಗೋ ಹಾಗೆಯೇ, ಅಧುನಿಕ ಕನ್ನಡದ ಪ್ರಪ್ರಥಮ ಸೃಜನಶೀಲ ದಲಿತ ಲೇಖಕ 1950ರ ದಶಕದ ದಿ॥ ಜಿ. ವೆಂಕಟಯ್ಯನವರು.

ಜಿ. ವೆಂಕಟಯ್ಯನವರ ಕೃತಿಗಳನ್ನು ಪ್ರವೇಶಿಸುವ ಮೊದಲು ಇಲ್ಲಿ ಸೂಚಿಸ ಬಹುದಾದ ಇನ್ನೊಂದು ಮುಖ್ಯ ಸಂಗತಿ ಎಂದರೆ, ಟಿ.ಎಸ್. ವೆಂಕಣ್ಣಯ್ಯನವರ ನಂತರದ ಆಧುನಿಕ ಕನ್ನಡದಲ್ಲಿ ಜಿ. ವೆಂಕಟಯ್ಯನವರಿಗಿಂತಲೂ ಮೊದಲು ಬುದ್ಧನ ಜೀವನವನ್ನು ಕುರಿತ ಕೃತಿಗಳ ರಚನೆಯಾಗಿರಲಿಲ್ಲವೆಂಬುದನ್ನು ನೆನಪಿಡಬೇಕು. ಬಹುಶಃ ಜಿ. ವೆಂಕಟಯ್ಯನವರ ನಂತರವೇ ಬಿ. ಪುಟ್ಟಸ್ವಾಮಯ್ಯನವರು, ಜಿ.ಪಿ. ರಾಜರತ್ನಂ ರವರು ಹಾಗೂ ಗೋವಿಂದ ಪೈರವರು ಬುದ್ಧನನ್ನು ಕುರಿತಂತೆ ತಂತಮ್ಮ ಕೃತಿಗಳ ರಚನೆ ಮಾಡಿರುವಂತೆ ತೋರುತ್ತದೆ.

ಇನ್ನು ಅವರ ಕೃತಿಗಳನ್ನು ಪರಿಚಯಿಸುವುದಾದರೆ, ಜೀವನ ಚರಿತ್ರೆ, ಪ್ರವಾಸ ಸಾಹಿತ್ಯ, ಕಾದಂಬರಿ, ಸಣ್ಣಕಥೆ ಹಾಗೂ ಮಕ್ಕಳ ಸಾಹಿತ್ಯವೇ ಮುಂತಾದ ಅನೇಕ ಪ್ರಕಾರಗಳಲ್ಲಿ ಜಿ. ವೆಂಕಟಯ್ಯನವರು ಸುಮಾರು ಇಪ್ಪತ್ತಮೂರು ಕೃತಿಗಳ ರಚನೆ ಮಾಡಿರುವುದನ್ನು ಕಾಣಬಹುದಾಗಿದೆ. ಅವುಗಳಲ್ಲಿ ಬಹಳ ಮುಖ್ಯವಾದ ಕೆಲವೆಂದರೆ ಮುರಿದ ಮದುವೆ', 'ನೊಂದಜೀವ', 'ಚಂದನದ ಕೊರಡು' ಮತ್ತು 'ನಿಸರ್ಗದ ಮಡಿಲು, ಮುಂತಾದವು ಕಾದಂಬರಿಗಳು. 'ಚಿನ್ನದಗಿರಿಯಾತ್ರೆ' ಮತ್ತು 'ಬನದ

ಸೆರಗು' ಇವೆರಡೂ ಪ್ರವಾಸ ಸಾಹಿತ್ಯ. 'ಮಂಗಳ ಮಾಂಗಲ್ಯ' ಸಣ್ಣ ಕಥೆಗಳು. 'ಬುದ್ಧದೇವ', 'ಶಾರದಾಮಣಿದೇವಿ' ಇವೆರಡೂ ಜೀವನ ಚರಿತ್ರೆಗಳು.[1]

ಅವರ ಬಗ್ಗೆ ಕೊನೆಯದಾಗಿ ಒಂದು ಮಾತು: ಸ್ವಾತಂತ್ರ್ಯಪೂರ್ವದಲ್ಲೇ ಕಾಲೇಜು ಶಿಕ್ಷಣವನ್ನು ಪಡೆದು ಸೃಜನಶೀಲ ಸಾಹಿತಿಯಾಗಿದ್ದ ಜಿ. ವೆಂಕಟಯ್ಯನವರು ಡಾ॥ ಬಾಬಾಸಾಹೇಬ್ ಅಂಬೇಡ್ಕರರ ಜೀವನದ ಹೋರಾಟ ಹಾಗೂ ಸಿದ್ಧಾಂತಗಳಿಂದ ತುಂಬಾ ಪ್ರಭಾವಿತರಾಗಿರುವುದನ್ನು ಕಾಣಬಹುದಾಗಿದೆ.

ಇದಾದ ಬಳಿಕ ಕನ್ನಡದಲ್ಲಿ ದಲಿತ ಸಾಹಿತ್ಯದ ಸೃಜನಶೀಲ ಪ್ರತಿಭೆಯನ್ನೂ ತೀವ್ರತರವಾದ ಅದರ ಬರವಣಿಗೆಯನ್ನೂ ಎಪ್ಪತ್ತರ ದಶಕದ ನಂತರ ಕಾಣುತ್ತೇವೆ. ಅಲ್ಲದೆ, ಎಪ್ಪತ್ತರ ನಂತರದ ದಲಿತ ಸಾಹಿತ್ಯದ ಈ ತೀವ್ರ ಬೆಳವಣಿಗೆ ಕೂಡ ಡಾ॥ ಬಾಬಾಸಾಹೇಬ್ ಅಂಬೇಡ್ಕರರ ಹೋರಾಟದ ಬದುಕು ಹಾಗೂ ಸಿದ್ಧಾಂತಗಳಿಂದಲೇ ಅದು ತನ್ನ ಮೂಲಪ್ರೇರಣೆಯನ್ನು ಪಡೆದುಕೊಂಡಿದೆ ಎಂಬುದು ಇಲ್ಲಿ ಅತ್ಯಂತ ಗಮನಾರ್ಹವಾದ ವಿಚಾರ. ಏಕೆಂದರೆ, ಕನ್ನಡದಲ್ಲಿ ಮೊಟ್ಟಮೊದಲಿಗೆ ಡಾ॥ ಅಂಬೇಡ್ಕರರ ಸಮಗ್ರ ಜೀವನವನ್ನು 1970ರಲ್ಲಿ ನಾನು ಪ್ರಕಟಿಸುವುದಕ್ಕೆ ಹಿಂದೆ ಆ ಯತ್ನ ನಡೆದಿತ್ತೆಂಬುದಕ್ಕೆ ಯಾವ ದಾಖಲೆಗಳೂ ಇರುವಂತಿಲ್ಲ.

ಅದೇನೇ ಇದ್ದರೂ ಎಪ್ಪತ್ತರ ದಶಕದ ನಂತರದ ಕನ್ನಡದಲ್ಲಿ ದಲಿತ ಸಾಹಿತ್ಯದ ತೀವ್ರ ಬೆಳವಣಿಗೆಗೆ ಪ್ರಧಾನವಾಗಿ ಎರಡು ಕಾರಣಗಳನ್ನು ಚರಿತ್ರೆಯಲ್ಲಿ ಕಾಣಬಹುದಾಗಿದೆ. ಮೊದಲನೆಯದಾಗಿ, ಆ ವೇಳೆಗಾಗಲೇ ರಾಷ್ಟ್ರದಾದ್ಯಂತ ಗಮನ ಸೆಳೆದಿದ್ದ ಮಹಾರಾಷ್ಟ್ರದ ದಲಿತ ಪ್ಯಾಂಥರ್ ಸಾಹಿತ್ಯ ಕನ್ನಡ ದಲಿತ ಸಾಹಿತ್ಯದ ಮೇಲೆ ತನ್ನ ಸೈದ್ಧಾಂತಿಕ ಪ್ರಭಾವವನ್ನು ಬೀರಿದೆ ಎಂಬುದನ್ನು ಮರೆಯುವಂತಿಲ್ಲ. ಅದರಲ್ಲೂ ಮುಖ್ಯವಾಗಿ ದಲಿತ ಪ್ಯಾಥರ್ ಸಾಹಿತ್ಯದ ಪ್ರಮುಖ ಲೇಖಕರಾದ ಬಾಬುರಾವ್ ಬಾಗೂಲ್, ಶಂಕರರಾವ್ ಖರಾತ್, ಕೇಶವ ಮೆಶ್ರಾಮ್, ವಾಮನ್ ನಿಂಬಾಳ್‌ಕರ್, ಡಾ॥ ಮಶವಂತ ಮಣೋಹರ್, ಪ್ರೊ॥ ಸುತರಾವ್ ಇವರಾಳೆ, ದಯಾಪವಾರ್, ತ್ರ್ಯಂಬಕ್ ಸಹಕಾಳೆ, ವಾಮನ್ ಹೂವಾಳ್, ಅರ್ಜುನ್‌ದಾಂಗಳೆ, ನಾಮದೇವ ಡಸಾಳ, ಪ್ರಭಾಕರ್ ದುಪಾರ್, ಪ್ರೊ॥ ದತ್ತಾಭಗತ್, ಟೆಕ್ಸಾಸ್ ಗಾಯಕವಾಡ ಮತ್ತು ಅರುಣ್‌ಕಾಂಬ್ಳೆ ಮುಂತಾದವರನ್ನೊಳಗೊಂಡ ಎರಡು ತಲೆಮಾರಿನ ಲೇಖಕರು

1. ಇದೇ 'ಬುದ್ಧದೇವ' ಎಂಬ ಕೃತಿಗೆ ಜಿ. ವೆಂಕಟಯ್ಯನವರು ಕೇಂದ್ರ ಸರಕಾರದ ಪ್ರಶಸ್ತಿಯನ್ನೂ ಪಡೆದುಕೊಂಡಿದ್ದು ತದನಂತರ ಸ್ವತಃ ತಾವೇ ಅದನ್ನು ಇಂಗ್ಲಿಷಿಗೂ ಅನುವಾದಿಸಿದ್ದಾರೆ.

ಮಾತ್ರವಲ್ಲದೆ, ಪ್ರಮುಖ ದಲಿತ ಲೇಖಕಿಯರಾದ ಶ್ರೀಮತಿ ಹೀರಾಬನ್‌ಸೋಡೆ, ಪ್ರೊ॥ ಜ್ಯೋತಿ ಲಾಂಜೇವಾರ್, ಶ್ರೀಮತಿ ಊರ್ಮಿಳಾ ಪವಾರ್ ಹಾಗೂ ಶ್ರೀಮತಿ ಸುಗಂಧಾಶೆಂಡೆ ಮುಂತಾದ ಪ್ರಮುಖ ಮರಾಠಿ ದಲಿತ ಲೇಖಕರು ಕನ್ನಡ ದಲಿತ ಸಾಹಿತ್ಯದ ಮೇಲೆ ತಮ್ಮ ಪ್ರಭಾವ ಬೀರಿರುವುದನ್ನು ಕಡೆಗಣಿಸಲು ಸಾಧ್ಯವಿರುವಂತಿಲ್ಲ. ಅಲ್ಲದೆ, ಮರಾಠಿ ದಲಿತ ಲೇಖಕರು ಕನ್ನಡ ದಲಿತ ಸಾಹಿತ್ಯದ ಮೇಲೆ ಮಾತ್ರವಲ್ಲದೆ, ಇಡೀ ಸಮಕಾಲೀನ ಭಾರತದ ಪ್ರಗತಿಪರ ಸಾಹಿತ್ಯದ ಮೇಲೆ ತಮ್ಮ ಪ್ರಭಾವವನ್ನು ಬೀರಿದ್ದಾರೆ ಎಂಬುದನ್ನು ಯಾವನೇ ವಿಮರ್ಶಕನಾಗಲಿ, ಚರಿತ್ರೆಗಾರನಾಗಲಿ ಕಡೆಗಣಿಸಲು ಸಾಧ್ಯವಿರುವಂತಿಲ್ಲ.

ಮರಾಠಿ ದಲಿತ ಸಾಹಿತ್ಯದ ತಾತ್ವಿಕ ಸ್ವರೂಪವನ್ನು ಮನಗಾಣಲು ಎರಡು ಸಾಹಿತ್ಯಕ ನಿದರ್ಶನಗಳನ್ನಿಲ್ಲಿ ಉಲ್ಲೇಖಿಸುವುದಾದರೆ ಬಾಬುರಾವ್ ಬಾಗೋಲ್‌ರವರ 'ವಿದ್ರೋಹಿ' ಎಂಬ ಸಣ್ಣ ಕಥೆಯನ್ನೂ ವಾಮನ್ ನಿಂಬಾಳ್‌ಕರ್‌ರವರ "ವಿಸಾವೇ ಶತರಾಚೆ ಶೇ ವಡ್ಯಾ ಟೋಕಾವ್" ಎಂಬ ಒಂದು ದೀರ್ಘ ಕವಿತೆಯನ್ನೂ ನೋಡಬಹುದಾಗಿದೆ.

ಅದೇ ಎಪ್ಪತ್ತರ ದಶಕದ ನಂತರ ಕರ್ನಾಟಕ ದಲಿತ ಸಾಹಿತ್ಯದ ಮೇಲೆ ತನ್ನ ಪ್ರಭಾವವನ್ನು ಬೀರಿದ ಇನ್ನೊಂದು ಚಾರಿತ್ರಿಕ ಘಟನೆಯೆಂದರೆ ಬಸವಲಿಂಗಪ್ಪನವರ ಬೂಸಾ ಹಗರಣ.

ದಿ॥ ದೇವರಾಜ ಅರಸರ ಸಚಿನ ಸಂಪುಟದಲ್ಲಿ ಪೌರಾಡಳಿತ ಸಚಿವರಾಗಿದ್ದ ಬಸವಲಿಂಗಪ್ಪನವರು ಕನ್ನಡ ಸಾಹಿತ್ಯವನ್ನು 'ಬೂಸಾ' ಎಂದದ್ದರಿಂದ ಕರ್ನಾಟಕದಾದ್ಯಂತ ಭಾಷೆಯ ಹೆಸರಿನಲ್ಲಿ ಉಂಟಾದ ಒಂದು ಜಾತೀಯ ಆಂದೋಲನ ಎರಡು ರೀತಿಯ ಚಾರಿತ್ರಿಕ ಘಟನೆಗಳಿಗೆ ಮೂಲಕಾರಣವಾಯಿತು. ಒಂದು: ಜಾತೀಯ ಹಿಂದೂ ಜನಾಂಗದ ರೂಢಿಗತ ಮೌಲ್ಯಗಳನ್ನು ಪ್ರಶ್ನಿಸಿದುದರಿಂದ ಬಸವಲಿಂಗಪ್ಪನವರನ್ನು ಸಚಿವ ಸಂಪುಟದಿಂದ ಕೆಳಗಿಳಿಸಲಾಯಿತು. ಎರಡನೆಯದಾಗಿ ಹಾಗೂ ಅದಕ್ಕಿಂತ ಮುಖ್ಯವಾದ ಸಂಗತಿ ಎಂದರೆ, ಜಾತೀಯ ಹಿಂದೂಗಳಿಂದ ಉಂಟಾದ ಈ ಅವಮಾನದಿಂದ ಕ್ರುದ್ಧರಾದ ಲಕ್ಷೋಪಲಕ್ಷ ದಲಿತ ಯುವಕರು ಕರ್ನಾಟಕದಾದ್ಯಂತ ಒಂದು ದೊಡ್ಡ ಸಾಮಾಜಿಕ ಆಂದೋಲನಕ್ಕೆ ಸಿದ್ಧವಾದದ್ದು ಈ ಅವಧಿಯಲ್ಲೇ ಎಂಬುದನ್ನು ನೆನಪಿಡಬೇಕು.

ಇನ್ನು ಕನ್ನಡ ದಲಿತ ಸಾಹಿತ್ಯದ ಬಗೆಗೆ ನೇರವಾಗಿ ಕೆಲವು ಮಾತುಗಳನ್ನು

ಹೇಳುವುದಾದರೆ, ಕನ್ನಡದಲ್ಲಿ ಸೃಷ್ಟಿಯಾದ ಸಮಸ್ತ ಸೃಜನಶೀಲ ದಲಿತ ಸಾಹಿತ್ಯ ತನ್ನ ಮೂಲಪ್ರೇರಣೆಯನ್ನು ಡಾ॥ ಬಾಬಾಸಾಹೇಬ್ ಅಂಬೇಡ್ಕರರ ಚಿಂತನೆಯಿಂದ ಪಡೆದುಕೊಂಡಿದೆ ಎಂಬುದಕ್ಕೆ ತಿಲಮಾತ್ರವೂ ಅನುಮಾನವಿಲ್ಲ. ಅದರಲ್ಲೂ ಮುಖ್ಯ ವಾಗಿ, ಅರವಿಂದ ಮಾಲಗತ್ತಿ, ಸಿದ್ಧಲಿಂಗಯ್ಯ, ಹಂಪಣ್ಣ, ಮುಳ್ಳೂರು ನಾಗರಾಜ, ನಾಗೇಂದ್ರಪ್ಪ ಅಗಸನಕಟ್ಟೆ, ಮುನಿವೆಂಕಟಪ್ಪ, ಗಂಗಾರಾಮ್ ಮುಂತಾದ ಬಹುತೇಕ ಎಲ್ಲ ಲೇಖಕರೂ ಅಂಬೇಡ್ಕರ್‌ವಾದಿ ಲೇಖಕರಾಗಿದ್ದಾರೆ ಎಂಬುದನ್ನು ಅವರ ಸಾಹಿತ್ಯ ದಲ್ಲಿ ಕಾಣಬಹುದಾಗಿದೆ. ಆದಾಗ್ಯೂ ಇಲ್ಲಿ ಸಿದ್ಧಲಿಂಗಯ್ಯನವರ ಬಗ್ಗೆ ಒಂದು ಮಾತ ನ್ನಂತೂ ಹೇಳಲೇಬೇಕಾಗಿದೆ. ಅದೇನೆಂದರೆ, ಸಿದ್ಧಲಿಂಗಯ್ಯ ತಾವೊಬ್ಬ ಮಾರ್ಕ್ಸ್ ವಾದಿ ಲೇಖಕ ಎಂದು ಭಾವಿಸಿರುವಂತಿದೆ. ಅಷ್ಟೇ ಅಲ್ಲದೆ ಅನ್ಯ ಕೆಲವು ವಿಮರ್ಶಕರು ಕೂಡ ಹಾಗೆಯೇ ಭಾವಿಸಿರುವಂತಿದೆ. ಆದರೆ, ಭಾರತೀಯ ಸಾಂಸ್ಕೃತಿಕ ಪರಂಪರೆಯ ವಿರುದ್ಧದ ಪ್ರತಿಭಟನಕಾರ ಲೇಖಕರಾದ ಸಿದ್ಧಲಿಂಗಯ್ಯನವರ ಕಾವ್ಯ ಸಮಸ್ತದಲ್ಲಿ ಅಂಬೇಡ್ಕರರು ಕಾವ್ಯವಾಗಿರುವಂತೆ ಕಾರ್ಲ್‌ಮಾರ್ಕ್ಸ್ ಕಾವ್ಯವಾಗಿಲ್ಲವೆಂಬುದನ್ನು ಯಾರಾದರೂ ಕಾಣಬಹುದಾಗಿದೆ. ಅಷ್ಟೇ ಅಲ್ಲದೆ ಭಾರತೀಯ ಸಾಂಸ್ಕೃತಿಕ ಮೌಲ್ಯ ಗಳ ಸಂದರ್ಭದಲ್ಲಿ ಕಾರ್ಲ್‌ಮಾರ್ಕ್ಸ್‌ರ ಪ್ರತಿಭಟನೆಗೂ ಅಂಬೇಡ್ಕರ್ ಪ್ರತಿಭಟನೆಗೂ ಸೈದ್ಧಾಂತಿಕ ನೆಲೆಯಲ್ಲೇ ಇರುವ ವ್ಯತ್ಯಾಸಗಳನ್ನು ಮರೆಯದಿರುವುದು ಅತ್ಯಂತ ಅವಶ್ಯ.

ಕೊನೆಯದಾಗಿ ದೇವನೂರು ಮಾದೇವರ ಸಾಹಿತ್ಯದ ಬಗ್ಗೆ ಒಂದೆರಡು ಮಾತು: ದೇವನೂರರ ಕಥಾಸಾಹಿತ್ಯದಲ್ಲಿ ಬರುವ ದಲಿತ ಪಾತ್ರಗಳನ್ನು ಎರಡು ಬಗೆಯಾಗಿ ವಿಂಗಡಿಸಬಹುದಾಗಿದೆ. (1) ಅವರ ಕಥೆಗಳಲ್ಲಿ ಬರುವ ಬಹುತೇಕ ದಲಿತ ಗಂಡು ಪಾತ್ರಗಳು ಜೀತಗಾರರು ಅಥವಾ ಕಳ್ಳರಾಗಿರುತ್ತಾರೆ. (2) ಅಲ್ಲಿ ಬರುವ ದಲಿತ ವರ್ಗದ ಬಹುತೇಕ ಹೆಣ್ಣು ಪಾತ್ರಗಳು ಅತ್ಯಂತ ಅಗ್ಗದ ಹೆಣ್ಣುಗಳಾಗಿರುತ್ತಾರೆ ಅಥವಾ ಸೂಳೆಯರಾಗಿರುತ್ತಾರೆ. ಅರ್ಥಾತ್, ಇಂಥ ಪಾತ್ರಗಳ ಸೃಷ್ಟಿಯಿಂದ ದೇವನೂರ ಮಾದೇವರು ಎರಡು ರೀತಿಯ ಸಾಧನೆಗಳನ್ನು ಗೈಯ್ದಿದ್ದಾರೆ. (1) ದಲಿತರಲ್ಲಿ ದಾಸ್ಯ ವೃತ್ತಿಯನ್ನೂ ವೇಶ್ಯಾವೃತ್ತಿಯನ್ನೂ ಅಪೇಕ್ಷಿಸುವ ಕೆಲವು ಜಾತೀಯ ಹಿಂದೂ ವಿಮರ್ಶಕರ ಗುಣಗಾನಕ್ಕೆ ಅವರು ಪಾತ್ರರಾಗಿದ್ದಾರೆ. (2) ತಾವು ಕಟ್ಟಾ ಅಂಬೇಡ್ಕರ್ ವಿರೋಧಿ ಎಂಬುದನ್ನು ಸ್ಪಷ್ಟವಾಗಿಯೂ ಅತ್ಯಂತ ಕೆಚ್ಚಿನಿಂದಲೂ ಅವರು ಮಂಡಿಸಿ ದ್ದಾರೆ, ಬಹುಶಃ ತಾತ್ವಿಕವಾಗಿ ಅವರ ಈ ಧೈರ್ಯವನ್ನು ಮೆಚ್ಚದಿರಲು ಸಾಧ್ಯ ವಿರುವಂತಿಲ್ಲ.

ಇದೇ ಸಂದರ್ಭದಲ್ಲಿ ಹೆಸರಿಸಬಹುದಾದ ಇನ್ನೊಬ್ಬ ಪ್ರಮುಖ ಗದ್ಯ ಲೇಖಕ

ರೆಂದರೆ ದಿ॥ ಜಿ. ವೆಂಕಟಯ್ಯನವರ ಕಿರಿಯ ಸೋದರ ಹಾಗೂ ಅಂಬೇಡ್ಕರ್‌ವಾದಿ ಲೇಖಕ ಡಾ॥ ಜಿ. ಗೋಪಾಲ್‌ರವರು. ಅವರ 'ಚಂದವಳ್ಳಿಯ ಅಸ್ಪೃಶ್ಯರು' 'ಸ್ಮಶಾನದ ಕಬ್ಬು', 'ವೈದ್ಯನ ವಿದೇಶ ಪ್ರವಾಸ' ಮುಂತಾದ ಕಥೆಗಳು ಹಾಗೂ ಪ್ರವಾಸ ಕಥನದ ಧಾಟಿಯ ಕೃತಿಗಳು ಪರಿಶೀಲನಾರ್ಹವೆನಿಸುತ್ತವೆ.

● ಈ ಅಂಶವನ್ನು ನನ್ನ ಇನ್ನೊಂದು ಪ್ರಬಂಧದಲ್ಲಿ ವಿವರವಾಗಿ ಚರ್ಚಿಸಿರುವೆನು. ನೋಡಿ: ದಲಿತ ಸಾಹಿತ್ಯ: ವಸ್ತುವಿನ ಸ್ವರೂಪ ಹಾಗೂ ಮೌಲ್ಯವಿಚಾರ. ಪ್ರಬುದ್ಧ ಕರ್ನಾಟಕ. ಸಂಪುಟ-60, ಸಂ-1.

●

ಸನ್ನಿವೇಶದ ವಸ್ತುಸ್ಥಿತಿ

–ಉದಯರವಿ ಶಿ.ವಿ.

'ಸನ್ನಿವೇಶದ ವಸ್ತುಸ್ಥಿತಿ' ಎಂಬ ಪ್ರಯೋಗಕ್ಕೆ ಇಬ್ಬರು ವಿದ್ವಾಂಸರ ಹೆಸರು ಹೊಂದಿಕೊಂಡಿವೆ. ಒಬ್ಬ–ಮಾನವಶಾಸ್ತ್ರಜ್ಞ, ಮಾಲಿನೌಸ್ಕಿ. ಮತ್ತೊಬ್ಬ ಭಾಷಾ ವಿಜ್ಞಾನಿ–ಫರ್ತ್. ಅರ್ಥವನ್ನು ಸಂದರ್ಭದೊಂದಿಗೆ ನೋಡಬೇಕೆಂಬ ಒಂದೇ ಉದ್ದೇಶ ಇವರಿಬ್ಬರದೂ ಆಗಿದ್ದರೂ, ಅವರ ದಾರಿಗಳು ಬೇರೆಬೇರೆಯಾಗಿದ್ದವು.

ಮಾಲಿನೌಸ್ಕಿಗೆ ಭಾಷೆಯ ಮೇಲೆ ಆಸಕ್ತಿ ಮೂಡಿದ್ದು ದಕ್ಷಿಣ ಪೆಸಿಫಿಕ್‌ನ ಟ್ರಾಬ್ರಿಯಾಂಡ್ ದ್ವೀಪಗಳಲ್ಲಿ ಸಂಶೋಧನೆ ನಡೆಸುತ್ತಿದ್ದಾಗ ತಾನು ದಾಖಲು ಮಾಡಿದ್ದ ವಿಷಯಗಳನ್ನು ಸಮಾಧಾನಕರವಾಗಿ ಭಾಷಾಂತರಿಸಲು ಅವನಿಗೆ ಸಾಧ್ಯವಾಗದೇ ಹೋದಾಗ ಇದರಲ್ಲಿ ಹೆಚ್ಚು ಆಸಕ್ತಿಮೂಡಿತು. ಉದಾಹರಣೆಗೆ, ಅಲ್ಲಿಯ ನಾವಿಕನೊಬ್ಬ ಜಂಬಕೊಚ್ಚಿಕೊಂಡಿದ್ದ ಮಾತನ್ನು ಹೀಗೆ ಭಾಷಾಂತರಿಸಿದ್ದ: 'ನಾವು ಓಡಿಸುತ್ತೇವೆ–ನಾವೇ ಮುಂದಿನ ಹಲಗೆ........ನಾವು ತಿರುಗಿ, ನಾವು ನೋಡುತ್ತೇವೆ, ನಮ್ಮ ಜೊತೆಗಾರರು, ಅವರು ಓಡಿಸುತ್ತಾರೆ–ಹಿಂದಿನ ಹಲಗೆ....' ಈ ಮಾತುಗಳನ್ನು ಬಳಸಿದ್ದ ಆ ಸಂದರ್ಭದಲ್ಲಿ ಇದನ್ನು ಕೇಳಿದ್ದರೆ ಮಾತ್ರ ಅರ್ಥವಾಗುತ್ತದೆ ಎಂದು ಮಾಲಿನೌಸ್ಕಿ

ಉದಯರವಿ ಶಿ.ವಿ., ಉಪನ್ಯಾಸಕ, ಇಂಗ್ಲಿಷ್ ವಿಭಾಗ, ಕಲ್ಪತರು ಕಲಾ ಕಾಲೇಜು,
ತಿಪಟೂರು-572 202

ವಾದಿಸುತ್ತಾನೆ. ಏಕೆಂದರೆ ಹಲಗೆ ಎಂಬ ಪದ 'ದೋಣಿಯ ಹುಟ್ಟು' ಎಂಬುದು ಆಗ ಮಾತ್ರ ಗೊತ್ತಾಗಬಲ್ಲದು.

'ಭಾಷೆಯನ್ನು ಬಳಸಿರುವ ಸನ್ನಿವೇಶದ ಸ್ಥಿತಿಯನ್ನು ಹೊರತುಪಡಿಸಿ, ಮೃತ ಭಾಷೆಗಳನ್ನು ಪರಿಗಣಿಸುವಂತೆಯೇ ಜೀವಂತ ಭಾಷೆಗಳನ್ನೂ ನೋಡಬಾರದು. ಕಾರ್ಯಪೊಂದರಲ್ಲಿ ತೊಡಗಿರುವ ಸಹಜವಾದ ವಸ್ತುಸ್ಥಿತಿಯಲ್ಲಿನ ಭಾಷೆಯನ್ನು ಹೆಚ್ಚು ಜೀವಂತವಾದದ್ದು ಎನ್ನಬಹುದು. ಗ್ರಂಥಗಳಲ್ಲಿ ಬಳಸುವ ಭಾಷೆ ಜೀವಂತ ಭಾಷೆಯ ಮಾದರಿ ಅಲ್ಲವೇ ಅಲ್ಲ. ಭಾಷೆಯು ತೀರಾ ಅಸ್ವಾಭಾವಿಕವಾಗಿ ಸಾಧಿತವಾದ ಕ್ರಿಯೆ. ಏಕೆಂದರೆ ಮೂಲತಃ ಭಾಷೆಯು 'ಆಲೋಚನೆಗಳನ್ನು ಪ್ರತಿಬಿಂಬಿಸುವ ಕನ್ನಡಿ' ಆಗಿರಲಿಲ್ಲ. ಭಾಷೆ 'ಕ್ರಿಯಾವಿಧಾನ' ಮಾತ್ರವೇ ಹೊರತು ಆಲೋಚನೆಗಳ ವಕೀಲನಲ್ಲ'.

ಮಾಲಿನೌಸ್ಕಿಯ ವಾದವು ಮುಖ್ಯವಾಗಿ, ಆತ ಅಧ್ಯಯನ ನಡೆಸುತ್ತಿದ್ದ ಜನರು ಬಳಸುವ ಭಾಷೆ ಹೇಗೆ ತಮ್ಮ ದೈನಂದಿನ ಚಟುವಟಿಕೆಗಳಿಗೆ ಹೊಂದಿಕೊಂಡು ಅವಿಭಾಜ್ಯ ವಾಗಿದ್ದವು ಎಂಬುದರ ಮೇಲೆ ಆಧಾರವಾಗಿತ್ತು. ಹೆಚ್ಚು ನಾಗರೀಕವಾದ ನಮ್ಮ ಸಮಾಜದಲ್ಲಿ ಕೂಡಾ, ಭಾವನೆಗಳನ್ನು ಉಭಯ ಕುಶಲಗಳನ್ನು ವ್ಯಕ್ತಪಡಿಸುವ ಕೆಲವು ಶಬ್ದಪ್ರಯೋಗಗಳು ಗಮನಾರ್ಹವಾಗಿವೆ. 'ಹೇಗಿದ್ದೀರಿ?', 'ಚೆನ್ನಾಗಿದ್ದೀರಾ?' ಇಂತಹ ಪದಗಳು ಅರ್ಥವನ್ನು ತಲುಪಿಸದೆ ಸಾಮಾಜಿಕ ಕ್ರಿಯೆಯಲ್ಲಿ ಮಾತ್ರ ತೊಡಗುತ್ತದೆ. ಭಾಷೆಯ ಈ ಅಂಶವನ್ನು 'ವ್ಯಕ್ತ ಸಂಪರ್ಕ'(Phatic Communion) ಎಂದಿದ್ದಾನೆ.

ತೊದಲು ಮಾತನ್ನು ಬಳಸುವ ಹಂತದಿಂದಲೂ ತನ್ನ ಸುತ್ತಲಿನ ಪ್ರಪಂಚವನ್ನು ನಿರ್ವಹಿಸಲು ಮಗು ಪದಗಳನ್ನು 'ಸಮರ್ಥ ಶಕ್ತಿ'ಯಾಗಿ ಬಳಸುತ್ತದೆ. ಹೀಗೆಯೇ ಆದಿಮಾನವನಿಗೆ ಪದಗಳು ಪ್ರಮುಖ ಅಸ್ತ್ರಗಳಾಗಿದ್ದವು. ಮಾಲಿನೌಸ್ಕಿ ವಾದಿಸುವಂತೆ ಆದಿಮಾನವನಿಗೆ ಪದಗಳು ಹಾಗೂ ಯಕ್ಷಿಣಿ ಈ ಎರಡರಿಂದಲು ಅಧಿಕಾರ ಸಿಗುವುದ ರಿಂದ ಈ ಎರಡರಲ್ಲಿ ಹೆಚ್ಚು ಸಾಮ್ಯಗುಣಗಳಿವೆ.

ಭಾಷೆಯು 'ಕ್ರಿಯೆಯ ವಿಧಿ' ಎಂಬ ಮಾಲಿನೌಸ್ಕಿಯ ಮಾತು, ಭಾಷೆಯು ವಿಷಯಗಳನ್ನು ಹೇಳುವ ಕೆಲಸವನ್ನು ಮಾತ್ರ ಮಾಡುವುದಿಲ್ಲ ಎಂಬುದನ್ನು ನೆನಪು ಮಾಡುತ್ತದೆ. ಆದರೆ ಅವನ ವಾದವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಲು ಎರಡು ಕಾರಣಗಳಿಂದ ಸಾಧ್ಯವಿಲ್ಲ. ಮೊದಲನೆಯದಾಗಿ 'ಕ್ರಿಯೆಯ ವಿಧಿ' ಎಂಬ ಮಾತು ಪುರಾತನ ಕಾಲದ ಮನುಷ್ಯ ಹಾಗೂ ಮಗುವಿನ ಮೂಲಭೂತ ಅಗತ್ಯಗಳಲ್ಲಿ ಮಾತ್ರ ಸ್ಪಷ್ಟವಾಗಿ ಕಂಡುಬರುತ್ತದೆ. ಅವನು ಪರಿಗಣಿಸಿದ್ದ ಭಾಷೆ ನಮ್ಮ ಭಾಷೆಗಿಂತ ಹೆಚ್ಚು

ಅನಾಗರೀಕವಾದದ್ದು. ಹೀಗಾಗಿ ಅದು ಪ್ರಾಚೀನ ಸಮಾಜದ, ಮೂಲಭೂತ ವ್ಯಾವಹಾರಿಕ ಅಗತ್ಯಗಳಿಗೆ ಮಾತ್ರ ಸೀಮಿತವಾದ ಅನಾರ್ಯವಾದದ್ದು ಎಂದು ಕಲ್ಪಿಸಿಕೊಂಡಿದ್ದ. ಸನ್ನಿವೇಶದ ವಸ್ತುಸ್ಥಿತಿಯ ಮೊರೆಹೋಗುವ ಅಗತ್ಯ ಪುರಾತನ ಭಾಷೆಗಳ ಅಧ್ಯಯನಗಳಲ್ಲಿ ಹೆಚ್ಚು ಎಂಬ ಅವನ ಧೋರಣೆ ತಪ್ಪು. ಏಕೆಂದರೆ, ನಾಗರೀಕ ಜನತೆಯ ಕೌಶಲ್ಯವು ಅನಾರ್ಯರಲ್ಲಿ ಇಲ್ಲದೆ ಇದ್ದಿರಬಹುದು. ಆದರೆ ಯಾವುದೇ ಸ್ವಾಭಾವಿಕ ಭಾಷೆಯನ್ನು, ಪ್ರಾರಂಭಿಕ ಹಂತದ್ದು(Primitive) ಎಂದು ಯಾವುದೇ ವಿಧದಲ್ಲೂ ಪರಿಗಣಿಸಲು ಸಾಧ್ಯವಿಲ್ಲ. ಅನೇಕ ಭಾಷೆಗಳಲ್ಲಿ ಕೈಗಾರಿಕಾ ಪ್ರಪಂಚಕ್ಕೆ ಸಂಬಂಧಿಸಿದ ತಾಂತ್ರಿಕ ಶಬ್ದಭಂಡಾರ ಇಲ್ಲದಿರಬಹುದು. ಆದರೆ, ಇದು ಆ ಸಮಾಜದ ಇಷ್ಟ ಆಸಕ್ತಿಗಳ ಪ್ರತಿಬಿಂಬವಷ್ಟೇ ಹೊರತು ಭಾಷೆಯ ಅನಾಗರೀಕತೆಯಲ್ಲ. ಭಾಷಾಶಾಸ್ತ್ರದ ನೆಲೆಯಿಂದ ಹೇಳುವುದಾದರೆ. ಯಾವ ಒಂದು ಭಾಷೆಯನ್ನೂ ಮತ್ತೊಂದು ಭಾಷೆಗಿಂತ, ಪುರಾತನ, ಅನಾರ್ಯ ಎಂದು ಹೇಳಲು ಸಾಧ್ಯವಿಲ್ಲ. ಈ ರೀತಿಯ ತಪ್ಪು ಕಲ್ಪನೆ ಹೊಂದಿರುವ ವಿದ್ವಾಂಸನೆಂದರೆ ಮಾಲಿನೌಸ್ಕಿ ಒಬ್ಬನೇ.

ಭಾಷಾಂತರದ ತೊಂದರೆಗಳು ಉಂಟಾಗುವುದು, ಮಾಲಿನೌಸ್ಕಿ ಕಂಡುಕೊಂಡ ಪ್ರಕಾರ ಭಾಷೆಗಳ ನಡುವಣ ವ್ಯತ್ಯಾಸಗಳಿಂದ ಮಾತ್ರ, ಒಂದು ಭಾಷೆ ಮತ್ತೊಂದಕ್ಕಿಂತ (Primitive) ಆದ್ದರಿಂದ ಅಲ್ಲ ಎನ್ನುತ್ತಾನೆ.

ಎರಡನೆಯದಾಗಿ ಮಾಲಿನೌಸ್ಕಿಯ ವಿಚಾರಗಳು, ಕಾರ್ಯಶೀಲ ಶಬ್ದಾರ್ಥ (Semantic) ಸಿದ್ಧಾಂತಗಳಿಗೆ ಆಧಾರವಾಗಿಲ್ಲ. ಸನ್ನಿವೇಶವನ್ನು ಹೇಗೆ ಕ್ರಮಬದ್ಧವಾಗಿ ಉಪಯೋಗಿಸಿ ಅರ್ಥವನ್ನು ಪಡೆಯಬಹುದು ಎಂದು ಚರ್ಚೆಯನ್ನೂ ಮಾಡುವುದಿಲ್ಲ. ಮತ್ತೊಂದು ಸರಳ ವಿಷಯವೆಂದರೆ, ಟ್ರೊಬ್ರಿಯಾಂಡ್ ದ್ವೀಪಸ್ಥರ ಬಹುತೇಕ ಭಾಷಾ ಚಟುವಟಿಕೆಯೂ ಸನ್ನಿವೇಶಕ್ಕೆ ಸುಲಭವಾಗಿ ಸಂಬಂಧಿಸಿಲ್ಲ. ಉದಾಹರಣೆಗೆ, ಅವನು ಕಥಾನಕಗಳನ್ನು ಚರ್ಚಿಸುತ್ತಾನೆ. ಆದರೆ, ಕಥೆ ಯಾವುದೇ ಇರಲಿ, ಕಥೆಯನ್ನು ಹೇಳುವ ಮತ್ತು ಕೇಳುವ ಸನ್ನಿವೇಶವು ಎಲ್ಲ ಕಾಲದಲ್ಲೂ ಒಂದೇ ಆದದ್ದು.

ಸನ್ನಿವೇಶವನ್ನು ಅರ್ಥಸೂಚಕವೆಂದು ಪರಿಗಣಿಸುವುದಾದರೆ, ಎಲ್ಲ ಕಥೆಗಳಿಗೂ ಒಂದೇ ಅರ್ಥವಿರಬೇಕು. ಮಾಲಿನೌಸ್ಕಿಯ ಪರಿಹಾರವು 'ಆನುಸಂಗಿಕ ಸನ್ನಿವೇಶ'ದ ಮೊರೆಹೋಗುವುದರಲ್ಲಿತ್ತು. ಅಂದರೆ, ಕಥಾನಕ ಹೇಳುವಾಗಿನ ಹೊರಗಿನ ಸನ್ನಿವೇಶವಲ್ಲ, ಕಥಾನಕದೊಳಗಿನ ಸನ್ನಿವೇಶ. ಆದರೆ, ತಾನು ಚರ್ಚೆಯಿಂದ ಗಡೀಪಾರು ಮಾಡಲು ಕಾತರನಾಗಿದ್ದ ಆಲೋಚನೆ, ಕಲ್ಪನೆಗಳಿಗಿಂತ ಬೇಗ ಗಮನಿಸಬಹುದಾದ ಮಾನ್ಯತೆ ಇದಕ್ಕೆ ಇಲ್ಲ ಹಾಗೂ ವಾಸ್ತವವಾಗಿ ಸೂತ್ರೀಕರಿಸಲು ಸಾಧ್ಯವಿಲ್ಲ.

ಫರ್ತ್ ಮಾಲಿನೌಸ್ಕಿಗೆ ಋಣಿಯಾಗಿರುವುದಾಗಿ ಹೇಳಿಕೊಂಡಿದ್ದಾನೆ. ಆದರೆ ಮಾಲಿನೌಸ್ಕಿಯ ಸಮಸ್ಯೆ ಬಗೆಹರಿಸುವಲ್ಲಿ ಸನ್ನಿವೇಶದ ವಸ್ತುಸ್ಥಿತಿಯು ಸಂಕ್ಷಿಪ್ತ ಹಾಗೂ ಕರಾರುವಾಕ್ಕಾದ ಭಾಷಾವಿಜ್ಞಾನದ ಮನೋಭಾವ ಇಲ್ಲ ಎಂಬುದು ಇವನ ಅಭಿಮತ. ಏಕೆಂದರೆ, ಮಾಲಿನೌಸ್ಕಿಯ ಸನ್ನಿವೇಶದ ವಸ್ತುಸ್ಥಿತಿಯು ಸಾಮಾಜಿಕ ಪ್ರಕ್ರಿಯೆಯಾದ್ದರಿಂದ ಅದನ್ನು ಬೇರೆಯಾಗಿ ಪರಿಗಣಿಸಬಹುದು ಅಥವಾ ಅದು ಪರಿಶೀಲಿಸಬಹುದಾದ ನಿಜವಾದ ಘಟನೆಗಳ ಕ್ರಮವಾದ ಸರಮಾಲೆ.

ಭಾಷಾ ವಿಜ್ಞಾನಿಯು ಬಳಸುವ ಪರಿಕರಗಳಾದ ವ್ಯಾಕರಣದ ವರ್ಗಗಳಂತೆಯೇ ಸನ್ನಿವೇಶದ ವಸ್ತುಸ್ಥಿತಿಯನ್ನು ಅದರ ಒಂದು ಭಾಗವಾಗಿ ಬಳಸಲು ಫರ್ತ್ ಬಯಸಿದ. ಭಾಷಾ ಸಂದರ್ಭಗಳಿಗೆ ಅದನ್ನು ಅತಿಯಶಸ್ವಿಯಾಗಿ ಅನ್ವಯಿಸಲು ಸರಿಹೊಂದುವ ವ್ಯವಸ್ಥಿತ ಜೋಡಣೆಗೆ ಕೆಳಗಿನ ವರ್ಗಗಳನ್ನು ಸೂಚಿಸಿದ :

ಅ. ಭಾಗವಹಿಸುವವರ ಸೂಕ್ತ ಲಕ್ಷಣಗಳು : ವ್ಯಕ್ತಿಗಳು, ವ್ಯಕ್ತಿತ್ವಗಳು.

(i) ಭಾಗಿಗಳ ವಾಚಕ ಕ್ರಿಯೆ.

(ii) ಭಾಗಿಗಳ ವಾಚಕೇತರ ಕ್ರಿಯೆ.

ಆ. ಸಮಂಜಸವಾದ ಉದ್ದೇಶಗಳು.

ಇ. ವಾಚಕಕ್ರಿಯೆಯ ಪರಿಣಾಮಗಳು.

ಈ ರೀತಿ ಸನ್ನಿವೇಶದ ವಸ್ತುಸ್ಥಿತಿಯನ್ನು ವರ್ಗೀಕೃತ ಗುಂಪುಗಳಾಗಿ ಮಾಡಬಹುದು. ಇದು ಭಾಷೆಯೊಂದರ ಭಾಷಾಶಾಸ್ತ್ರದ ಭಾಗವಾಗಬೇಕಾದರೆ ಅಗತ್ಯ. ಸನ್ನಿವೇಶದ ವಸ್ತುಸ್ಥಿತಿಗೆ ಉದಾಹರಣೆಯಾಗಿ ಒಂದು ವಾಕ್ಯ :

'ರವಿಗೆ ಒಂದನ್ನು ಕೊಡಿಸುತ್ತೇನೆ.'

ಇಲ್ಲಿ ಅತಿಕಡಿಮೆ ಎಂದರೆ ಎಷ್ಟುಜನ ಪಾಲುಗೊಂಡಿದ್ದಾರೆ? ಮೂರೆ? ನಾಲ್ಕೆ? ಈ ಮಾತು ಎಲ್ಲಿ ನಡೆದಿರಬಹುದು? ರವಿ ಎಲ್ಲಿದ್ದಾನೆ? ಸಮಂಜಸ ಉದ್ದೇಶಗಳೇನು? ಈ ವಾಚಕ ಕ್ರಿಯೆಯ ಪರಿಣಾಮವೇನು?

ಸನ್ನಿವೇಶದ ವಸ್ತುಸ್ಥಿತಿಯನ್ನು ಭಾಷಾ ವಿಜ್ಞಾನಿ ಉಪಕರಣವನ್ನಾಗಿ ಅಥವಾ ವರ್ಣನೆಯ ಒಂದು ತಂತ್ರವಾಗಿ ಫರ್ತ್ ಕಂಡ. ವ್ಯಾಕರಣ ಒಂದು ಸ್ಥರದ ತಂತ್ರವಾಗಿರುವಂತೆ ಇದು ಮತ್ತೊಂದು ಸ್ಥರ. ಎರಡೂ ಒಂದೇ ರೀತಿಯಲ್ಲಿ ಅಮೂರ್ತ

ವಾದವು. ಏಕೆಂದರೆ, ಫರ್ತ್‌ಗೆ ಭಾಷಾಶಾಸ್ತ್ರವು ಅರ್ಥಗಳನ್ನು ನೀಡುವ ಇಂತಹ ತಂತ್ರಗಳ ಒಂದು ಶ್ರೇಣಿ. ಇಲ್ಲಿ ಒಂದು ಸಾದೃಶ್ಯವನ್ನು ಬಳಸುತ್ತಾನೆ. ಸೂರ್ಯನ(ಬಿಳಿ) ಬೆಳಕು ಪ್ರಿಸಂ ಮುಖಾಂತರ ಹಾದುಹೋದರೆ, ವಿವಿಧ ತರಂಗಾಂತರಗಳ ಬಣ್ಣದ ಪಟ್ಟಿ ಕಾಣುವಂತೆ, ಭಾಷಾವಿಜ್ಞಾನಿಯು ಅರ್ಥವನ್ನು ಪ್ರವೀಣ ಹೇಳಿಕೆಗಳ ವರ್ಣಪಟಲದಲ್ಲಿ ಚದುರಿಸುತ್ತಾನೆ.

ಹೀಗೆ ಫರ್ತಿಗೆ ಭಾಷಾಶಾಸ್ತ್ರದ ಎಲ್ಲ ಬಗೆಯ ವಿವರಣೆಗಳು, ಧ್ವನಿಶಾಸ್ತ್ರ, ವ್ಯಾಕರಣ, ಸನ್ನಿವೇಶದ ವಸ್ತುಸ್ಥಿತಿ, ಇತ್ಯಾದಿಗಳೆಲ್ಲವೂ ಅರ್ಥದ ಹೇಳಿಕೆಗಳು. ಅರ್ಥವನ್ನು ಸನ್ನಿವೇಶದ ವಸ್ತುಸ್ಥಿತಿಯಾನುಸಾರ ವಿವರಿಸುವುದು, ಭಾಷಾವಿಜ್ಞಾನಿಯು ಭಾಷೆಯನ್ನು ಸತ್ಕರಿಸುವ ಅನೇಕ ವಿಧಗಳಲ್ಲಿ ಒಂದು ಮತ್ತು ತಾತ್ವಿಕವಾಗಿ ಅದು ಬೇರೆ ಸತ್ಕಾರಗಳಿಗಿಂತ ಭಿನ್ನವಾದುದಲ್ಲ. 'ಅರ್ಥ' ಎಂಬ ಪದ ಬಳಸುವಾಗ ಅದರಲ್ಲಿ ದ್ವಂದ್ವಾರ್ಥ ಇರುವುದು ಫರ್ತ್ ಮನಗಂಡಿದ್ದ ಎಂದು ಕೆಲವರು ಅಭಿಪ್ರಾಯಿಸುತ್ತಾರೆ. ಏಕೆಂದರೆ, ಸನ್ನಿವೇಶದ ವಸ್ತುಸ್ಥಿತಿಯು (ಶಬ್ದಾರ್ಥ-semantic) ಸಾಧಾರಣ ರೀತಿಯಲ್ಲಿ ಅರ್ಥ ಕೊಡಬಹುದು. ವ್ಯಾಕರಣದಂತಹ ಬೇರೆ ಹಂತಗಳು ಈ ರೀತಿಯ ಅರ್ಥಗಳನ್ನು ಕೊಡುವುದಿಲ್ಲ. ಹೀಗಾಗಿ, ಎಲ್ಲ ಶ್ರೇಣಿಗಳೂ ಅರ್ಥದ ಹೇಳಿಕೆಗಳು ಹಾಗೂ ಸನ್ನಿವೇಶದ ವಸ್ತುಸ್ಥಿತಿಯೂ ಈ ರೀತಿಯ ಒಂದು ಹಂತ ಎನ್ನುವಾಗ ಫರ್ತ್ ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಅರ್ಥ ಎಂಬುದನ್ನು ಎರಡು ರೀತಿಯಲ್ಲಿ ಬಳಸಿದ್ದಾನೆ. ಒಂದು ಕ್ರಮಬದ್ಧವಾದದ್ದು ಮತ್ತೊಂದು ತನ್ನದೇ ಆದ ಅರ್ಥದಲ್ಲಿ.

ಈ ವಿಮರ್ಶೆ ಸಂಪೂರ್ಣವಾಗಿ ನಿಷ್ಪಕ್ಷವಾದುದ್ದಲ್ಲ. ಏಕೆಂದರೆ, ತಾತ್ವಿಕವಾಗಿ 'ಭಾಷೆ ಮತ್ತು ಹೊರಗಿನ ಪ್ರಪಂಚ' ಹಾಗೂ 'ಸಂಪೂರ್ಣವಾಗಿ ಭಾಷೆಯಲ್ಲೇ' ಇರುವ ವರ್ಣನೆಯ ಹಂತಗಳ ವ್ಯತ್ಯಾಸಗಳನ್ನು ಸರಳವಾಗಿ ಚಿತ್ರಿಸಲು ನಿರಾಕರಿಸಿರುವುದರಿಂದ, ಫರ್ತ್‌ನನ್ನು ಟೀಕಿಸುವ ಬದಲಾಗಿ ಹೊಗಳಬೇಕು. ಭಾಷೆಯನ್ನು ಸಂಪೂರ್ಣವಾಗಿ ವರ್ಣಿಸುವ ಭಾಷಾವೈಜ್ಞಾನಿಕ ಮಾದರಿಯನ್ನು ಫರ್ತ್ ಮಾಡಲಿಲ್ಲ. (ಬಹುತೇಕ ಭಾಷಾವಿಜ್ಞಾನಿಗಳೆಲ್ಲ ಇಂತಹ ಮಾದರಿ ಸಾಧ್ಯ ಹಾಗೂ ಅಗತ್ಯ ಎಂದು ಅಂದುಕೊಂಡಿದ್ದರೂ) ಇಂತಹ ಮಾದರಿ ತಾತ್ವಿಕವಾಗಿಯೂ ಸಾಧ್ಯವಿಲ್ಲ ಎಂದ. ರೊಟ್ಟಿಯನ್ನು ಬೇಕಾದಲ್ಲಿ ಮುರಿಯುವಂತೆ, ಸಿಕ್ಕಸಿಕ್ಕಲ್ಲಿ ವಾಕ್ಯಗಳನ್ನು ಕಡಿದು, ಸಾಧ್ಯವಾದಲ್ಲಿ ಸಾಧ್ಯವಾದಷ್ಟು-ಅರ್ಥದ ಭಾಗಶಃ ಹೇಳಿಕೆಗಳನ್ನು ಮಾತ್ರ ಒಬ್ಬ ಭಾಷಾ

ವಿಜ್ಞಾನಿ ನೀಡಬಲ್ಲ ಎಂದು ಫರ್ತ್ ನಂಬಿದ್ದ. ಇದು ನಿಜವಾಗಿದ್ದಲ್ಲಿ ಅರ್ಥದ ಹಾಗೂ ಅರ್ಥವಿಲ್ಲದರ ಬಗ್ಗೆ ಹೇಳಿಕೆಗಳನ್ನು ಪ್ರತ್ಯೇಕಿಸುವ ಅಗತ್ಯ ಇಲ್ಲ.

ಫರ್ತ್‌ನ ವಿಚಾರದ ಗಂಭೀರ ವಿಮರ್ಶೆಯೊಂದು ಅದಕ್ಕೆ ಸೀಮಿತ ಮಾನ್ಯತೆ ಮಾತ್ರ ಇರುವುದು ಎಂದು ಹೇಳುತ್ತದೆ. ಸನ್ನಿವೇಶದ ವಸ್ತುಸ್ಥಿತಿ ಕೆಲವು ವಾಕ್ಯಗಳಿಗೆ ಸರಿಹೊಂದುವುದಾದರೂ, ನಾವು ಬಳಸುವ ಬಹುತೇಕ ವಾಕ್ಯಗಳಿಗೆ ಅದು ಸರಿಹೊಂದ ಲಾರದು. ಹೀಗೆಂದ ಮಾತ್ರಕ್ಕೆ, ಫರ್ತ್‌ನ ವಿಚಾರಗಳು ತಪ್ಪು ಎನ್ನಲಾಗದು. ನಮಗೆ ಸನ್ನಿವೇಶದ ವಸ್ತುಸ್ಥಿತಿಯನ್ನು ಬಳಸಿ ಹೆಚ್ಚು ದೂರ ಹೋಗಲು ಸಾಧ್ಯವಾಗದಿದ್ದರೆ, ಅದು ಶಬ್ದಾರ್ಥ(Semantics)ದ ಬಗ್ಗೆ ಏನೆಲ್ಲಾ ಹೇಳುವುದರಿಂದ ಉಂಟಾದ ಪರಿಣಾಮ, ಏನನ್ನೂ ಹೇಳದೆಯೇ ಇರುವುದಕ್ಕಿಂತ ಸ್ವಲ್ಪ ಹೇಳುವುದು ಲೇಸು. ಫರ್ತ್‌ನ ಪ್ರಕಾರ ಇಡೀ ಅರ್ಥವನ್ನು ಗ್ರಹಿಸುವುದು ಅಸಾಧ್ಯ. ಅರ್ಥದ ಭಾಗಶಃ ಹೇಳಿಕೆಗಳನ್ನು ಮಾತ್ರ ನೀಡಲು ಹೊರಟಿದ್ದು ಅವನ ಒಳ್ಳೆಯ ಗುಣ. ನಾವು ಸಾಧಿಸ ಬಹುದಾದ್ದು ಇಷ್ಟೇ ಇರಬಹುದೇನೋ. ಕೆಲವು ವಿದ್ವಾಂಸರಂತೆ ಸನ್ನಿವೇಶದ ಸಿದ್ಧಾಂತ ಗಳು ಕೆಲಸಕ್ಕೆ ಬಾರದವು ಎಂದು ಸಂಪೂರ್ಣವಾಗಿ ತಿರಸ್ಕರಿಸುವುದು ಸುಲಭ. ಆದರೆ, ವಾಕ್ಯ ಮತ್ತು ಪದಗಳ ಅರ್ಥಗಳು ನಮ್ಮ ಅನುಭವದ ಪ್ರಪಂಚಕ್ಕೆ ಸಂಬಂಧಿಸಿದವು ಎಂಬ ಸರಳ ಸತ್ಯವನ್ನು ತಿರಸ್ಕರಿಸಿದರೆ, ಅವುಗಳನ್ನು ಅಲ್ಲಗಳೆಯುವುದು ತೀರಾ ಕಠಿಣ.

(ಸಾಧಾರ)

ಚಿನ್ನವನ್ನು ತೆಗೆಯೋರು ಅನ್ನವನ್ನು ಕಾಣದೋರು
ಬಟ್ಟೆಯನ್ನು ನೇಯೋರು ಬರಿಮೈಲೇ ಹೋಗೋರು
ಹೇಳಿದಂತೆ ಕೇಳುತಾರೆ ನನ್ನ ಜನಗಳು
ಗಾಳಿಯಲ್ಲೆ ಬಾಳುತಾರೆ ನನ್ನ ಜನಗಳು.

–ಸಿದ್ಧಲಿಂಗಯ್ಯ

ಹೊಗೆಯ ಅಮಲಿನ ಹುಡುಗಿಗೆ

ತುಟಿತುಟಿಯ ತೀಡಿ ಎದೆ ಮೀಟಿದಂತೆ ಅರಳಾಗಿ ಮಾತು ಹರಿದು
ಸಟೆಯಲ್ಲ ದಿಟವೆ ! ಹೊಗೆಬಂತು ಬಿಳಿಯ ತಂತಾಗಿ ನೀರು ಹರಿದು
ಥ್ವಟ ಥ್ವಟಸೆ ಜೇನುಗೊ ಬಿಸಿಜೇನಿಗಾಗಿ ಕಾದಿರುವೆ ರೆಪ್ಪೆ ತೆರೆದು
ಪೊಟರೆ ಹಲ್ಲೆಗೆ ಬೆಂಕಿ ಕಾವಲಿಟ್ಟು; ಮರಮರಕೆ ಮಯ್ಯ ಮಸೆದು

ರಂಗೇರಿದಂಥ ಮಧುಬಟ್ಟಲಲ್ಲಿ ಉರಿಉರಿದು ಬೂದಿಯಾಗಿ
ಬಂಗಾರವರಳಿ ಹೂತೋಟದಲ್ಲಿ ಸುರಿಸುರಿದು ಸೋನೆಯಾಗಿ
'ಅಂಗಾಂಗವಾಯ್ತು ನವಿರೆದ್ದ ರೋಮ ಬಟಬಟಾ ಬಯಲಿನಲ್ಲಿ
ಭೃಂಗನೇವರಿಸಿ ಮೀಸೆ ಹುರಿಗೊಳಿಸಿ ದಳಧಾಳಿ ತೆರೆದಗೋಳ

ಇನ್ನಿಂಥ ಬಣ್ಣ ಹೊಸಲೋಕ ದಟ್ಟಿ ತಾನುಟ್ಟು ಮೆರೆದ ಹಾಗೆ
ಚೆನ್ನಿಗರ ಎದೆಯ ಕೋಗಿಲೆಯ ನಾದ ಮೊರೆದಿತ್ತು. ಭೇರಿಯಾಗಿ
ಬನ್ನಿ ಮೂಸಿರಿ ಬಿಸಿಘಮಲ ಸ್ವಾದ ಬರಿದಾಗದೆಂದು ಕಮಲ
ಘನವೆತ್ತ ಭೋಗ ನವರಾಗ ಹಾಡಿ ಹದಗೊಂಡೊ ಲೋಕ ಸಕಲ

ದೂರದೂರಿನಲಿ ನೂರುನೇತ್ರಗಳು ಬಲೆಬಲೆಯನೆಣೆದುಕೊಂಡೊ
ಮಿರುಮಿರುಗುವಂಥ ಕಿರುಪರದೆಯಲ್ಲಿ ತಮ್ಮನ್ನು ತಾವೆ ಕಂಡೊ
ತೆರೆಸರಿದ ಹಾಗೆ ಧರೆಗೆದ್ದ ನಿನ ವಿಜುಗೀಷು ಮಾಲೆ ತೊಟ್ಟು
ಗರಿಗೆದರಿ ಕುಣಿದ ಮುಂಗಾರ ಸೋಗೆ ಕೊರಳರಳಿ ಕುಣಿತ ಬಿಟ್ಟೊ.

ಓ ಯಾಜ್ಞಸೇನಿ ನಡುಹಗಲ ಮೋಡ ಸರಿದೈತೆ ಬಾರೆ ನೋಡು
ಓ ಅಮಲ ಹುಡುಗಿ ಓ ತೇಲುಗಣ್ಣೆ ಹಾ ! ತೆವಲ ಬಿಟ್ಟು ಹಾಡು
ಆ ಹೊಗೆಯ ಹಾಗೆ ಅಸ್ಪಷ್ಟವಾಗಿ ಆ ಬಯಲ ಸವರ ಬೇಡ
ಈ ಬಗೆಯ ಗಾಳಿ ಬೀಸೈತೆ ಸೀಳಿ ಆ ಎಲ್ಲ ದಿಕ್ಕ ಜಾಡ.

—ಎಲ್.ಎನ್. ಮುಕುಂದರಾಜ್

ಎಲ್.ಎನ್. ಮುಕುಂದರಾಜ್ C/o ಜಿ.ಎನ್. ಗೌಡ, ನಂ. 5, 1ನೇ ಕ್ರಾಸ್, ನಾಗಪ್ಪ ರಸ್ತೆ,
ಅರಮನೆಗುಟ್ಟಹಳ್ಳಿ, ಬೆಂಗಳೂರು-560 003

ಕಥೆ

ಸೇಡು

—ಸಿದ್ಧರಾಮಯ್ಯ

ಗುರೇಗೌಡ ಊರಿನಲ್ಲಿರೋದೆ ಅಪರೂಪ. ತನ್ನ ತಾಯಿಯ ತವರುಮನೇಕಡೆಯ ಆಸ್ತಿವಿಚಾರವಾಗಿ ಇವನು ಚಿತ್ರದುರ್ಗದ ಕೋರ್ಟಿನ ಕಟ್ಟೆಗೆ ಈಗ್ಗೆ ಎರಡು ವರ್ಷದಿಂದ ಎಡತಾಕ್ತಾ ಇರೋದೇ ಬದುಕಾಗಿದೆ. ಒಂದು ಸಾರಿ ಮನೆಬಿಟ್ಟು ಹೋದ ಅಂದ್ರೆ ಎಂದು ಹಿಂತಿರುಗಿಯಾನು ಅನ್ನೋದು ಮನೆ ಹೆಂಗಸರಿಗೂ ನಿಖರ ಗೊತ್ತಿರ್ತಿರಲಿಲ್ಲ. ಅವನ ಪಾಡಿಗೆ ಅವನನ್ನು ಬಿಟ್ಟು, ನಿತ್ಯದ ಕತ್ತೆದುಡಿತ ಮಾಡಿಕೊಂಡು ಸಂಸಾರ ನೀಗೋದು ತನ್ನ ಪಾಡೂಂತ ಅವನ ಹೆಂಡತಿ ತುಳಸಮ್ಮನ ಸೋತ ನಂಬಿಕೆಯಾಗಿತ್ತು. ಕಾರಣ, ಮನೆ ಬಿಡುವಾಗೊಮ್ಮೆ ಗೌಡನ ಮನಸ್ಸು ಹೇಗಿರ್‍ತಿತ್ತೊ ಹಾಗೆ ಮನೆಗೆ ಹಿಂತಿರುಗಿ ಬರುವಾಗೊಮ್ಮೆ ಇರ್‍ತಿರ್‍ಲಿಲ್ಲ. ಸಿಟ್ಟು ತುಂಬಿಕೊಂಡು ಬಂದಾಗೊಮ್ಮೆ–ಮನೇಲಿ ಅವಳು ಕೈಕಾಲಿಗೆ ನೀರು ಕೊಡೋದು ತಡವಾಯಿತು ಅಂತ–ನಡ ಬೀಳ ಹೊಡೆದದ್ದೂ ಉಂಟು. ಹೇಳಲಾರದ ಗೋಳನ್ನು ನುಂಗಿದ್ದೆ ನಿಸೂರ ಅಂತಾ ನೀಚತಾ ಇದ್ದ ತುಳಸಮ್ಮನಿಗೆ 'ಈ ಕೋರ್ಟಿನ ದಂಧೆ ಒಂದು ಆದಷ್ಟು ಬೇಗ ಮುಗುದ್ರೆ ಸಾಕಪ್ಪ ದೇವರೇ' ಅನ್ನಿಸ್ತಿತ್ತು.

ಈ ಮಧ್ಯೆ ಗುರೇಗೌಡನ ಬಗ್ಗೆ ಅಪರೂಪಕ್ಕೆ ಊರಿನ ಜನ ಏನೇನೋ ಅರ್ಥ-ಬೇರೆ ಗುಸುಗುಡುತ್ತಿದ್ದರು. ಗೌಡ ಊರು ಬಿಟ್ಟು ವಾರಗಟ್ಟಲೇ ಕಣ್ಮರೆಯಾಗೋದು ಚಿತ್ರದುರ್ಗದ ಕೋರ್ಟಿಗಲ್ಲ, ಗಂಡನ್ನ ಬಿಟ್ಟು ತೌರುಮನೆ ಸೇರಿದಾಳಲ್ಲs, ಆ ಬಿಡುಸೂಡಿ ಕೆಂಗಿಲಕ್ಕನ ಮಗ ಚಿಕ್ಕನ ಹಿರೇಯೆಣ್ತಿ, ಅವಳ್ತಾಕೆ ಹೋಗ್ತಾನೆ. ಊರು ಬಿಡೋಕೊಂದು ನೆವ ಬೇಕು, ಅದಕ್ಕೆ ಆಸ್ತಿಯಿಚಾರದ ಕೋಲ್ಟು ಅಂತಾನೆ. ಹೇಳಕಾತು ಕೋಲ್ಟಿನ ಯೆಸರು, ದೇಪುರದಾಗೈತೆ ಅವನಿಗ್ಬೇಕಾದ ಬಸುರು-ಅಂತಿದ್ರು. ಎಲ್ಲ ಗೊತ್ತಿದ್ರೂ ಬಾಯಿಬಿಟ್ರೆ ಬಣ್ಣಗೇಡು ಅನ್ನೋದು ತುಳಸಮ್ಮನ ಮೌನಕ್ಕಿದ್ದ ಅರ್ಥವಾಗಿತ್ತು. ಆದರೆ ಈಸಾರಿ ಮನೆಗೆ ಬಂದ ಗೌಡ ಹದಿನೈದು ದಿನ ಕಳೆದ್ರೂ ಊರು ಬಿಟ್ಟು ಹೋಗೋ ಆತುರ ತೋರಿಸಿದವನಾಗಲಿಲ್ಲ. ಅದಕ್ಕಿಂತ ಹೆಚ್ಚಿನದಾಗಿ, ದಿನವೂ ಎದ್ದವನೆ ತೋಟಕ್ಕೆ ಹೋಗೋದು, ಪ್ರತಿ ತೆಂಗಿನಮರದ ಬುಡಕ್ಕೆ ನಿಂತು ಮೇಲೆ ನೋಡಿ ಲೆಕ್ಕ ಹಾಕೋದು, ಬಿದ್ದ ಕುರಂಬಳೆನೆಲ್ಲ ಆಯ್ದು ತಂದು ಮಂಚ್ಗೆತವುಳ ರಾಶಿಗೆ ಗುಡ್ಡೆ ಹಾಕೋದು, ಬರುತ್ತಾ ಪತ್ರೆ ಬಿಡಿಸಿ ತಂದು ದಿವಿನಾಗಿ ಮೈತೊಳೆದುಕೊಂಡು ದೀವಿಗೆ ಹಚ್ಚೋದು, ಹೊಲ ತೋಟದ ಕಡೆ ಅಡ್ಡಾಡುತ್ತಾ ಉಸ್ತುವಾರಿ ನೋಡಿಕೊಳ್ಳೋದು, ತನ್ನ ಮಕ್ಕಳು

ಸಿದ್ಧರಾಮಯ್ಯ, ಕನ್ನಡವಿಭಾಗ, ಸರ್ಕಾರಿ ಕಲಾ ಕಾಲೇಜು, ತುಮಕೂರು.

ರಂಗ–ರಾಮಿ ಸ್ಕೂಲಿಗೆ ಹೋದರೋ ಹೇಗೆ ಅಂತಾ ವಿಚಾರಿಸೋದು ಇದೇ ಇತ್ಯಾದಿ ಸಂಸಾರದ ಮೂರುಮೂವತ್ತೊಂದು ತಾಪತ್ರಯಗಳ ಕಡೆಗೆ ಆಸ್ಥೆ ಹರಿಸಿದವನಾದ.

ತುಳಸಮ್ಮನ ಮನಸ್ಸಿಗೆ ಗಂಡನ ಈ ಬದಲಾವಣೆ ನೆಮ್ಮದಿಯ ನಿಟ್ಟುಸಿರು ಮೂಡಿಸೋಕಿಂತ ಅವ್ಯಕ್ತ ಗಾಬರಿ ಹುಟ್ಟಿಸಿದ್ದು ಆಶ್ಚರ್ಯವಲ್ಲ. ಏನು ಕೆಟ್ಟ ಸುದ್ದಿ ಕೇಳಬೇಕಾಗಿದೆಯೋ–ಅಂತಾ ನೋಡೋ ಕಣ್ಣಲ್ಲಿ ನೋಡಿದ್ದೆ ಕರ್ಮ. ಮನಸ್ಸಿನಾಳ ತೆರೆದ ಭೀತಿಯಲ್ಲಿ ತಡೆಯಿಲ್ಲದೆ ಕಾಯೋ ಕುದಿತ.

ಏರಿದ ಸೂರ್ಯ ಇಳಿಯೋ ಹೊತ್ತು. ಗೌಡ, ಎಂಟು ದಿನದ ಹಿಂದೆ ಬಿತ್ತ ಕೆಡಿಸಿ ಮತ್ತೆ ಬಿತ್ತಿದ್ದ ಉಳ್ಳಿ ಹುಟ್ಟಿದೆಯೋ ಇಲ್ಲವೋ ನೋಡಿಕೊಂಡು ಬರೋಣಾಂತ ಕಾಡಬದಿ ಹೊಲದ ಕಡೆ ಒಬ್ಬೊಂಟಿಗನಾಗಿ ಹೊರಟ. ಬಿತ್ತಿದ ದಿವಸ ಉಧೋಘ ಮಳೆ ಮತ್ತೆ ಬಾರದೆ ಹೋಗಿ, ಬಿತ್ತು ಅಡೇವಾಗಿತ್ತು. ಮುಸುರೆ ಕಟ್ಟಿ ಮೊಳಸಿಲ್ಲ. 'ಅಲುಬೆ ಹೊಡುದ್ರೆ ಸಸಾರಾಗುತ್ತೆ'–ಅಂತ ಹೆಂಡತಿ ಹೇಳಿದರೂ ಕೇಳದೆ ಅಡೇವಾದ ಬಿತ್ತನೆ ಮೇಲೆ ಮತ್ತೆ ಬರೀ ಉಳ್ಳಿ ಬಿತ್ತಿಸಿದ್ದ.

ಈಗ ಬಂದು ನೋಡಿದ್ರೆ, ಸಾಲು ಯಾವುದು, ಸೋಲು ಯಾವುದು ಅಂತು ಒಂದೂ ತಿಳಿಯದ ಹಾಗೆ, ಅಡೇವಾಗಿದ್ದ ಬೀಜ, ಮೇಲೆ ಹಾಕಿಸ್ದ ಉಳ್ಳಿ ಎಲ್ಲ ಒಟ್ಟಿಗೆ ದಟ್ಟೈಸಿ ಮೊಳಿತಾ ಇತ್ತು. ಎಂಥ ಅಡ್ನಾಡಿ ಆರಂಭಗಾರನೂ ಆಡಿಕೊಳ್ಳೋ ಬಾಳಾಗಿತ್ತು.

'ಈಗೇನ್ಮಾಡ್ಲಿ?'–ಅಂತಲೇ ಧೇನುಸ್ತಾ ನಿಂತ. ಗೌಡ ಕುಂತು ಗೆರೆಸಾಲು ಕೆದಕಿದ. ಹೊಲದಗಲಕ್ಕೂ ಅಡ್ಡಾಡಿದ. ಆದರೆ ಧೇನಿಕೆ ಬಿಟ್ಟಿದ್ದಾಗಲಿಲ್ಲ. ಮನೆ ಕಡೆ ತಿರುಗಿದ. ಹಾಗೆ ಬರುವಾಗ ಅವರಿವರ ಹೊಲದ ಬೆಳೇ ಮೇಲೆ ಅವನ ಕಣ್ಣು ಸಹಜವಾಗಿ ಹರಿಯು ತ್ತಿತ್ತು. ಆಗೆಲ್ಲ ಒಮ್ಮೆ ನಿಂತು ನೋಡಿ ಧೇನಿಸುತ್ತಾ ನಡೆಯುತ್ತಿದ್ದ.

ಒಂದು ಹೊಲದಲ್ಲಿ ಅಡಿವ್ಯಾದ ಬಿತ್ತನೆ ಮೇಲೆ ಅಲುಬೆ ಹೊಡ್ಡಿತ್ತದ್ರು. ಸ್ವಲ್ಪವೂ ಎಂಕಬಂಕವಾದಂತೆ ಬಿತ್ತಿದ ಗೆರೇವೊಳಗೆ ಬಿತ್ತಿ ಬಿತ್ತಿದಾಂಗೇ ಒಳ್ಳೆ ಎಲೆಕವಳಿಗೆ ಹಾಗೆ ಮೋಳೀತಿದ್ದ ಬೆಳೆ ಕಂಡು ಗೌಡನ ಕುತೂಹಲ ಸರಳ ಅತ್ತ ಎಳೀತು. ಹೊಲದೊಳಕ್ಕೆ ನಾಲ್ಕಾರು ಹೆಜ್ಜೆಯಿಟ್ಟ ಗೌಡ ನೆಲಕ್ಕೂರಿದ ನೋಟದಲ್ಲಿ ನೋಡುತ್ತಾ ಕುಂತ. ಮೊಳೆ ಸಾಲೊಂದನ್ನು ಕೆದಕಿದ.

'ಲೇ ಯಾವೋನ್ಲ ಅವನು, ಗ್ಯಾನ ಮಾನಯಿಲ್ದ ಬಡ್ಡೀಮಗ, ಬಿತ್ತಿದ್ದ ವೊಲ

ದೊಳಗೆ ಬಗ್ಗಿ ಬಗ್ಗಿ ಕೆದಕ್ತಾ ನೋಡೋನು? ಅಲ್ಲೇನು ನಿಮ್ಮಾವ್ನ ದಿಗರೈತಲ್ಲs ?'– ಹೊಲದ ಮತ್ತೊಂದು ಬದಿಯಿಂದ ಬಂದ ಆರ್ಭಟ ಧೇನಿಕೆಗೆ ಹಾಕಿದ ಕಡಿವಾಣವಾಗಿ, ಗೌಡ ಥಟ್ಟನೆ ನಿಂತ.

ನೋಡುತ್ತಾನೆ, ಕೆಂಗಿಲಕ್ಕನ ಮಗ ಚಿಕ್ಕ ಬಾರುಕೋಲು ಕೈಲಿ ಹಿಡಿದು ನಿಂತಿದ್ದಾನೆ. ಅವನ ಎರಡನೇ ಹೆಂಡತಿ ಚಂದ್ರಿ ನೇಗಿಲಿಗೆ ಕಟ್ಟಿದ ಸಡ್ಡೆಯ ಮೇಲೆ ಇಟ್ಟ ಕೈ ಇಟ್ಟುಕೊಂಡು ಹಾಗೇ ನಿಂತಿದ್ದಾಳೆ. ಆರಿಗೆ ಕಟ್ಟಿದ ಎತ್ತುಗಳೂ ದನಿಗೆ ಬೆದರಿದಂತೆ ಇತ್ತ ತಿರುಗಿ ನೋಡುತ್ತಿವೆ. ಕಾಲು ಕೆರೆದುಕೊಂಡು ಬಂದ ಆ ಕೂಗಿನ ಮರ್ಮ ಥಟ್ಟನೆ ಹೊಳೆಯಿತು ಗೌಡನಿಗೆ.

ಬದುವಿನ ಪಕ್ಕದಲ್ಲಿ ಬಿಟ್ಟಿದ್ದ ಗಾಡಿಯ ಕೆಳಗೆ ಜೊಂಪು ಹತ್ತಿ ನೆಲಕ್ಕೊರಗಿದ್ದ ಚಿಕ್ಕನ ಅಪ್ಪ ಕೆಂಗಿಲಕ್ಕ ಆ ಕೂಗಿಗೆ ಎಚ್ಚತ್ತು 'ಏನ್ಲಾ ಅದು? ಯಾವ ಬಡ್ಡೀ ಮಗುನ್ನ ಬಾಯ್ಮಾಡ್ಕಂತಿದಿಯುಲ?' ಎಂದು ಕೂಗುತ್ತಾ ತಲೆಯುಡಿಯ ಪಲ್ಲಿಯ ದೂಳು ಝಾಡಿಸಿ ಹೊರಬಂದ.

ಗೌಡನಿಗಾದರೋ, ಧೇನಿಕೆಯಲ್ಲಿಯೇ ನಿಮಗ್ನನಾಗಿದ್ದು ಹೊಲ ಯಾರದೆಂಬ ಪರಿವೆ ಇಲ್ಲದೆ ಬಂದು ನೋಡಿದ್ದು ಎಷ್ಟು ಸಹಜ ಸರಳವಾಗಿತ್ತೋ ಅಷ್ಟೇ ಅನಿರೀಕ್ಷಿತವಾಗಿತ್ತು ಈ ಕೂಗು, ಈ ಸನ್ನಿವೇಶ. ಹೀಗಾಗಿ ತಬ್ಬಿಬ್ಬಿಗೊಳಗಾಗಿ ನಿಂತ ನಿಲುವಿಗೇ ನೋಡತೊಡಗಿದ.

ಕಣ್ಣುಜ್ಜಿ ನೋಡಿದ ಕೆಂಗಿಲಕ್ಕನಿಗೆ, ಮಗನ ಬೈಗುಳಕ್ಕೆ ಈಡಾಗಿದ್ದೋನು ಯಾರನ್ನೋದು ಗೊತ್ತಾಯಿತು. ಮಗನ ಬಾಯಿ ಕೇಳಿದ್ದೊಂದೇ, ಗೌಡ ಮಾಡಿದ್ದೇನು ಅನ್ನೋದು ಗೊತ್ತಿಗ್ಲಿಲ್ಲ. ಗೊತ್ತಾಗಬೇಕಾಗಿಯೂ ಇರಲಿಲ್ಲ. ಮಗನ ಕಡೆ ಒಮ್ಮೆ ನೋಡಿದ. ಬಾರುಕೋಲು ಕೈಲಿ ಹಿಡಿದ ಮಗ, ಆಡಿದ ಬಿರುವಿಗೇ ನೋಡಿದಂತೆ ಕಾದು ನಿಂತಿದ್ದ.

ಅರವತ್ತರ ಗಡಿ ದಾಟಿದ್ದರೂ ಆವೇಶ ತಗ್ಗದ ಲಕ್ಕ–ಸೂಳೆ ಮಕ್ಕಳ ಮಕ ಏನ್ ನೋಡ್ತ ನಿಂತಿಯುಲ ಚಿಕ್ಕ, ಕಳ್ಳದನಕೆ ಇಕ್ಕಿದಂಗ ಇಕ್ಕಡ್ಸದ ಬಿಟ್ಟು. ಎತ್ತೋಳಿಗೆ ಕಚ್ಚೆ ಬಿಚ್ಚೋ ಕಳ್ಳ ಬಡ್ಡಿಮಕ್ಕಳು. ಕಣ್ಣೆದ್ರಿಗೆ ಇದ್ದಾರೇ ಈಟು,? ಕಣ್ಣಿಗೆ ಮರೆಯಾದ್ರೆ ಇನ್ನೇಟೇಳನ?'–ಎಂದು ಗೌಡನ ಕಡೆ ಕ್ಯಾಕರಿಸಿ ಉಗಿಯುತ್ತಾ ಹೆಜ್ಜೆ ಮುಂದಿಕ್ಕಿ ಬಂದ. ಅವನು ಬರುವ ಬೀಸಿಗೆ, ಆಡುವ ಮಾತಿಗೆ ಕೋಪ ಉಕ್ಕಿದರೂ ಭೀತಿಯ ಭೂತ ಕಂಡಂತಾಗಿ ಹಿಂದುಮುಂದು ಕಾಣದಾಗಿ ನಿಂತಲ್ಲೇ ಅವಡುಗಚ್ಚಿದ. ಗೌಡ.

ಅಪ್ಪನ ಮಾತಿನ ಜಾಡುಹಿಡಿದ ಚಿಕ್ಕ ಎತ್ತಿದ ಬಾರುಕೋಲು ಎತ್ತಿಕೊಂಡೇ ಅಪ್ಪನಿಗಿಂತ ಮುಂದಾಗಿ ಅವಡುಗಚ್ಚಿದ್ದ ಗೌಡನಿಗೆ ಒಂದೇ ಬಿರುವಿಗೆ ಬಾರಿಸಿಯೇ ಬಾರಿಸುವುದಕ್ಕೆ ತೊಡಗಿದ.

ಹೊಡೆತದ ಬೀಸಿಗೆನೆಲಕಚ್ಚಿ ಬಿದ್ದ ಗೌಡನನ್ನು ಕಂಡ ಚಿಕ್ಕನ ಎರಡನೇ ಹೆಂಡತಿಯ ಜೀವ ಹಿಡಿಯಾಗಿ ನರಳಿತು. ಓಡಿ ಬಂದವಳೇ ಗಂಡನ ಕೈಲಿದ್ದ ಬಾರುಕೋಲಿಗೆ ಕೈಹಾಕಿ ತಡೆಯುಹವಣಿಸಿದಳು.

ಹೆಂಡತಿಯ ವರ್ತನೆ ಕಂಡ ಚಿಕ್ಕನ ಸಿಟ್ಟು ಇಮ್ಮಡಿ ಎತ್ತರಿಸಿದಂತೆ ಇತ್ತ ಇವಳ ಮೇಲೆಯೇ ಹಾಯ್ದಿತು. ಅದೇ ಬಿರುವಿಗೆ,–'ಈ ಲೌಡೀರ ನೆಣ ಕೊಬ್ಬಕೆ ಬಿಟ್ರೇ ಮತ್ತೆ ಯಿಂಗಾಗಿರದು!! ಗಾತಗಾತಿಗೆ ಇಕ್ಕತ ಬಂದಿದ್ರೆ ಯಿಂಗ್ಯಾಕಾಗ್ತಿದ್ರು? ಕರುಳು ಚುರುಗುಟ್ಟಿದಂಗೆ ಓಡಿ ಬಂದವುಳೆ! ಕೈಯಿಡಿಯುಕೆ! ಇಕ್ಕಲ ಇವಳಪ್ನ'–ಎಂದ. ಅಪ್ಪನಂ ಅನ್ನುವಿಕೆ ಆಗುವಾಗಲೇ ಅವಳಿಗೂ ನಾಲ್ಕು ಬಾರಿಸಿದ. ಅದೇ ಉಸುರಿಗೆ ಆಕೆ ಅಬ್ಬರಿ ಸುತ್ತಿದ್ದರೂ ಬಿಡದೇ ಆಕೆಯ ಎಡತೋಳು ಹಿಡಿದು ದರದರ ಎಳೆದುಕೊಂಡು ಹೋಗಿ ಅಡ್ಡಡ್ಡ ಬಿದ್ದಿದ್ದ ನೇಗಿಲು ಮಂಡೆಗೆ ಕುಕ್ಕರುಗುಕ್ಕಿದ. ಮತ್ತೆ ಕಟ್ಟಿದ ಸಡ್ಡೆಯನ್ನು ಹಗ್ಗ ಕೀಳುವ ಹಾಗೆ ಎಳೆದುಕೊಂಡು ಅವಳ ಅಂಡಿನ ಮೇಲೆ ಒಂದೇ ಸಮನೆ ಬಿಗಿಯ ತೊಡಗಿದ.

ಸೊಸೆಯ ಕಿರುಚಿಗೆ ಹೆದರಿದ ಲಕ್ಕ ಮಗನ ಹುಚ್ಚಿಗೆ ಎಚ್ಚೆತ್ತವನಾಗಿ ಓಡಿಬಂದ ಅವನ ಕೈಲಿದ್ದ ಸಡ್ಡೆ ಕಿತ್ತುಕೊಂಡು ಅವನನ್ನೇ ಅದ್ದರಿಸತೊಡಗಿದ.

ಇದೇ ಗಾವು, ನೆಲಕಚ್ಚಿ ನರಳುತ್ತಿದ್ದ ಗೌಡ ಎದ್ದು ನಿಂತ. ಸುತ್ತಲೂ ನೋಡಿದ ಅಲ್ಲಿದ್ದೋರು ಆ ನಾಲ್ಕು ಜನ. ಕಣ್ಣಳತೆ ಸುತ್ತಿನಲ್ಲಿ ಒಂದೂಂದ್ರೆ ಒಂದು ನರಪಿಳ್ಳೆ ಕಾಣಲಿಲ್ಲ. ಸಿಟ್ಟಿನ ಕೈಗೆ ಬುದ್ದಿ ಕೊಡೋ ಸಮಯ ಅಲ್ಲ ಇದು ಅನ್ನುವುದನ್ನು ಅರಿತುಕೊಂಡ ಗೌಡ ಮೆಲ್ಲಗೆ ಕಾಲಿಗೆ ಬುದ್ಧಿ ಹೇಳಿದ.

'ಮೊಣಕಾಲ ಉಚ್ಚೆ ಉಯ್ಯ್‌ಕಳೋ ಹೆಂಗ್ಸ ಆಳಾಕೆ ಬರದ ಯೇಡಿ ನನ್ಮಗನೇ? ವದ್ದರೆ ಬಂತೆನಲೇ ಬುದ್ಧಿ?'–ಎನ್ನುವ ಅಪ್ಪನ ಅದ್ದರಿಕೆಗೆ ಅಡಿಯಾಳಾದ ಚಿಕ್ಕ, ಹೇಡಿ ಯಂತೆ ಜಾಗ ಬಿಡುತ್ತಿದ್ದ ಗೌಡನನ್ನು ಕಂಡು, ನಾಯಿ ಸೂಳೆಮಕ್ಳು, ವದ್ದರೆ ವದಿ ಸ್ಕಂತವೆ. ಕೆಟ್ಟ ಯೆಂಗುಸ್ರು ಪೋಲೆಸಾಲಿಗೆ ಜಿದೆಯುತ್ತಿ ಕುಣಿಯೋ ಜೀವರ್ಸಿ ಬಚ್ಚೆತದವು. ಮಾನಿಲ್ಲ, ಮರ್ವಾದಿಯಿಲ್ಲ ಸಾಯಿಸಿ ಬಿಡಬೇಕು ಸೂಳೆಮಕ್ಕಳ್ನ–ಎನ್ನುತ್ತಿದ್ದ. ಚಿಕ್ಕನ ಕಿಡಿನುಡಿ ಗೌಡನ ಸುಪ್ಪತ್ಕೆ ಸಿಡಿಲಾಗಿ ಬಡಿಯುದಿರಲಿಲ್ಲ.

ಬಾರುಕೋಲು ಹೊಡೆತ ಬಿದ್ದ ಜಾಗದಲ್ಲೆಲ್ಲಾ ಅಂಗಿ ಹರಿದು ಹೋಳಾಗಿತ್ತು. ಬಾಸುಂಡೆ ಬುರ್ರಂತ ಮೇಲೆದ್ದಿತ್ತು. ತಲೆಗೆ ಸುತ್ತಿದ್ದ ವಲ್ಲಿ ತೆಗೆದು ಮೈತುಂಬ ಹೊದ್ದುಕೊಂಡ ಗೌಡ ಕೆಣಕಿದ ಪಣೆಯಾಗಿದ್ದ. ದಾರಿ ಮೇಲೆ ಧಾಪುಗಾಲು ಬೀಳುತ್ತಾ ಇದ್ದರೂ, ಸೇಡು ಸಮಯ ಹುಡುಕೋ ಹಂಚಿಕೇಲಿ ನಡೆದಿತ್ತು. ಎದುರು ಬಂದೋರು ಯಾರು, ಬದೀಲಿ ಹಾದೋರು ಯಾರು, ಅನ್ನುವುದನ್ನು ಅರಿಯಂದಷ್ಟರ ಮಟ್ಟಿನ ಆವೇಶ ಉದ್ಭುದ್ಧವಾದಂತೆ, ಬಾಳ ಸಂತಾಪ ಸೇಡಾಡಿ ಸೇರಿಗೆ ಸವ್ವಾಸೇರಿನ ಲೆಕ್ಕದಲ್ಲಿ ಬೆಳೀತಿತ್ತು.

ಮನೆಗೆ ಬಂದ ಗೌಡ ಒಳಗೆ ಹೋಗದೆ ಹೊರ ಜಗಲಿಯ ಮೇಲೇ ಕುಳಿತ. ಒಳಗಿನ ಚಡಪಡಿಕೆ ವ್ಯಕ್ತವಾಗೋದಕ್ಕೆ ಎಲ್ಲೂ ಜಾಗ ಕಾಣದೆ ಕಣ್ಣಿನಲ್ಲಿಯೇ ದಟ್ಟೈಸಿದ ಕ್ರೌರ್ಯವಾಗಿ ಮುಖದ ಮೇಲೂ ಕವಿತಾ ಇತ್ತು. ನೋಡೋರ ಕಣ್ಣಿಗೆ ಆ ಮುಖದ ರಾವು, ಭೀತಿ ಬಡಿಯೋಹಾಗಿತ್ತು. ಮಾತನಾಡಿಸುವ ನಾಲಿಗೆ ಉಡುಗಿ ಭೀತ ವಿಸ್ಮಿತರಾಗಿ ಮುಂದೆ ಸರಿಯುತ್ತಿದ್ದರು.

ಜಗಲಿ ಮೇಲೆ ಕುಕ್ಕರು ಕುಂತಿದ್ದ ಗೌಡ (ಏನೋ ಹೊಳೆದವನಾಗಿ) ಮೇಲೆದ್ದ. ದನದ ಕೊಟ್ಟಿಗೆಗೆ ನಡೆದ. ಕೊಟ್ಟಿಗೆಯ ಮೂಲೆ ಗೂಡಿಗೆ ಕೈಯಿಕ್ಕಿ, ತಡುಕಿ, ನಾಲ್ಕಾರು ಹರಿವ ಎಕ್ಕಡಗಳನ್ನು ಹೊರತೆಗೆದ. ಎಕ್ಕಡದ ಜೊತೆ ಸುತ್ತಿಕೊಂಡಂತೆ ಬಂದಿದ್ದ ಅಗಡುಗಣ್ಣಿಗಳನ್ನು ಹಾಗೆಯೇ ಒಳಗೆ ಹಾಕಿ, ಎರಡೂ ಕೈಗಳಲ್ಲಿ ಎಕ್ಕಡ ಹಿಡಿದು ಹೊರಬಂದ. ತಂದ ಎಕ್ಕಡಗಳನ್ನು ಜಗಲಿಯ ಬದಿಗೆ ಹಾಕಿ, ಬೀದಿಯ ಮೂಲೆಯಲ್ಲಿದ್ದ ಗಂಜಿನ ಗುಂಡಿ ಕಡೆ ನಡೆದ. ಕೊಚ್ಚೆ ನೀರು ಕುಡಿದು ಒಡೆಯದೇ ಎಸೆದಿದ್ದ ತೆಂಗಿನ ಬುಲ್ಡೆಯೊಂದು ಬಿದ್ದಿತ್ತು. ಅದನ್ನು ಹಿಡಿದು ಮೂಲೆಯಲ್ಲಿ ಕುಂತು ಅದರೊಳಕ್ಕೆ ಉಚ್ಚೆ ಹೊಯ್ದ. ಬುಲ್ಡೆಯನ್ನು ಎಡಗೈಲಿ ಹಿಡಿದು ತಂದು ಎಕ್ಕಡಗಳ ಬದಿ ಚೆಲ್ಲದಂತೆ ಸಾವರಿಸಿಟ್ಟ.

ದನದ ಕೊಟ್ಟಿಗೆಯಲ್ಲಾದ ಸಪ್ಪಳಕ್ಕೆ ಹೊಸ್ತಿಲು ದಾಟಿ ಹೊರಬಂದಿದ್ದ ತುಳಸಮ್ಮ ಗಂಡನ ಆಕೃತಿ ಕಂಡು, ಗಕ್ಕನೆ, ತುಟಿಮೀರಲಿದ್ದ ಶಬ್ದಗಳನ್ನು ನುಂಗಿ ಹಾಗೆ ನಿಂತಿದ್ದಳು. ಜಗಲಿ ಮೇಲೆ ಕುಳತುಕೊಳ್ಳುತ್ತಿದ್ದ ಗೌಡನ ದಿಟ್ಟಿ ಇತ್ತ ಇವಳ ಮೇಲೆ ಬಿದ್ದಾಗ, ಹೆದರಿದ ಈಕೆ ಒಳಸರಿದು ಬಾಗಿಲಕಿಂಡಿ ಆಶ್ರಯಿಸಿದಳು.

ಗಂಡನ ಮುಖದಲ್ಲಿ ತುಂಬಿದ್ದ ಕ್ರೌರ್ಯ, ಹೆದರಿಕೆ ಹುಟ್ಟಿಸಿದರೂ, ಹರಿದ ಅಂಗಿಯ ಮರೆಯಲ್ಲೂ, ಮೊಣಕೈ ಮೇಲೂ ಊದಿ ಕಾಣಿಸುತ್ತಿದ್ದ ಬಾಸುಂಡೆ ನೋಡಿ

ಕರುಳು ಚುರ್ರೆಂದಿತು. ಹತ್ತಿರ ಹೋಗುವ ತವಕ ಮನಸ್ಸಿಗಾದರೂ, ಧೈರ್ಯ ಕಾಲಲ್ಲಿ ಮೂಡಿದ ಕ್ರಿಯೆಯಾಗಲಿಲ್ಲ. ದುಃಖ ಒತ್ತಿ ಬಂದು ಬಿಕ್ಕಳಿಸಿದಳು. ಬಿಕ್ಕು ಕೇಳಿದ ಗೌಡನ ಕ್ರೌರ್ಯ, 'ಯಾವೊಳಲ ಅವ್ಳು, ಇವರಪ್ನ ಚಪ್ಪೋಡ ವಳ್ಗೋದವಳಂಗೆ ಕಿಸಿಯೋಳು'_ಎಂದು ಅಬ್ಬರಿಸಿತು. ಅಬ್ಬರಿಕೆಗೆ ಭೀತಳಾದ ತುಳಸಮ್ಮ ಒತ್ತಿ ಬಂದ ದಃಖವನ್ನು ಉಡುಗಿಸಲಾರದವಳಾಗಿ ಕೋಣೆಗೋಡಿದಳು. ಮುಖಕ್ಕೊತ್ತಿ ಹಿಡಿದ ಸೆರಗಿನೊಟ್ಟಲ್ಲಿ ಒತ್ತಿಬಂದ ಬಿಕ್ಕನ್ನೂ, ಉಕ್ಕಿ ಬರುತ್ತಿದ್ದ ಕಣ್ಣೀರನ್ನು ಅದುಮಿ ಹಿಡಿಯ ಯತ್ನಿಸಿದಳು. ಬಾಯಿನೀರು ಕಣ್ಣೀರು ಕೂಡಿ ಸೆರಗು ಒದ್ದೆಯಾಯಿತೇ ವಿನಾಸಿ ಬಿಕ್ಕು ಮಾತ್ರ ಹೊರಹೊಮ್ಮುವ ಧೈರ್ಯಮಾಡಲಿಲ್ಲ.

ಧೂಳುಸಂಜೆ. ಜಂಗ್ಲಿದನ ಕೊಟ್ಟಿಗೆ ಸೇರೋ ಹೊತ್ತು. ಗುಂದ್ದೆ ಹಾಕಿದರೂ ಕದ್ದು ಹೋಗೋ ತುಡುಗುದನಗಳನ್ನು ತರುಬಲು ಅದ್ದರಿಸುವ ಹುಡುಗರ ಅಬ್ಬರಿಕೆ, ಓಡುತ್ತಿದ್ದ ದನಗಳನ್ನು ಅಡ್ಡಗಟ್ಟಿ ಬೊಗಳುತ್ತಾ, ಓಡಿದಂತೆ ಬೆನ್ನಟ್ಟುವ ನಾಯಿಗಳ ಬೊಬ್ಬಾಟೆ, ಊರೊಟ್ಟಿನ ಕುರಿಗಳ ಹಿಂಡಿನಲ್ಲಿರುವ ತಮ್ಮ ತಮ್ಮ ಕುರಿಗಳನ್ನು ರೊಪ್ಪಕ್ಕೆ ತರುಬಲು ವಿಂಗಡಿಸುವ 'ಟುರ್ರೈಟ್ರುಸ್ಯಾ', ಕುರಿಗಳ ಬ್ಯಾ,ಬ್ಯಾ....ಹಳ್ಳಿಯ ತುಂಬೆಲ್ಲಾ ಹಬ್ಬಿದಂತೆ ದೂರನಿಂತು ಕೇಳಿದೋರಿಗೆ ತಬ್ಬಿಬ್ಬು ಮೂಡಿಸೋಹಾಗಿತ್ತು.

ಜಾಲಿಯ ಮುಲ್ಲುಗಳನ್ನು ಗಾಡಿಯ ತೊಟ್ಲಾರ ತುಂಬಿ, ಸೇಗಿಲು, ನೊಗ, ಸಡ್ಡೆ, ಮಿಣಿ ಇತ್ಯಾದಿಗಳನ್ನು ಅದರ ಮೇಲೆ ಇಟ್ಟುಕೊಂಡು ಅಪ್ಪನನ್ನೂ ಕೂರಿಸಿಕೊಂಡು ಗಾಡಿ ಹೊಡೆದುಕೊಂಡು ಬರುತ್ತಿದ್ದ ಚಿಕ್ಕ. ಬೀಜದ ಕಾಳಿನ ಕುಕ್ಕೆ ಹೊತ್ತು ನಡಿಲಾರದೆ ನಡೀತಾ ಬರುತ್ತಿದ್ದಳು, ಚಂದ್ರಿ.

ಜಂಗ್ಲಿದನ ತರಬೋ ಬಯಲು ದಾಟಿದ ಮೇಲೆ ಮಾಸ್ತನಾಯಕನ ಮನೆ ಮುಂದೆ ಹರಿದ ಗಾಡಿ, ಓಣಿ ತಿರುವು ದಾಟಿ ಗುರೇಗೌಡನ ಮನೇ ಮುಂದೆ ಹಾದು ಕೆಂಗಿಲಕ್ಕನ ಮನೆಗೆ ಹೋಗಬೇಕು. ಗಾಡಿ ಮಾಸ್ತಾನಾಯಕನ ಮನೆ ಮುಡುಕು ದಾಟಿ ಗುರೇಗೌಡನ ಓಣಿ ತಿರುವಿಗೆ ಬಂತು.

ಮುಂದೆ ಹಾಯುದ್ದು ಹೋಗುತ್ತಿದ್ದ ಕುರಿಹಿಂಡು ಗಾಡಿಗಡ್ಡವಾದಾಗ ಹೊಡೀತಿದ್ದ ಎತ್ತುಗಳ ಹಗ್ಗ ಎಳೆದು ಚಪ್ಪರಿಸಿ ನಿಲ್ಲಿಸಿದ ಚಿಕ್ಕ. ಕುಕ್ಕೆ ಹೊತ್ತಿದ್ದ ಚಂದ್ರಿ ಗಾಡಿ ಬದಿಯಲ್ಲೇ ಸರಿದು ಮುಂದೆ ಬಂದಳು. ಕುರಿ ಮಂದೆಯ ಹಿಂದೆ ಕಾಲೆಳೆಯುತ್ತಾ ಸಾಗಿದಳು.

ಗುರೇಗೌಡನ ಮನೆಯ ಮಗ್ಗುಲ ರೊಪ್ಪದತ್ತ ಬ್ಯಾಗುಡುತ್ತಾ ಕುರಿಗಳೆಲ್ಲ ನಿಟ್ಟೋಡಿದಾಗ, ನಿಲ್ಲಿಸಿದ್ದ ಎತ್ತುಗಳ ಬಾಲದಡಿಯ ಮುಕುಳಿಯಲ್ಲಿ ಬೆರಳಾಡಿಸಿದಂತೆ ತಿವಿದು ಲೊಚಗುಟ್ಟಿ ಗಾಡಿಯನ್ನು ಮುಂದೆ ಹೊಡೆದ ಚಿಕ್ಕ.

ರೊಪ್ಪದತ್ತ ಬ್ಯಾಗುಡುತ್ತಾ ಓಡುತ್ತಿದ್ದ ಕುರಿ ಮಂದೆಯ ಹಿಂದೆ ಕುಕ್ಕೆ ಹೊತ್ತುಕೊಂಡು ಬರುತ್ತಿದ್ದ ಚಂದ್ರಿಯನ್ನು ಕಂಡಸಮಕ್ಕೇ, ಓಣಿಯ ಮುಡುಕಿನಲ್ಲಿ ಬರುತ್ತಿದ್ದ ಗಾಡಿಯ ದಡಗನ್ನು ಕೇಳಿದ ಗುರೇಗೌಡ ಉಚ್ಚೆ ತುಂಬಿದ ಎಳೆನೀರಿನ ಬುಲ್ಡೆ ಹಿಡಿದು ಜಗಲೀ ಬದೀಲೆ ಎದ್ದುನಿಂತ. ಅವನು ನಿಂತ ನಿಲುವು ಕಂಡ ಚಂದ್ರಿ, ತೊಳ್ಳೆ ನಡುಕವಾಗಿ ಭರಭರನೆ ಮುಂದೆ ಸರಿದಳು. ಓಣಿಯ ಆ ಮುಡುಕಿನಲ್ಲಿ ನಿಂತು ಹಿಂತಿರುಗಿನೋಡಿದಳು.

ಗಾಡಿ ಸಮ ಎದುರಿಗೆ ಬಂದಾಗ ಉಚ್ಚೆ ತುಂಬಿದ ಬುಲ್ಡೆ ಬೀಸಿ ಒಗೆದದ್ದೇ, ಎಕ್ಕಡ ತೆಗೆದುಕೊಂಡು ಒಂದೇ ಬಿರುವಿಗೆ ಗಾಡಿಗಡ್ಡವಾಗಿ ನಿಂತ ಗೌಡ. ಬರುವಾಗಲೇ ಅರೆಮನಸ್ಸಿನಲ್ಲಿ ಆಪತ್ತನ್ನು ನಿರೀಕ್ಷಿಸುತ್ತಲೇ ಬರುತ್ತಿದ್ದ ಚಿಕ್ಕನಿಗೆ ಬುಂಡೇಲಿದ್ದ ದ್ರವ ಏನು ಅನ್ನೋದು ಗೊತ್ತಾಗೋದಕ್ಕಿಂತ ಹೆಚ್ಚಾಗಿ, ಎರಗಿ ಬಂದ ಬುಂಡೆಯ ಆಘಾತವೇ ಅಸಾಧ್ಯದ್ದಾಗಿ ಕಿರುಚಿದ. 'ರಣಯೇಡಿ ನನ್ಮಗನೇ ಅಲ್ಲಿ ಕಿಸಿಲಾರದೆ ಓಡಿಬಂದು ಇಲ್ಲಿ ಕಾಲಕೆರ್‍ಕಂಬತ್ತಿಯೆನಲೇ ಬೇವರ್ಸಿ'–ಎಂದು ಬೊಬ್ಬೆಯಿಟ್ಟು ಬಯ್ಯತೊಡಗಿದ. ಅವನ ಒದರಾಟ ನಡೆದಿದ್ದಂತೆಯೇ ಬಲಗಡೆ ಎತ್ತಿನ ಮೂಗುದಾರ ಹಿಡಿದು ಗಾಡಿ ನಿಲ್ಲಿಸಿದ ಗೌಡ. ಒಂದೊಂದೆ ಎಕ್ಕಡ ತೆಗೆದುಕೊಂಡು ಅಪ್ಪನಿಗೂ, ಮಗನಿಗೂ ಒಂದಾದ ಮೇಲೊಂದು ತೂರಿತೂರಿ ಎಸೆಯುತ್ತಾ–'ನಿಮ್ಮಪ್ನ ಚಪ್ಪೋಡು ಇಲ್ಲ್ಯಾವಂದು ಐತೆ ಅಂತ ನನ್ನ ಅಟ್ಟಿಬಾಗಿಲಿಗೆ ಗಾಡಿ ಒಡ್ಕಂಬಂದಲ ದರವೇಶಿ ಸೂಳೆಮಗನೆ?' ಕಟ್ಟಿಗಂಡ ಹೆಂಡ್ತಿಗೆ ಕಿಸಿಲಾರದ ನಾಮಾರ್ದ, ಅಡವು ನೋಡಿ ಹೊಡಿಯಾಕ್ಬತ್ತಿಯೇನಲೆ ಅಡವು! ಅಂತಾ ದೊಮ್ಮಿದ್ರೆ ಬಾರೋ ನಿನ್ನವ್ವನು' ಎಂದು ಬೊಬ್ಬಿರಿದ.

ಸರಕ್ಕನೆ ಸನ್ನಿವೇಶವನ್ನು ಅರ್ಥಮಾಡಿಕೊಂಡ ಕೆಂಗಿಲಕ್ಕ ತೊಡೆಯ ಕೆಳಗಿದ್ದ ಮಿಣಿಯನ್ನು ಅತ್ತ ಸರಿಸಿ ಅದರ ಕೆಳಗಿದ್ದ ಸಣ್ಣ ಮುಲ್ಲೊಂದನ್ನು ತೆಗೆದು ಗೌಡನ ಕಡೆಗೆ ಬೀಸಿದ. ಗೌಡನ ಬುರುಡೆಗೆ ತಗುಲಬೇಕಿದ್ದ ಮುಲ್ಲಂಟ ಗಾಬರಿಗೊಂಡ ಎತ್ತುಗಳ ಜಗ್ಗಾಟದಿಂದಾಗಿ ನೊಗದ ಮೇಲೆ ಬಿದ್ದು, ಮೂಗುದಾರ ಹಿಡಿದಿದ್ದ ಗೌಡನ ಕೈಗೆ ಪೆಟ್ಟಾಯಿತು. ತಕ್ಷಣ ಮೂಗುದಾರದಿಂದ ಕೈತೆಗೆದ ಗೌಡ ಅದೇ ಮುಲ್ಲನ್ನು ಎತ್ತಿಕೊಂಡು ಕೆಂಗಿಲಕ್ಕನಿಗೆ ಬೀಸಿದ.

ಅಷ್ಟುಹೊತ್ತಿಗೆ ಕೆಳಗೆ ಜಗಿದ ಚಿಕ್ಕ ಕೈಲಿದ್ದ ಬಾರುಕೋಲಿನಿಂದ ಗೌಡನಿಗೆ ಬಾರಿಸತೊಡಗಿದ. ಕೂಗಾಟ, ಆರ್ಭಟ ಹೆಚ್ಚಿದಂತೆ ಸುತ್ತಮುತ್ತಿನ ಜನರೆಲ್ಲ 'ಇದೇನು! ಇದೇನು!!'–ಎಂದು ಬಂದದ್ದೇ ಸುತ್ತ ಮುತ್ತಿದರು. ಚಿಕ್ಕನನ್ನು ಕೆಲವರು, ಗೌಡನನ್ನು ಕೆಲವರು ಹಿಡಿದುಕೊಂಡರು. ಚಿಕ್ಕನ ಕೈಲಿದ್ದ ಬಾರುಕೋಲನ್ನು ಕಿತ್ತೆಸೆದರು. ಇಬ್ಬರನ್ನೂ ಗದರಿಸುತ್ತಾ ದೂರದೂರ ಎಳೆದೊಯ್ದು ಅಗಲಿಸತೊಡಗಿದರು.

ಚಿಕ್ಕನನ್ನು ಹಿಡಿದಿದ್ದ ಜನ ಅವನನ್ನು ಅವನ ಮನೆಯ ಮುಡುಕಿನವರೆಗೆ ದೂಡಿಕೊಂಡೇ ನಡೆದರು. ಗೌಡನನ್ನು ಹಿಡಿದ ಜನ ಗೌಡ ಎಷ್ಟು ಕೊಸರಾಡಿದರೂ ಬಿಡದೆ ಹಿಡಿದು ಜಗಲಿಯ ಮೇಲೆ ಕೂರಿಸೋದಕ್ಕೆ ಪ್ರಯತ್ನಿಸುತ್ತಿದ್ದರು.

ಗೌಡನ ಬಾಯಿಂದ ಅವಾಚ್ಯ ಬೊಬ್ಬೆಯಾಗಿ ಗುಡುಗುತ್ತಲೇ ಇತ್ತು. ಚಿಕ್ಕನ ಬೈಗುಳ ಸ್ಪಷ್ಟವಾಗಿ ಕೇಳಿಸದಿದ್ದರೂ ಜನರ ಗದ್ದಲದ ಮಧ್ಯೆಯೂ ಅವನ ಬೊಬ್ಬೆ ಅಬ್ಬರವಾಗಿತ್ತು.

ಕೂಗು ಬೀದಿಯ ಕೊನೆಗೂ ಹಬ್ಬಿ ಮಕ್ಕಳು-ಮರಿಗಳು, ಮುದುಕರು,-ತದಕರು, ಹೆಂಗಸರು–ಗಂಡಸರು, ಎಲ್ಲಾ ದಟ್ಟೈಸಿ ಕವಿದರು. ಆರ್ಭಟಿಸುತ್ತಿದ್ದ ಕೆಂಗಿಲಕ್ಕನನ್ನೂ ಮತ್ಯಾರೋ ಹಿಡಿದು ಮನೆಗೊಯ್ದರು. ಅತ್ತಿತ್ತ ಹೋಗುವುದಕ್ಕೆ ಆಸ್ಪದವಿಲ್ಲದಿದ್ದರೂ ಬೆದರಿ ಮುಂದಕ್ಕೆ ನುಗ್ಗುತ್ತಿದ್ದ ಗಾಡಿಗೆ ಹೂಡಿದ್ದ ಎತ್ತುಗಳನ್ನು ಚಿಕ್ಕನ ಅಣ್ಣನ ಮಗ ನಿಂಗ ಮನೆಗೆ ಹೊಡೆದುಕೊಂಡು ಹೋದ.

ಹೊಸದಾಗಿ ಕವಿಯುತ್ತಿದ್ದವರಿಗೆ ಜಗಳ ನಡೆದದ್ದು ಯಾರುಯಾರಿಗೆ ಎಂಬುದು ತಿಳಿಯುತ್ತಲೇ ಎಲ್ಲ ಅರ್ಥವಾಗಿದ್ದವರಂತೆ ತಮ್ಮ ನಂತರ ಬರುತ್ತಿದ್ದವರಿಗೆ ಏನೆಲ್ಲ ಹೇಳತೊಡಗಿದರು. ಕುತೂಹಲ ಸೆಳೆದಂತೆ ಕೂಡಿದ ಜನ ಕರ್ಪೂರ ಕರೆದಂತೆ ಕರಗಲಾರದೆ ಕರಗತೊಡಗಿದರು.

ಈಗ ಗೌಡನ ಸುತ್ತ ದೊಡ್ಡವರು ಅಂತ ಇದ್ದವರು ನಾಲ್ಕು ಜನ. ಕರೆಕಂಚ, ಕಲ್ವೀರ, ಪೂಜಾರಿ ಈರಲಿಂಗ, ಪಟೇಲನ ತಮ್ಮ ದ್ಯಾಮ. ಜತೆಗೆ ಬೀದೀಲಿ ಕುಣಿಯುತ್ತಿದ್ದ ಗೆಂಡೆ ಬಲಿಯದ ಹುಡುಗ–ಹುಡುಗಿಯರೆಲ್ಲ ಮುಕುರಿ ಅವರಾಡೋ ಮಾತುಗಳನ್ನೇಕೇಳುತ್ತಾ ನಿಂತಿದ್ದವು.

'ಅವನು ಬಾರ್ಕೋಲಲಿ ಒದ್ದಾಂದಮ್ಯಾಲೆ, ನೀನು ಉಚ್ಚೆತೂರಿ ಎಕ್ಕಡದಾಗೆ ಇಕ್ಕಿದ್ದು ಪಾಡುಮಾಡಿದೆ ಬಿಡು'-ಎಂದು ದ್ಯಾಮ, ಗೌಡನನ್ನು ಸಮಾಧಾನಪಡಿಸುತ್ತಿದ್ದ

‘ಬಾರ್ಕ್ಕೋಲು ಅಂದಮ್ಯಾಕೆ ನೀನು ನೊಸಲು ಇಕ್ಕಿಸ್ಕ ಬೇಕಪ್ಪೊ ಆಮ್ಯಾಲೆ ಒಳಗಿಳೀಕೆ ಪೋದಗೀದೀಯು!’–ಎಂದು ಪೂಜಾರಿ ಈರಲಿಂಗ ಎಚ್ಚರಿಕೆ ಹೇಳುತ್ತಿದ್ದ.

‘ಪಂಚಾಯತ್ಗೆ ಸೇರಿಸಿ ಬಿಡಾನ ತಗಳ್ರೊ, ಬಾರುಕೋಲಲಿ ಒದಿಯಾದೂಂದ್ರೇನು ಸುಮ್ಕೆಯಾತ!’–ಎಂದ ಕರಿಕೆಂಚ.

ಪಂಚಾಯ್ತಿ ಯಾಕಲಾ? ಮಟಕ್ಕೆ ಸೇರಿಸಿಬಿಡಾನ, ಕುಲದ ಕಟ್ಟೇಲಿ ಏನಾಗುತ್ತೊ ಅದಾಗಲೀ’– ಎಂದು ಪ್ರತಿಸೂಚನೆ ನೀಡಿದ ದ್ಯಾಮ.

ಹುಡುಗರ ಗುಂಪಿನಲ್ಲಿ ಮುಂದೆಯೇ ಬಿಕ್ಕುತ್ತಾ ನಿಂತಿದ್ದ ಗೌಡನ ಮಗಳು ರಾಮಿಯನ್ನು ನೋಡಿ ‘ಅದ್ಯಾಕಳ್ತೀಯ ಬಿಡಲ ಪಾಪ, ಬಾರೋ ಬಾರೋ ಇಲ್ಲಿ’-ಎಂದು ಕೈನೀಡಿ ಹತ್ತಿರ ಎಳೆದುಕೊಂಡು ಹಾಗೆ ಮೈದಡವತೊಡಗಿದ ಕರಿಕೆಂಚ. ರಾಮಿಯ ಪಕ್ಕಕ್ಕೆ ಬಂದು ನಿಂತ ಅವಳಣ್ಣ ರಂಗನನ್ನು ನೋಡಿದ ಗೌಡ, ‘ಪೋಗಲು ವಳುಕ್ಕೊಗಿ ನಿಮ್ಮವ್ವನ್ನ ಕುಡಿಯಾಕೆ ನೀರತರಿಯಾಳು’–ಅಂದ. ರಂಗ ನೀರು ತರಲು ಒಳಕ್ಕೋಡಿದ.

ಸುತ್ತ ಕವಿದಂತೆ ಮುತ್ತಿಕೊಳ್ಳುತ್ತಿದ್ದ ಹುಡುಗರನ್ನು-‘ಇಲ್ಲೇನು ಮಂಗ ಕುಣಿತೈತೇನ್ರಲ, ಪೋಗ್ರಿರೋ ಇಲ್ಲವ್ರೋ ಕೂಳು-ಬಾಳು ಇಲ್ದವೇ. ಎಲ್ಲರ ಒಂದು ಚೂರು ‘ಟುವಯಕ್’ ಅನ್ನಕಾದು ಬಂದು ಕವುಕೊಂತಾವೆ, ಇವ್ರಜ್ಜಿ ದಿಗಂರು ಪೊಲ್ಬ್ಯೋದವಂಗೆ!-ಎಂದು ಕಲ್ವೀರ ಗದರಿಸತೊಡಗಿದ್ದ.

‘ಅಪ್ಪಾ, ಅವ್ವಯ್ಯನ್ ನೋಡು! ಅಯ್ಯಯ್ಯಾಪ್ಪೊ’– ಹೊರಗಿನ ಗದ್ದಲವನ್ನೂ ಮೀರಿಸಿದಂತೆ ಕೋಣೆಯಿಂದ ಹೊಮ್ಮಿ ಬಂದ ರಂಗನ ಆಕ್ರಂದನ ಕೇಳಿ ಹೊರಗಿದ್ದವರೆಲ್ಲಾ ಸ್ತಬ್ಧರಾದರು. ಏನಾಯಿತೆಂದು ನೊಡುವುದಕ್ಕೆ ಒಳಕ್ಕೋಡಿದ ದ್ಯಾಮ. ಹಿಂದೆಯೇ ಹುಡುಗರ ಗುಂಪೂ ನುಗ್ಗಿತು. ಒಳಕ್ಕೋಡುವ ರಭಸದಿಂದ ಬಂದ ಗೌಡ ನೊಸಲಿಕ್ಕಿಸಿಕೊಳ್ಳದೆ ಒಳಕ್ಕೋಗಬಾರದೆಂದು ನೆನಪಾಗಿ ಬಾಗಿಲವಾಡ ಹಿಡಿದು ಹಾಗೆ ನಿಂತ.

ಕೋಣೆಯೊಳಕ್ಕೆ ಕಾಲಿಟ್ಟು ಹೋದ ದ್ಯಾಮ, ‘ಅಯ್ಯಯ್ಯೊ ಗುರೇಗೌಡ ಇದೇನಾತು ನೋಡೋ!’–ಎಂದು ಕಿರುಚಿದ ಕೂಗಿಗೆ ಒಳನುಗ್ಗಿದ ಗುರೇಗೌಡನ ಕಣ್ಣಿಗೆ ಎಣ್ಣೆ ದೀವಿಗೆಯ ಮಬ್ಬು ಬೆಳಕಲ್ಲಿ ಕಂಡಿದ್ದು ಜಂತೆಗೆ ಕಟ್ಟಿದ್ದ ಹಗ್ಗದಲ್ಲಿ ನೇತಾಡುತ್ತಿದ್ದ ತುಳಸಮ್ಮನ ದೇಹ.

ನವಸಾಮಾಜಿಕ ಚಳುವಳಿಗಳು

–ಟಿ.ಎನ್. ಪ್ರಕಾಶ್ ಕಮ್ಮರಡಿ

ನಮ್ಮ ಗ್ರಾಮೀಣ ವ್ಯವಸ್ಥೆಯ ಗರ್ಭದಲ್ಲಿಂದು ಹಲವು ಚಳುವಳಿಗಳು ತಲೆ ಎತ್ತುತ್ತಿವೆ. ರೈತ ಚಳುವಳಿಗಳು, ದಲಿತ ಚಳುವಳಿಗಳು, ಪರಿಸರ ಚಳುವಳಿಗಳು, ಮಹಿಳಾ ಚಳುವಳಿಗಳು, ಬುಡಕಟ್ಟು, ಆದಿವಾಸಿ ಚಳುವಳಿಗಳು ಇತ್ಯಾದಿ ಚಳುವಳಿಗಳ ಹಿಂದೆ ಇಂದು ಗ್ರಾಮೀಣ ವ್ಯವಸ್ಥೆಯ ಶೋಷಿತ ವರ್ಗಗಳ ಧ್ವನಿ ಗಟ್ಟಿಯಾಗಿರುತ್ತದೆ. ಇವುಗಳೆಲ್ಲವುದಕ್ಕೆ ಹಲವು ಹೋಲಿಕೆಗಳಿದ್ದು, ಇವು ಇಂದಿನ ''ನವಸಾಮಾಜಿಕ'' ಚಳುವಳಿಗಳಾಗಿರುತ್ತವೆ ಎಂಬುದಾಗಿ ಸಮಾಜ ಶಾಸ್ತ್ರಜ್ಞ 'ಗೆಯಿಲ್ ಒಮೆಡೆಟ್' ಅಭಿಪ್ರಾಯಪಡುತ್ತಾನೆ.[1]

ಈ ಎಲ್ಲಾ ಚಳುವಳಿಗಳು ಮೂಲಭೂತವಾಗಿ ಕೈಗಾರಿಕಾ ಬಂಡವಾಳಶಾಹಿ, ನೌಕರಶಾಹಿ, ನಗರ ಸಂಸ್ಕೃತಿ, ಅಷ್ಟೇಕೆ ಇಂದಿನ ರಾಜ್ಯ ವ್ಯವಸ್ಥೆಯ ವಿರುದ್ಧವೇ ಧ್ವನಿ ಎತ್ತಿರುತ್ತವೆ. ಈ ಎಲ್ಲಾ ಚಳುವಳಿಗಳನ್ನು ಅರ್ಥೈಸಿಕೊಳ್ಳಲು ಸಂಪ್ರದಾಯಸ್ಥ ಮಾರ್ಕ್ಸ್‌ವಾದಿಗಳಿಂದ ಹಿಡಿದು ಹಲವಾರು ಎಡವಿಚಾರಧಾರೆಯ ಚಿಂತಕರೂ ಸೋಲು ತ್ತಿದ್ದಾರೆ. ಇದಕ್ಕೆ ಮುಖ್ಯಕಾರಣವೆಂದರೆ ಈ ಎಲ್ಲಾ ನವ ಸಾಮಾಜಿಕ ಚಳುವಳಿ ಗಳು ಆರ್ಥಿಕ ಮಾನದಂಡ ಅಥವ ವರ್ಗಸಿದ್ಧಾಂತದ ಚೌಕಟ್ಟಿನೊಳಗೆ ಸರಿಯಾಗಿ ಬೀಳ ದಿರುವುದರಿಂದ ಇವರುಗಳು ಇಂದು ಗಲಿಬಿಲಿಗೊಳ್ಳುವಂತಾಗುತ್ತಾರೆ. ನಮ್ಮ ರೈತ ಚಳು ವಳಿಗಳನ್ನು ತೆಗೆದುಕೊಂಡರೆ, ಇವುಗಳನ್ನು ಕಷ್ಟಪಟ್ಟು ವರ್ಗ ಸಿದ್ಧಾಂತದ ಚೌಕಟ್ಟಿ ನೊಳಗೆ ತುರುಕಿಸಿ, ಇವುಗಳು 'ಶ್ರೀಮಂತ ರೈತರ' ಚಳುವಳಿಗಳೆಂಬ ಹಣೆಪಟ್ಟಿಯನ್ನು ಕಟ್ಟಿದರೂ, ಮಹಾರಾಷ್ಟ್ರದಲ್ಲಿ ಶರದ್‌ಜೋಶಿಯ ಶೇತ್ಕಾರಿ ಸಂಘಟನೆಯ ಜೊತೆಗೆ ಇಂದು ಬಾಬಾ ಪ್ರಕಾಶ್ ಅಂಬೇಡ್ಕರರ ಅತೀ ದೊಡ್ಡ ದಲಿತ ಸಂಘಟನೆ ಕೈಗೂಡಿಸಿರು ವುದೂ, ಉತ್ತರಪ್ರದೇಶದಲ್ಲಿ ಮಹೇಂದ್ರಸಿಂಗ್ ತಿಕಾಯತ್‌ನ ಹಿಂದೆ ಮುಸ್ಲಿಂ ಮತ್ತು ಹಿಂದುಳಿದ ವರ್ಗದ ರೈತರು ನಡೆದಿದ್ದೂ, ಕರ್ನಾಟಕ ರಾಜ್ಯ ರೈತ ಸಂಘದ ಜೊತೆಗೆ 'ದಲಿತ ಸಂಘರ್ಷ ಸಮಿತಿ ಜೊತೆಗೂಡುವ ಮಾತು ಕೇಳಿ ಬಂದಿದ್ದೂ' ಮತ್ತು ಇಂದು ಈ ರೈತ ಚಳುವಳಿಗಳ ಹಿಂದೆ ಇಡೀ ಗ್ರಾಮೀಣ ಜನತೆಯೇ ಒಮ್ಮೊಮ್ಮೆ ಧ್ವನಿ ಗೂಡಿಸುವಂತಾಗಿದ್ದು ಇವರನ್ನು ತಬ್ಬಿಬ್ಬಾಗಿಸುತ್ತದೆ. ಇದಕ್ಕೆ ಮುಖ್ಯ ಕಾರಣ ವೆಂದರೆ, ಈ ಎಲ್ಲಾ ನವ ಸಾಮಾಜಿಕ ಚಳುವಳಿಗಳು ಇಂದು ವರ್ಗಲಕ್ಷಣವನ್ನೂ ಮೀರಿ ''ಜನಪ್ರಿಯ ಚಳುವಳಿಗಳ'' ಹಾದಿಯನ್ನು ಹಿಡಿಯುತ್ತಿವೆ.

ಟಿ.ಎನ್. ಪ್ರಕಾಶ್ ಕಮ್ಮರಡಿ, ಬೋಧಕರು, ಕೃಷಿ ಅರ್ಥಶಾಸ್ತ್ರ ವಿಭಾಗ,
ಕೃಷಿ ವಿಶ್ವವಿದ್ಯಾನಿಲಯ, 8ನೇ ಬಡಾವಣೆ, ಬೆಂಗಳೂರು. ದೂರವಾಣಿ-331483

ಒಂದು ಜನಪ್ರಿಯ ಚಳುವಳಿಯ ಮುಖ್ಯ ಲಕ್ಷಣವೆಂದರೆ ಅದರ ವರ್ಗಲಕ್ಷಣ ಮತ್ತು ಸೈದ್ಧಾಂತಿಕ ಹಿನ್ನೆಲೆಗೂ, ಅವರ ರಾಜಕೀಯ ವರ್ತನೆ ಮತ್ತು ಕ್ರಿಯೆಗಳಿಗೂ ಹೊಂದಾಣಿಕೆ ಇಲ್ಲದಿರುವುದು. ಹಾಗಾಗಿ ಇವುಗಳು ತನ್ನಲ್ಲಿರುವ ವರ್ಗಲಕ್ಷಣವನ್ನೂ ಮೀರಿ, ಇಡೀ ಜನಸಮುದಾಯವನ್ನೇ ತನ್ನ ಜೊತೆಗೆ ಕರೆದುಕೊಂಡು ಹೋಗುವ ಶಕ್ತಿ ಪಡೆದಿರುತ್ತದೆ ಎಂಬುದಾಗಿ ಸಂಪ್ರದಾಯಿಕ ಮಾರ್ಕ್ಸ್‌ವಾದಿ ಸಿದ್ಧಾಂತದ ವಿರುದ್ಧ ಬಂಡಾಯವನ್ನೇ ಪ್ರಾರಂಭಿಸಿದ ಇಟಲಿಯ ಗ್ರಾಮುಸ್ಕಿ ಮತ್ತು ಲ್ಯಾಕ್ಲಾವ್ ಅಭಿಪ್ರಾಯಪಡುತ್ತಾರೆ.[2] ಈ ನವಸಾಮಾಜಿಕ ಚಳುವಳಿಗಳು ವಿವಿಧ ದೃಷ್ಟಿಕೋನದ, ವಿವಿಧ ವರ್ಗದ ಜನರನ್ನು ಒಂದು ರೀತಿಯ 'ಶ್ರಮದ ವಿಭಜನೆ' (Division of Labour) ಕ್ರಿಯೆಯ ಮೂಲಕ ತನ್ನಲ್ಲಿ ತೊಡಗಿಸಿಕೊಳ್ಳುತ್ತದೆ ಎಂಬುದಕ್ಕೆ ನಾವು ಈ ರೈತಚಳುವಳಿಗಳ ಉದಾಹರಣೆಯನ್ನೇ ತೆಗೆದುಕೊಳ್ಳಬಹುದು. ಇಂದು ನಮ್ಮ ರಾಜ್ಯ ರೈತಸಂಘದಲ್ಲಿ ರಾಜಕೀಯವನ್ನು ಚೆನ್ನಾಗಿ ಬಲ್ಲ H. S. ರುದ್ರಪ್ಪನಂತಹವರು, ಇದಕ್ಕೆ ನಾಯಕತ್ವವನ್ನು ಒದಗಿಸಿರುತ್ತಾರೆ. ಸಿದ್ಧಾಂತ ಮತ್ತು ವೈಚಾರಿಕತೆಯನ್ನು ಚೆನ್ನಾಗಿ ಪ್ರತಿಪಾದಿಸಬಲ್ಲ ಪ್ರೊ. ಎಂ. ಡಿ. ನಂಜುಂಡಸ್ವಾಮಿಯಂತಹವರು ಇದರ ವೈಚಾರಿಕ ಮುಖಂಡರಾಗಿರುತ್ತಾರೆ. ಶ್ರೀಮಂತ ರೈತವರ್ಗ ಇವರ ಸಂಘಟನೆಯ ಕಾರ್ಯವನ್ನೂ ಮತ್ತು ಆರ್ಥಿಕ ಸಹಾಯವನ್ನು ಕೈಗೆತ್ತಿಕೊಂಡು ನಮ್ಮ ಇಂದಿನ ರೈತ ಚಳುವಳಿಗಳ ಮುಂಚೂಣಿಯಲ್ಲಿರುತ್ತದೆ. ಇನ್ನುಳಿದ ಬಹುತೇಕ ರೈತಾಪಿವರ್ಗ ಮತ್ತು ಇತರ ಗ್ರಾಮೀಣ ಬಡಜನತೆ, ಇಂತಹ ಯಾವುದೇ ವಿಶೇಷ ಕಾರ್ಯ ಸಾಧಿಸಲಾಗದೆ, ಸಾಮಾನ್ಯ ಕಾರ್ಯಕರ್ತರ ರೂಪದಲ್ಲಿ ಈ ರೈತಚಳುವಳಿಗಳ ಹಿಂಪಡೆ ಶಕ್ತಿಯಾಗಿರುತ್ತದೆ.

ಈ ಜನಪ್ರಿಯ ಚಳುವಳಿಗಳ ಮತ್ತೊಂದು ಲಕ್ಷಣವೆಂದರೆ ಪಕ್ಷರಾಜಕಾರಣದ ಹೊರಗೆ ಹೋರಾಟ ನಡೆಸಲು ಹೆಚ್ಚು ಒಲವು ತೋರಿಸುತ್ತಿರುವುದು. ಇದಕ್ಕೆ ಕಾರಣ ವಾದರು ಸ್ಪಷ್ಟವಾಗಿದೆ. ಇಂದು ರಾಜಕಾರಣಿಗಳು ನಡೆಸುವ ಭ್ರಷ್ಟಾಚಾರ, ವೈಭೋಗ, ಸ್ವಜನಪಕ್ಷಪಾತ ಇತ್ಯಾದಿಗಳಿಂದ ಜನಸಾಮಾನ್ಯರು ರೋಸಿಹೋಗಿರುವರು. ಇವರ ಜೊತೆಗೂಡಿರುವ ಬ್ರಿಟೀಷರಿಂದ ಬಳುವಳಿಯಾಗಿ ಬಂದಿರುವ ನಮ್ಮ 'ನೌಕರಶಾಹಿ' ಬಡ ಜನರ ಮೇಲೆ ತೋರಿಸುತ್ತಿರುವ ನಿಸ್ಸೀಮ ನಿರ್ಲಕ್ಷದಿಂದ ಅವರನ್ನು ರೊಚ್ಚಿಗೇಳುವಂತೆ ಮಾಡಿದೆ. ವಸಾಹತುಶಾಹಿ ಅಂದು ನಡೆಸುತ್ತಿದ್ದ ಶೋಷಣೆ, ಲೂಟಿಗಳಿಗೆ ಪೂರಕವಾದ ಅದೇ ಮನೋಭಾವನೆಯನ್ನು ನಮ್ಮ ನೌಕರಶಾಹಿ ಇಂದೂ ಹಿಡಿದಿಟ್ಟುಕೊಂಡಿದೆ ಎಂದರೆ ತಪ್ಪಾಗಲಾರದು. ಭ್ರಷ್ಟರಾಜಕಾರಿಣಿಗಳು, ದುಷ್ಟ ಅಧಿಕಾರಿಗಳು ಸೇರಿ ನಡೆಸುತ್ತಿರುವ ಲೂಟಿಗೆ ಕೈಜೋಡಿಸಿರುವ ಮತ್ತೊಂದು ವರ್ಗವೆಂದರೆ ಕೈಗಾರಿಕಾ ಬಂಡವಾಳಶಾಹಿಯಾಗಿರುತ್ತದೆ. ಈ ವರ್ಗ ಇಂದು ನಮ್ಮಲ್ಲಿ ಕಿತ್ತುತಿನ್ನುತ್ತಿರುವ

ಬಡತನ, ನಿರುದ್ಯೋಗಗಳಂತಹ ಸಮಸ್ಯೆಗಳಿಂದ ಹಿಡಿದು. ದಲಿತರು, ರೈತರು ಪರಿಸರಕ್ಕೆ ಸಂಬಂಧಿಸಿದ ಸಮಸ್ಯೆಗಳವರೆಗೆ, ಎಲ್ಲವುದಕ್ಕೂ ಮೂಲಕಾರಣವಾಗಿರುತ್ತದೆ. ನಮ್ಮ ರಾಜ್ಯವ್ಯವಸ್ಥೆ ಎಂಬುದು ಬಹಳಷ್ಟುಮಟ್ಟಿಗೆ ಈ ಮೇಲಿನ ಮೂರು ಗುಂಪುಗಳನ್ನು ಪ್ರತಿನಿಧಿಸುತ್ತಿರುವುದರಿಂದ (ಇವುಗಳ ಜೊತೆಗೆ ಭೂಮಾಲೀಕ ಬಂಡವಾಳಶಾಹಿಯೂ ಸೇರಿರುತ್ತದೆ ಎಂಬುದನ್ನು ಮರೆಯಬಾರದು), ಈ ಎಲ್ಲಾ ನವಸಾಮಾಜಿಕ ಚಳುವಳಿಗಳ ಹೋರಾಟವೆಂಬುದು 'ಅಮೂರ್ತ'ವಾಗಿ ಇಡೀ ರಾಜ್ಯವ್ಯವಸ್ಥೆಯ ವಿರುದ್ಧವೇ ಆಗಿದ್ದು‚ 'ಮೂರ್ತ' ಸ್ವರದಲ್ಲಿ ಇವುಗಳು ಇಂದಿನ ಪಕ್ಷರಾಜಕಾರಣವನ್ನು ಧಿಕ್ಕರಿಸುವಂತೆ ಮಾಡಿರುತ್ತದೆ. ಈ ಕಾರಣವಾಗಿಯೇ ಇಂದು ಜನಸಾಮಾನ್ಯರಲ್ಲಿ, ಬರಿದೇ ಸರ್ಕಾರಗಳು ಮಾತ್ರವಲ್ಲ ಪಾರ್ಲಿಮೆಂಟರಿ ವ್ಯವಸ್ಥೆಯಿಂದ ಹಿಡಿದು, ನಾವು ಅಳವಡಿಸಿ ಕೊಂಡಿರುವ 'ಮಿಶ್ರಅರ್ಥವ್ಯವಸ್ಥೆ' ಹಾಗೆ ವಿಜ್ಞಾನ ಮತ್ತು ತಂತ್ರಜ್ಞಾನ ವ್ಯವಸ್ಥೆಯವರೆಗೆ, ಎಲ್ಲವೂ, ಒಟ್ಟಾರೆಯಾಗಿ 'ಇಡೀ ವ್ಯವಸ್ಥೆಯೇ' ಕಟ್ಟಕಡೆಯ ಮನುಷ್ಯನಿಗೆ ಒಳಿತನ್ನು ತರಲು ಸೋಲುತ್ತಿರುವ ಭಾವನೆ ದಟ್ಟವಾಗುತ್ತಿರುವುದಾಗಿ ಖ್ಯಾತ ಚಿಂತಕರೂ, ಪತ್ರಕರ್ತರೂ ಆದ ರಜನೀ ಕೊಟಾರಿಯವರು ಅಭಿಪ್ರಾಯಪಡುತ್ತಾರೆ.[3] ಈ ಎಲ್ಲಾ ಜನಪ್ರಿಯ, ನವಸಾಮಾಜಿಕ ಚಳುವಳಿಗಳ ಸೂಕ್ಷ್ಮಾತಿಸೂಕ್ಷ್ಮ ಸ್ಥರದಲ್ಲಿ ಇಂದು ವ್ಯವಸ್ಥೆ ಒಟ್ಟಾರೆಯಾಗಿ ಎದುರಿಸುತ್ತಿರುವ ಬಿಕ್ಕಟ್ಟನ್ನು ಮತ್ತು ಅದಕ್ಕೆಕಾರಣಗಳನ್ನು ಅರ್ಥಮಾಡಿಕೊಂಡು ಅದಕ್ಕೆ ಪ್ರತಿಕ್ರಿಯಿಸುವ ದಾರಿಯನ್ನು ಹುಡುಕುವ ಪ್ರಯತ್ನ ಅಡಗಿರುತ್ತದೆ, ಎನ್ನಲಾಗಿದೆ. ಇಂದು ಚಾಲ್ತಿಯಲ್ಲಿರುವ ಯಾವುದೇ ಸಿದ್ಧಾಂತಗಳು ಈ ಬಿಕ್ಕಟ್ಟನ್ನು ಅರ್ಥಮಾಡಿಕೊಳ್ಳಲು ಅಸಮರ್ಥವಾಗಿವೆ ಮತ್ತು ಈ ಎಲ್ಲಾ ಚಳುವಳಿಗಳು ಎತ್ತಿಕೊಳ್ಳುವ ವಿಚಾರಗಳಾದರೋ ಇಂದಿನ ಸರ್ಕಾರಗಳು, ರಾಜಕೀಯ ಪಕ್ಷಗಳು, ಅಷ್ಟೇಕೆ ಯಾವುದೇ ಪತ್ರಿಕೆಗಳು, ಮಾಧ್ಯಮಗಳು ಎತ್ತಿಕೊಳ್ಳದ ಅಥವಾ ಎತ್ತಿಕೊಳ್ಳಲಿಚ್ಛಿಸದ ವಿಚಾರಗಳಾಗಿರುತ್ತವೆ, ಹಾಗಾಗಿ ಈ ಎಲ್ಲಾ ನವ ಸಾಮಾಜಿಕ ಚಳುವಳಿಗಳು ಒಂದು ಚಾರಿತ್ರಿಕ ಪ್ರಕ್ರಿಯೆಯಾಗಿದೆ. ಎಂಬುದು ರಜನಿ ಕೊಠಾರಿಯವರ ವಾದವಾಗಿರುತ್ತದೆ.

ರೈತ ಹೋರಾಟಗಳು ಮತ್ತು ಪಕ್ಷರಾಜಕಾರಣ

ಇಂದು ಗ್ರಾಮೀಣ ಭಾರತದಲ್ಲಿ ನಡೆಯುತ್ತಿರುವ ಎಲ್ಲಾ ನವಸಾಮಾಜಿಕ ಚಳುವಳಿಗಳಲ್ಲಿ 'ರೈತ ಹೋರಾಟಗಳು ಅತ್ಯಂತ ಪ್ರಮುಖವಾಗಿರುತ್ತವೆ. ದೇಶಾದ್ಯಂತ ಇಂದು ನಡೆಯುತ್ತಿರುವ ರೈತ ಹೋರಾಟಗಳು ಪಕ್ಷರಾಜಕಾರಣದ ಹೊರಗೇ ನಡೆಯುತ್ತಿರುವುದಕ್ಕೆ ಕಾರಣಗಳನ್ನು ನಾವು ಈ ಹಿನ್ನೆಲೆಯಲ್ಲಿ ಚರ್ಚಿಸಬಹುದಾಗಿದೆ. ನಮ್ಮ

ರೈತಚಳುವಳಿಗಳ ಹಿಂದೆ ನಿಂತಿರುವ 'ಶಕ್ತಿ'ಗೆ, ಅಂದರೆ ಬಹುತೇಕ ಗ್ರಾಮೀಣ ರೈತಾಪಿ ಜನಕ್ಕೆ ಪಕ್ಷರಾಜಕಾರಣದ ಹೊರಗೆ ಹೊರಾಟ ನಡೆಸುವಂತಾಗಲು ಈ ಮೇಲೆ ತಿಳಿಸಿರುವ ಕಾರಣಗಳಿದ್ದರೆ, ಈ ಚಳುವಳಿಗಳ ಮುಂಚೂಣಿಯಲ್ಲಿರುವ ಶಕ್ತಿಗೆ, ಅಂದರೆ ಈ ಹಿಂದೆ ತಿಳಿಸಿರುವಂತೆ, ಶ್ರೀಮಂತ ರೈತವರ್ಗಕ್ಕೆ ಬೇರೇನೇ ಆದ ಕಾರಣಗಳಿದ್ದು ಈ ಬಗ್ಗೆ ಸ್ವಲ್ಪ ವಿವರವಾಗಿ ಚರ್ಚಿಸಲಾಗಿದೆ.

ಮೊದಲು, ನಮ್ಮ ದೇಶದ ಪಕ್ಷರಾಜಕಾರಣದಲ್ಲಿ ಅಥವಾ ನಮ್ಮ ರಾಜ್ಯವ್ಯವಸ್ಥೆಯ 'ಶಕ್ತಿ ಕೂಟದಲ್ಲಿ' (POWER STRUCTURE) ಈ ಶ್ರೀಮಂತ ರೈತ ವರ್ಗದ ಸ್ಥಾನವೇನೆಂಬುದನ್ನು ಅರಿಯೋಣ. ಒಂದು ಬಂಡವಾಳಶಾಹಿ ರಾಜ್ಯ ವ್ಯವಸ್ಥೆಯಲ್ಲಿ, ಒಂದು ವರ್ಗ ಶಕ್ತಿಕೂಟದಲ್ಲಿ ಹೊಂದಿರುವ ಸ್ಥಾನ, ಆ ವರ್ಗ ಉತ್ಪಾದನಾ ಸಾಧನಗಳ ಮೇಲೆ ಹೊಂದಿರುವ ಒಡೆತನದ ಮೇಲೆ ಅವಲಂಭಿಸಿರುತ್ತದೆ ಎಂಬುದಾಗಿ ಅರ್ಥಶಾಸ್ತ್ರಜ್ಞರಾದ ಡಾ|| ಎಂ. ವಿ. ನಾಡಕರ್ಣಿಯವರು ಅಭಿಪ್ರಾಯಪಡುತ್ತಾರೆ.4 ಇಲ್ಲಿ ಮುಖ್ಯವಾಗಿರುವ ಉತ್ಪಾದನಾ ಸಾಧನಗಳೆಂದರೆ ಭೂಮಿ, ಕೈಗಾರಿಕಾ ಬಂಡವಾಳ ಮತ್ತು ವ್ಯಾಪಾರಿಬಂಡವಾಳಗಳಾಗಿರುತ್ತವೆ. ನಮ್ಮ ಶ್ರೀಮಂತ ರೈತವರ್ಗವಿಂದು ಭೂಮಿ ಮತ್ತು ಸ್ವಲ್ಪಮಟ್ಟಿಗೆ ವ್ಯಾಪಾರಿ ಬಂಡವಾಳದ ಮೇಲೂ ಒಡೆತನ ಹೊಂದಿರುವುದರಿಂದ ಶಕ್ತಿಕೂಟದಲ್ಲಿ ಅದರ ಸ್ಥಾನ ಈಗಾಗಲೇ ಗಮನಾರ್ಹವಾಗಿರುತ್ತದೆ. ಇಂದು ನಮ್ಮ ಲೋಕಸಭೆ, ಮತ್ತು ವಿವಿಧ ರಾಜ್ಯಗಳ ಶಾಸನಸಭೆಗಳಲ್ಲಿ ಮುಕ್ಕಾಲು ಪಾಲು ಸದಸ್ಯರು ಕೃಷಿಹಿನ್ನೆಲೆಯಿಂದ ಬಂದವರೇ ಆಗಿರುವುದು ಇದಕ್ಕೇ ನಿದರ್ಶನವಾಗಿರುತ್ತದೆ. ಹಾಗಿದ್ದ ಮೇಲೆ, ಶ್ರೀಮಂತರೈತವರ್ಗವಿಂದು ಚಳುವಳಿ ಪಥಹಿಡಿದಿರುವ ಕಾರಣವೇನೆಂಬ ಪ್ರಶ್ನೆ ಏಳುತ್ತದೆ. ಈ ವರ್ಗವಿಂದು ಆರ್ಥಿಕ ಅನಿಶ್ಚಯತೆ ಮತ್ತು ಸಾಮಾಜಿಕ, ರಾಜಕೀಯ ಅಭದ್ರತೆಗಳನ್ನು ಎದುರಿಸುತ್ತಿರುವುದೇ ಇದಕ್ಕೆ ಮುಖ್ಯ ಕಾರಣವಾಗಿರುತ್ತದೆ. ಹಾಗಾಗಿ ಇವುಗಳ ವಿರುದ್ಧ ಹೋರಾಡಲು ಮತ್ತು ಶಕ್ತಿಕೂಟದಲ್ಲಿ ಕೈಗಾರಿಕಾಬಂಡವಾಳದೊಡನೆ ಸ್ಪರ್ಧೆ ಎದುರಿಸಿ, ತನ್ನ ಸ್ಥಾನವನ್ನು ಗಟ್ಟಿ ಮಾಡಿಕೊಳ್ಳಲು ಭಾರತೀಯ ಶ್ರೀಮಂತ ರೈತವರ್ಗವಿಂದು ನಮ್ಮ ರೈತಹೋರಾಟಗಳ ಮುಂಚೂಣಿಯನ್ನು ಆಕ್ರಮಿಸಿಕೊಂಡಿವೆ ಎಂದರೆ ತಪ್ಪಾಗಲಾರದು. ಈ ರೈತಹೋರಾಟಗಳು ನಮ್ಮ ಶ್ರೀಮಂತ ರೈತವರ್ಗಕ್ಕೆ ಇಂದು, ಈ ಮೇಲೆ ಹೇಳಿದ ಕಾರಣಗಳನ್ನು ಈಡೇರಿಸಿಕೊಳ್ಳಲು ಒಂದು ಒತ್ತಡ ಗುಂಪಾಗಿ ಮಾತ್ರ ಬೇಕಾಗಿವೇ ಹೊರತು ಒಂದು ಪ್ರತ್ಯೇಕ ಪಕ್ಷವೇದಿಕೆಯಾಗಿ ಅಲ್ಲ. ಮೊದಲು ನಮ್ಮ ಶ್ರೀಮಂತ ರೈತವರ್ಗವಿಂದು ಎದುರಿಸುತ್ತಿರುವ ಆರ್ಥಿಕ ಅನಿಶ್ಚಯತೆ ಮತ್ತು ರಾಜಕೀಯ, ಸಾಮಾಜಿಕ ಅಭದ್ರತೆಯ ಬಗ್ಗೆ ಸ್ವಲ್ಪ ಚರ್ಚಿಸೋಣ.

ಈ ಆಧುನಿಕ ಕೃಷಿ ತಂತ್ರಜ್ಞಾನದ ಬಳಕೆಯಿಂದ ನಮ್ಮ ಶ್ರೀಮಂತ ರೈತವರ್ಗಕ್ಕೆ ಮೊದಲನೇ ವರ್ಷಗಳಲ್ಲಿ ಒಳ್ಳೆ ಲಾಭ ದೊರೆಯುವಂತಾಯ್ತು. ನಂತರದ ವರ್ಷಗಳಲ್ಲಿ ಒಂದೆಡೆಯಿಂದ ನಮ್ಮ ಕೃಷಿ ಉತ್ಪಾದನೆಯಲ್ಲಿ ಕುಂಟಿತ ಬೆಳವಣಿಗೆ ಕಂಡುಬಂದರೆ, ಮತ್ತೊಂದೆಡೆಯಿಂದ ಈ ತಂತ್ರಜ್ಞಾನದ ಬಳಕೆಯಿಂದ ಉತ್ಪಾದನಾ ವೆಚ್ಚ ಅಧಿಕವಾಗುತ್ತಾ ಹೋಗಿರುವುದು ಖ್ಯಾತ ಅರ್ಥಶಾಸ್ತ್ರಜ್ಞರಾದ ಸಿ. ಹೆಚ್. ಹನುಮಂತರಾವ್ ಮತ್ತು ಎಂ. ವಿ. ನಾಡಕರ್ಣಿ ಮುಂತಾದವರು ನಡೆಸಿದ ಅಧ್ಯಯನಗಳಿಂದ ವ್ಯಕ್ತವಾಗುತ್ತದೆ.5 ಇದರ ಪರಿಣಾಮವಾಗಿ, 'ಮಾರಾಟ ಮಿಗಿತವನ್ನು'(Markatable Surplus) ಹೆಚ್ಚು ಉತ್ಪಾದಿಸುತ್ತಿದ್ದ, ನೀರಾವರಿ ಪ್ರದೇಶದ ಬಹುತೇಕ ವಾಣಿಜ್ಯ ಬೆಳೆಗಾರರಿಗೆ ಕೃಷಿಯಿಂದ ಬರುತ್ತಿದ್ದ ಲಾಭದಾಯಕತೆಯಲ್ಲಿ ಕುಂಠಿತ ಕಂಡುಬರಲು ಶುರುವಾಯ್ತು. ಇನ್ನೊಂದೆಡೆಯಿಂದ ಬ್ಯಾಂಕು, ಸಹಕಾರಿಸಂಸ್ಥೆಗಳಿಂದ ನಮ್ಮ ರೈತರು ಪಡೆದ ಸಾಲದ ಪ್ರಮಾಣ ಅಧಿಕವಾಗುತ್ತಾ ನಮ್ಮ ರೈತರು ಋಣಬಾಧೆಯಲ್ಲಿ ಬೀಳುವಹಾಗಾಯ್ತು ಒಟ್ಟಾರೆಯಾಗಿ ಇವರು ಆರ್ಥಿಕ ಅನಿಶ್ಚಯತೆಗೆ ಒಳಗಾಗುವ ಹಾಗಾಯ್ತು ಮತ್ತು ಇದು ಇವರನ್ನು ಚಳುವಳಿಗೆ ಪ್ರೇರೇಪಿಸಿ, ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಮತ್ತು 'ಸಾಲಮನ್ನಾ' ದಂತಹ ಬೇಡಿಕೆಗಳನ್ನು ಮುಂದಿಡುವಂತಾಯ್ತು.

ಇದರ ಜೊತೆಗೆ ಭೂಸುಧಾರಣೆ, ಮೀಸಲಾತಿಗಳಂತಹ ಕಾರ್ಯಕ್ರಮಗಳಿಂದ ಈ ಶ್ರೀಮಂತ ರೈತವರ್ಗ ಅದುವರೆಗೆ ಗ್ರಾಮೀಣಪ್ರದೇಶಗಳಲ್ಲಿ ತಾವು ಹೊಂದಿದ್ದ ರಾಜಕೀಯ ಮತ್ತು ಸಾಮಾಜಿಕ ಪ್ರಾಬಲ್ಯವನ್ನು ಮುರಿಯುವಂತಾಯ್ತು. ಏಕೆಂದರೆ ನಮ್ಮ ಈ ಶ್ರೀಮಂತರೈತವರ್ಗವೆಂಬುದು ಹಸಿರುಕ್ರಾಂತಿ ಹುಟ್ಟುಹಾಕಿದ 'ಭೂಮಾಲೀಕ ಬಂಡವಾಳಶಾಹಿ' ಬೆಳವಣಿಗೆ ಮತ್ತು ಇದಕ್ಕೆ ಜಾತಿ ಆಯಾಮ ಬೆರೆತು ಸಂಭವಿಸಿದ ಸಾಮಾಜಿಕ ಪ್ರಕ್ರಿಯೆಗಳ ಪರಿಣಾಮವಾಗಿರುತ್ತದೆ.6 ಇದರ ಫಲವಾಗಿ ಪ್ರತಿಯೊಂದು ರಾಜ್ಯದಲ್ಲೂ ವ್ಯವಸಾಯ ಪ್ರಧಾನವಾದ ಮಧ್ಯಮ ಶ್ರೇಣಿಯ ಕೆಲ 'ಪ್ರಭಾವ ಜಾತಿಗಳು' (Dominent Casts) ಮೇಲೇಳುವ ಹಾಗಾಯ್ತು. ಉದಾಹರಣೆಗೆ ಕರ್ನಾಟಕದಲ್ಲಿ ಒಕ್ಕಲಿಗರು, ಲಿಂಗಾಯ್ತ ಜಾತಿಗಳಾದರೆ, ಆಂಧ್ರಪ್ರದೇಶದಲ್ಲಿ ನಾಯ್ಡು, ಕೊಮ್ಮ ಜಾತಿಗಳು, ಉತ್ತರದಲ್ಲಿ ಜಾಟ್, ಬನಿಯಾ ಕೂರ್ಮಿಗಳಾದರೆ, ಮಹಾರಾಷ್ಟ್ರದಲ್ಲಿ ಮರಾಠರು, ತಮಿಳ್ನಾಡಿನಲ್ಲಿ ನಾಯ್ಡುಗಳು ಮುಂತಾದವರು. ಈ ಜಾತಿಗಳ ದೊಡ್ಡ ಮತ್ತು ಮಧ್ಯಮ ರೈತರು ಬಹಳಷ್ಟು ವ್ಯವಸಾಯಯೋಗ್ಯ ಭೂಮಿಯ ಜೊತೆಗೆ, ಆಧುನಿಕ ಕೃಷಿತಂತ್ರಜ್ಞಾನವನ್ನು, ವ್ಯಾಪಾರ ಸಾಂಸ್ಥಿಕ ಮೂಲದ ಸಾಲಸೌಲಭ್ಯಗಳನ್ನು, ಹಾಗೆ ಪಂಚಾಯ್ತಿ, ಸಹಕಾರಿ ಸಂಸ್ಥೆಗಳು ಇನ್ನಿತರ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಕೈವಶ ಮಾಡಿಕೊಂಡಿದ್ದು, ತಮ್ಮ ಆರ್ಥಿಕ, ರಾಜಕೀಯ ಶಕ್ತಿಗಳನ್ನು ಗಟ್ಟಿಮಾಡಿ

ಕೊಂಡಿದ್ದರು. ಆದರೆ ಮೀಸಲಾತಿ, ಭೂಸುಧಾರಣೆಗಳಂತಹ ಕ್ರಮಗಳು ಶ್ರೀಮಂತ ರೈತರು ತಾವು ಗ್ರಾಮೀಣ ವ್ಯವಸ್ಥೆಯ ಮೇಲೆ ಅದುವರೆಗೆ ಹೊಂದಿದ್ದ ಪ್ರಾಭಲ್ಯವನ್ನು ಮುರಿಯುವಂತೆಮಾಡಲು ನೇರವಾಗಿ ಕೊಟ್ಟಂತಹ ಪೆಟ್ಟಾಗಿತ್ತು. ಇದಕ್ಕೆ ನಮ್ಮ ಕರ್ನಾಟಕದಲ್ಲಿ ದೇವರಾಜ್‌ಅರಸ್ ಅವಧಿಯಲ್ಲಿ ನೆಡೆಸಿದ ಆಡಳಿತವೇ ಒಂದು ಸ್ಪಷ್ಟ ಉದಾಹರಣೆಯಾಗಿರುತ್ತದೆ.7 ದೇವರಾಜ್‌ಅರಸ್ ಹಾವನೂರು ವರದಿಯ ಅನುಷ್ಠಾನದ ಮುಖೇನ ತಂದ ಮೀಸಲಾತಿ ಮತ್ತು ಭೂಸುಧಾರಣಾ ಕ್ರಮಗಳಿಂದ ಇಲ್ಲಿನ ಪ್ರಭಾವ ಜಾತಿಗಳಾದ ಒಕ್ಕಲಿಗರು ಮತ್ತು ಲಿಂಗಾಯ್ತರ ಅದುವರೆಗಿನ ಪ್ರಾಭಲ್ಯವನ್ನು ಮುರಿದು, ಹಿಂದುಳಿದವರ್ಗಗಳನ್ನು, ಮೇಲೆತ್ತುವಂತೆ ಮಾಡಿದ್ದ. ಆದರೆ ಈ ಪ್ರಯೋಗ ಕರ್ನಾಟಕದಲ್ಲಿ ಕೆಲಕಾಲಮಾತ್ರ ನೆಡೆದಿರುತ್ತದೆ. ನಂತರದ ವರ್ಷಗಳಲ್ಲಿ ಅದರಲ್ಲೂ ಜನತಾ ಪಕ್ಷದ ಆಳ್ವಿಕೆಯ ಅವಧಿಯಲ್ಲಿ ಈ ಎರಡು ಪ್ರಭಲ ಜಾತಿಗಳ ರಾಜಕೀಯ ಪ್ರಾಭಲ್ಯ ಪುನಃ ಸ್ಥಾಪಿತವಾಯ್ತೆನ್ನಬಹುದು. ಆದರೂ ಕೂಡ ಈ ನಮ್ಮ ಶ್ರೀಮಂತ ರೈತವರ್ಗಕ್ಕಿಂದು ಈ ರೀತಿಯ ರಾಜಕೀಯ ಮತ್ತು ಸಾಮಾಜಿಕ ಅಭದ್ರತೆಯ ಭಯ ಇದ್ದೇ ಇದೆ. ಜೊತೆಗೆ ಕೈಗಾರಿಕಾ ಬಂಡವಾಳದ ಪೈಪೋಟಿ ಬೇರೆ ಇದೆ. ಹೀಗಾಗಿ, ಶಕ್ತಿಕೂಟದಲ್ಲಿ ತನ್ನ ಸ್ಥಾನ ಭದ್ರವಾಗಲು ಮತ್ತು ಈ ಮೇಲೆ ತಿಳಿಸಿರುವ ಅಭದ್ರತೆ ಮತ್ತು ಅನಿಶ್ಚಯತೆಗಳ ವಿರುದ್ಧ ಹೋರಾಡಲು ಈ ವರ್ಗವಿಂದು ನಮ್ಮ ರೈತ ಚಳುವಳಿಗಳ ಮುಂಚೂಣಿಯನ್ನು ಆಕ್ರಮಿಸಿಕೊಂಡಿವೆ ಎಂದರೆ ತಪ್ಪಾಗಲಾರದು. ಇದಕ್ಕಾಗಿ ರೈತಚಳುವಳಿಗಳನ್ನು ಒಂದು ಒತ್ತಡ ಗುಂಪಾಗಿ ಮಾತ್ರ ಬಳಸಲಾಗಿದೆ ಹೊರತು ಒಂದು ಪ್ರತ್ಯೇಕ ರಾಜಕೀಯ ಪಕ್ಷವೇದಿಕೆಯಾಗಿ ಅಲ್ಲ ಎನ್ನಬಹುದು.

ಇದರ ಜೊತೆಗೆ ಇನ್ನೂ ಕೆಲ ವ್ಯಾವಹಾರಿಕ ಕಾರಣಗಳು ನಮ್ಮ ಈ ಶ್ರೀಮಂತ ರೈತವರ್ಗವನ್ನು ಪಕ್ಷರಾಜಕಾರಣದ ಹೊರಗೇ ಹೋರಾಡುವಂತೆ ಮಾಡಿದವು ಎನ್ನಬಹುದು. ಈ ವರ್ಗದ ಹಲವಾರು ಬೇಡಿಕೆಗಳ ಈಡೇರಿಕೆಗೆ ಪಕ್ಷವೇದಿಕೆಗಿಂತ ಚಳುವಳಿಗಳ ಮೂಲಕ ಒತ್ತಡತರುವುದು ಶೀಘ್ರವೂ, ಹೆಚ್ಚು ಫಲಕಾರಿಯೂ ಆಗಿರುತ್ತದೆಂಬುದು ರೈತ ಮುಖಂಡರುಗಳ ಅಭಿಪ್ರಾಯವಾಗಿರುತ್ತದೆ. ಪಕ್ಷಕಟ್ಟಿ ಅಧಿಕಾರ ಸ್ಥಾಪಿಸುವುದಾದರೂ ಕಷ್ಟಕರವಾದ ಕೆಲಸ, ಮತ್ತು ಅಧಿಕಾರಕ್ಕೆ ಬರಲು ಬಹುತೇಕ ಗ್ರಾಮೀಣ ಜನರ ಸಹಾಯ ಬೇಕಾಗಿರುತ್ತದೆ. ಒಮ್ಮವೇಳೆ ಅಧಿಕಾರಕ್ಕೆ ಬಂದರೂ, ಆ ಎಲ್ಲಾ ವರ್ಗದ ಜನರ ಹಿತಾಸಕ್ತಿಗೂ ಗಮನಕೊಡುವುದು ಅನಿವಾರ್ಯವಾಗುತ್ತದೆ. ಅಂತಹ ಕೆಲವು ಕಾರ್ಯಕ್ರಮಗಳು ಈ ಶ್ರೀಮಂತ ರೈತರ ಹಿತಾಸಕ್ತಿಗೆ ವಿರುದ್ಧವಾಗಿರುವ ಸಾಧ್ಯತೆಗಳು ಇರುತ್ತವೆ. ಉದಾಹರಣೆಗೆ ಕೃಷಿಕಾರ್ಮಿಕರಿಗೆ ಕನಿಷ್ಟದಿನಗೂಲಿ ಕೊಡುವುದು, ಮೀಸಲಾತಿ ಮತ್ತು ಪ್ರಗತಿಪರ ಭೂಸುಧಾರಣೆಗಳಂತಹ ಕ್ರಮಗಳನ್ನು

ಕಟ್ಟುನಿಟ್ಟಾಗಿ ಜಾರಿಗೆ ತರುವುದು, ಸಹಕಾರಿಬೇಸಾಯ ಪದ್ಧತಿಯನ್ನು ಅನುಷ್ಠಾನಕ್ಕೆ ತರುವುದು, ಆಹಾರಸಾಮಗ್ರಿಗಳ ಸಗಟುವ್ಯಾಪಾರದ ರಾಷ್ಟ್ರೀಕರಣ, ಇತ್ಯಾದಿಗಳು ಇದರ ಬದಲಿಗೆ ಹೋರಾಟ ಪಕ್ಷಾತೀತವಾಗಿದ್ದರೆ ಉತ್ತಮವೆಂದು ರೈತಮುಖಂಡರುಗಳು ಭಾವಿಸಿರುವಂತಿದೆ. ಇವೆಲ್ಲಕ್ಕಿಂತ ಮುಖ್ಯವಾಗಿ, ಇಂದು ಹಣವಿಲ್ಲದೆ ರಾಜಕೀಯ ಮಾಡಲು ಅಸಾಧ್ಯದ ಮಾತಾಗಿದೆ. ಪಕ್ಷಕಟ್ಟಿ, ಚುನಾವಣೆನಡೆಸಲು ಹಣ ಬೇಕಾಗಿದ್ದು, ಇದಕ್ಕಾಗಿ ಕೈಗಾರಿಕಾ ಬಂಡವಾಳಶಾಹಿಯ ಮೊರೆಹೋಗುವುದು ಅನಿವಾರ್ಯವಾಗುತ್ತದೆ. ಅಂದರೆ, ಶಕ್ತಿಕೂಟದಲ್ಲಿನ, ತನ್ನ ಪ್ರತಿಸ್ಪರ್ಧಿಯ ಮೊರೆಹೋಗುವುದು, ನಮ್ಮ ಈ ಭೂಮಾಲೀಕ ಬಂಡವಾಳಶಾಹಿಗೆ ಅಸಾಧ್ಯದ ಮಾತಾಗಿದೆ.

'ಕನ್ನಡ ದೇಶ'ದ ಭವಿಷ್ಯ :

ಈ ಎಲ್ಲಾ ಹಿನ್ನೆಲೆಯಲ್ಲಿ, ಇಂದು ಕರ್ನಾಟಕದಲ್ಲಿ, ಪ್ರೊ॥ ಎಂ.ಡಿ. ನಂಜುಂಡಸ್ವಾಮಿಯವರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದಿರುವ 'ಕನ್ನಡ ದೇಶ' ಪಕ್ಷದ ಭವಿಷ್ಯದ ಬಗೆಗೂ ಚಿಂತಿಸಬಹುದಾಗಿದೆ. ಈ ಪಕ್ಷಕ್ಕೆ ಸಂಘಟನೆ ದೃಷ್ಟಿಯಿಂದ, ಕರ್ನಾಟಕ ರಾಜ್ಯ ರೈತ ಸಂಘವೇ ಹೆಚ್ಚುಕಡಿಮೆ ಬೆನ್ನೆಲುಬಾಗಿದ್ದು, ಈ ಸಾರಿಯ ವಿಧಾನಸಭಾ ಚುನಾವಣೆಯಲ್ಲಿ ಇದು ನೇರವಾಗಿ ಸ್ಪರ್ಧಿಸಲು ತೀರ್ಮಾನಿಸಿರುತ್ತದೆ. ಲೋಹಿಯಾವಾದಿಗಳಾದ ನಂಜುಂಡಸ್ವಾಮಿಯವರಿಗೆ ದೀರ್ಘವಾದ ಸಂಘಟನೆ ಮತ್ತು ಹೋರಾಟಗಳ ಹಿನ್ನೆಲೆಯಿದೆ. ಆದರೆ, ಈ ಮೇಲೆ ಚರ್ಚಿಸಿರುವ ಎಲ್ಲಾ ಅಂಶಗಳನ್ನು ಗಮನಿಸಿದಾಗ, ಅವರು ಪಕ್ಷರಾಜಕಾರಣದಲ್ಲಿ ಯಶಸ್ವಿಯಾಗಲು ಹಲವು ತೊಡಕುಗಳಿರುವುದು ಸ್ಪಷ್ಟವಾಗುತ್ತದೆ. ಈ ಪಕ್ಷಕ್ಕೆ ಇಂದು ಹಣದ ರಾಜಕೀಯದ ವಿರುದ್ಧ, ಕೈಗಾರಿಕಾ ಬಂಡವಾಳಶಾಹಿಯ ವಿರುದ್ಧ ಹೋರಾಡುವಷ್ಟು ಶಕ್ತಿ ಇದೆಯೇ ಎಂಬುದರ ಬಗ್ಗೆ ಸಂಶಯ ವೇಳುತ್ತದೆ. ಇಂದು 'ಕನ್ನಡ ದೇಶ' ಪಕ್ಷ ಯಶಸ್ವಿಯಾಗಬೇಕಾದರೆ, ಇದು ದಲಿತರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು, ಗ್ರಾಮೀಣ ಮಹಿಳೆಯರು, ಹೀಗೆ, ಇಡೀ ಗ್ರಾಮೀಣ ಶೋಷಿತವರ್ಗವನ್ನೇ ಒಳಗೊಳ್ಳುವ ಹಾಗೇ ಮತ್ತು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಕಡೆಗೂ ಗಮನವೀಯುವ ಒಂದು 'ಸಮಗ್ರ ಸೈದ್ಧಾಂತಿಕ ಹಿನ್ನೆಲೆ' ಮತ್ತು ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಮುನ್ನಡೆಯುವಂತಾಗಬೇಕು. 'ಕನ್ನಡ ದೇಶ' ಪಕ್ಷದ ಸ್ಥಾಪನೆಯ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿ, ಕನ್ನಡ ಭಾಷೆಯ ಪರವಾದ ಸಂಘಟನೆಗಳೂ, ಸಾಹಿತಿಗಳೂ, ಕಲಾವಿದರೂ, 'ರೈತ ಸಂಘದ ಜೊತೆಗೂಡುವ ಮಾತು ಕೇಳಿಬರುತ್ತಿತ್ತು. ಅಂದಮೇಲೆ ಇದು ಅಸಾಧ್ಯದ ಮಾತೇನೂ ಆಗಿರುವುದಿಲ್ಲ. ಇದು ಸಾಧ್ಯವಾಗಬೇಕಾದರೆ ನಮ್ಮ ರೈತ ಚಳುವಳಿಗಳ ಮುಂಚೂಣಿಯಲ್ಲಿರುವ ಆ ಶ್ರೀಮಂತ ರೈತ ವರ್ಗವನ್ನು 'ಕನ್ನಡ ದೇಶ' ಪಕ್ಷವು

ಯಾವರೀತಿ ನಿಯಂತ್ರಿಸುತ್ತದೆ ಎನ್ನುವುದರ ಮೇಲೆ ನಿಂತಿದೆ. ಇಂದು 'ಕನ್ನಡ ದೇಶ' ಪಕ್ಷವು ಭಾರತದ ಶಕ್ತಿಕೂಟದಲ್ಲಿ ಈಗಾಗಲೇ ಸ್ಥಾನ ಪಡೆದಿರುವ ಆ ಶ್ರೀಮಂತ ರೈತ ವರ್ಗದ ಕೈಯನ್ನು ಗಟ್ಟಿ ಮಾಡುವುದರ ಬದಲಿಗೆ, ಆ ಶಕ್ತಿಕೂಟವನ್ನೇ ಭೇದಿಸಿ, ಇಡೀ ಗ್ರಾಮೀಣ ಶೋಷಿತ ವರ್ಗಕ್ಕೆ ಅಧಿಕಾರ ಬರುವ ಹಾಗೆ ಅದನ್ನು ವಿಸ್ತರಿಸುವುದರತ್ತ ಮುಂದಾಗಬೇಕಾಗಿದೆ. ಜೊತೆಗೆ. ಕೃಷಿ ವಲಯದೊಳಗೆ ಗಟ್ಟಿಯಾಗಿ ನಿಂತಿರುವ ಅಸಮಾನತೆಗಳೂ, ವೈರುಧ್ಯಗಳೂ(contradictions) ಬಗ್ಗೆ, ಪ್ರಗತಿಪರ ಭೂ ಸುಧಾರಣೆ, ಮೀಸಲಾತಿ, ಕೃಷಿ ಕಾರ್ಮಿಕರಿಗೆ ಕನಿಷ್ಟವೇತನ, ಸಹಕಾರಿ ಬೇಸಾಯ ಪದ್ಧತಿಯನ್ನು ಜಾರಿಗೆ ತರುವುದು ಮುಂತಾದವುಗಳ ಬಗ್ಗೆ ತನ್ನ ನಿಲುವನ್ನು 'ಕನ್ನಡ ದೇಶ' ಪಕ್ಷ ಇಂದು ಸ್ಪಷ್ಟಪಡಿಸಬೇಕಾಗಿದೆ.

REFERNCES(ಹೆಚ್ಚಿನ ವಿವರಗಳು)

1) GAIL OMVEDT(1988)-"New Movements", Seminar 352 December, PP. 43.

2) (a) MOUFFE, C.(1979)-' Gramasci and Marxist Theory' Rovtledge, Kegan Paul, London, PP 188-95

   (b) LACLAU, E(1977)-"Poliiics and Ideology in Marxist Theory", Versh, London, pp. 12-13.

3) RAJANI KOTHARI(1984)-"The Nonparty Political Process", Economical & Political Weekly, FEB A, PP 216 to 224.

4) (a) ನಾಡಕರ್ಣಿ, ಎಂ.ವಿ.(1986)-"ಕರ್ನಾಟಕದ ರೈತ ಹೋರಾಟಗಳು", ಪ್ರಿಂಟರ್ಸ್ ಪ್ರಕಾಶನ, ಪುಟ 1-13.

   (b) NADAKARANI, M.V.(1987)-"Farmers Movements in India", Allied Pudlishers, PP 4-13.

5) (a) HANUMANTH RAO, C.H., S.K. Ray(1988)-"Unstable Agriculture & Drought", Vikas, New-Delhi.

NADAKARNI M.V.(1988)-"Crisis of Increasing Costs in Agriculture, is there of Way Out ?"' Economical & Political Weekly, Sept. 24 PPA 114.

6) (a) UTSA PATNAIK(1986)-"The Agrarian Question & Development of Capitalism in India", Economic & Political Weekly, May 3, PP 788.

(b) SRINIVAS, M.N.(1959)-"The Dominant Casts in Rampur", American Anthropologists, Vol. 6, PP 1-16.

7) (a) JAMES MANOR(1980)-"Pragmatic Prograssive in Keginal Politids, The Case of Deveraj Urs", Economic & Political Weekly, FEB Annual No.

(b) LALITH NATARAJ & V.K. NATARAJ(1982)-"Limits of Populism' Devaraj & Karnataka Politics"' Economic & Political Weekly, Sept. II.

(c) SRINIVAS, M.N. & M.N. Panl(1984)-"Politics & Society in Karnataka", Economic & Political Weekly, Jan. 14.

ನಾನು ನಿನ್ನ ಪ್ರೀತಿಸುತ್ತೇನೆ.
ಪಶ್ಚಿಮದಲ್ಲಿ ಅಸ್ತಮಿಸಿದ ಅದೇ ಸೂರ್ಯ ಪೂರ್ವದಲ್ಲಿ ಉದ್ಭವಿಸುತ್ತಾನೆ.

–ವೆಂಕಟೇಶಮೂರ್ತಿ ಎಚ್.ಎಸ್.

ನೆನಪಿನಂಗಳದಲ್ಲಿ ಕತ್ತಲಾದಂತಿಲ್ಲ

ಎಷ್ಟೊಂದು ಸಲ
ಸೂರ್ಯ ಮುಳುಗುವುದನ್ನ
ಇವೇ ಕಣ್ಣುಗಳಿಂದ
ಬಾಚಿ ತುಂಬಿಕೊಂಡಿರಲಿಲ್ಲ

ಬಿಟ್ಟಿದೇವನ ಅಕ್ಕರೆಯ ಮಾತುಗಳು
ಕವಿರನ್ನನ ಹೋಲಿಕೆ
ಆವಳ ನೆನಪಿನ ವಾಡೆಯಲ್ಲಿ ಇನ್ನೆಷ್ಟೊ

ಎದುರು ಸಂಜೆಮಬ್ಬಿನ ಸೂರ್ಯ
ಒಳಗೆ ಮನದ ತರ್ಕವು ಬೇರೆ
ಹಿಂದೆಂದಿಗಿಂತಲೂ ಇಂದು ಆಪ್ಯಾಯಮಾನ

ಸೊಬಗು ಸೂರ್ಯನದೋ ? ಮನಸ್ಸಿನದೋ ?

ಮುಂಜಾವಿನಿಂದ ಸಂಜೆಯವರೆಗೆ
ಬದುಕು ಹಾಕುವ ದಾಪುಗಾಲು
ಬಿರಬಿರನೆ ನಡೆಯಲು ಇಲ್ಲಿ ಕಾಲಬಲವಿಲ್ಲ

ಮೆಲುಕು ಹಾಕಲು ಸಾಮಗ್ರಿ ಹಲವು

ಈ ಕಾಲುಗಳು ಗೆಜ್ಜೆ ಕಟ್ಟಿ
ದೇವದೇವನ ಎದುರು ಪ್ರಾಂಗಣದಲ್ಲಿ
ಲಯಬದ್ಧ ನರ್ತನದಲ್ಲಿ
ರಂಗಭೋಗ ಸಾರ್ಥಕ್ಯ ಕಂಡುಕೊಂಡವು

ವೇಲಾಪುರಿಯ ಮಂದಿರದ ಶಿಲೆ
ಕಲೆಯ ಸೆರಗ ಹೊದಿಯಲು, ರೂಪದರ್ಶಿ

ಬಿತ್ತರದ ಮಂದನಿಕೆಯು
ಕಣ್ಣ ಸನ್ನೆಗೆ ಕನ್ನಡಿಯು ಪ್ರತಿಬಿಂಬ
ಒಂದೊಂದು ಅಂಗ ಭಂಗಿ
ನನ್ನುಸಿರು–ಪ್ರಾಣ

ಅಬ್ಬೆ ಮಾಚಿಕಬ್ಬೆ ಮಾರಸಿಂಗಯ್ಯನಿತ್ತ
ರಕ್ತ ಮಾಂಸದ ಈ ದೇಹ
ದೋರಸಮುದ್ರದ ಅರಸು
ಬಳಸಿ ಮೆಚ್ಚಿದ
ಹಲವು ಸವತಿಯರ ಸವತಿಗಂಧವಾರಣೆ

'ತಾಯಿ, ವೇಳೆಯಾಯಿತು'
ಎಚ್ಚರಿಸಿದಳು ದಾಸಿ

ಕೊರಳೆತ್ತಿದಳು.
ಮಬ್ಬುಗತ್ತಲಿನಲ್ಲಿ ಮಾಸಿಮೂಡುವ ತಾರೆ
ಹೇಗೆ ಮಿನುಗುವುವು–
ಕತ್ತಲೆ ಕಂಬಳಿಯ ಸಂದಿನೊಳಗೆ

ಕಾಲ ಸರಿದರೂ ಪ್ರಕೃತಿಯ ಆಯು
ಬದಲಾಗಿಲ್ಲವಲ್ಲ
ಪೊದೆಯೊಳಗೆ ಹಕ್ಕಿ ಕೂಗಿತು
ಯಾರಿಗಾಗಿ ?

ಎದ್ದಳು.

ಪಾದ ಊರಿದಳು ಪಟ್ಟಮಹಿಷಿ
ತಪ್ಪಲಿನ ಹಿಡಿಮಣ್ಣಿನಲ್ಲೂ
ಗರಿಕೆ ಚಿಗುರೊಡೆದಿತ್ತು.

ಮುಂಡಿಯುೂರಿದಳು ತುಸುಹೊತ್ತು
ಗರಿಕೆಯುಬ್ಬಿತು

ನಾನೊಂದು ಗರಿಕೆಯಾಗಬೇಕಿತ್ತು
ಛೇ............
ಕಣ್ಣಾವಲ, ಹೊಯ್‌ನೀರಿನ ಹೂದೋಟವಾದೆ

'ವೇಳೆಯಾಯಿತು ತಾಯಿ'
ದಾಸಿ ಪುನರುಚ್ಚರಿಸಿದಳು

ಬತ್ತಿಹೋಗಿವೆ
ನನ್ನೆಲ್ಲ ಕನಸುಗಳು

ಹೆಣ್ಣು–
ಕಣ್ಣ ನೋಟಕ್ಕೆ,
ತೊಡೆಯು ನಡುವಿನ ರಾಗಕ್ಕೆ
ಅಂತ,
ಕರವಾಳವಿಡಿದ ಅರಸು, ಒಳಹೊಕ್ಕಲಿಲ್ಲ

ನನ್ನೆದೆಯು ಒಳಗೆ
ಒಬ್ಬ ಬಿಟ್ಟಿದೇವ
ಆತನೊಳಗೋ
ಹಲವು ಶಾಂತಲೆಯುರು

ಯಾಕೆ ಬಂದನೊ ಕಾಣೆ
ಈ ಹಾಳು ರಾಮಾನುಜ
ಕಣ್ಣ ಬೆಳಕಿಗೆ ಹೊಳೆವ ಚೈತ್ಯಾಲಯುಗಳು

ಬಣ್ಣ ಕಳಚಿದವು ಒಂದೊಂದೆ
ಕಣ್ಣಿನೊಡವೆಗಳಾದೊ ಕಂಠಾಭರಣ

'ತಾಯಿ, ಭೋಜನದ ವೇಳೆಯಾಯಿತು'

ನೀನು ನೀಲಾಂಜನೆಯ
ಪ್ರತಿರೂಪ
ಹಾಗಂತ ಎಷ್ಟುಸಲ ಉಸುರಿದ್ದರು
ಪ್ರಭಾಚಂದ್ರ ಮುನಿ

ಬಿತ್ತಿ ಬೆಳೆಯಬೇಕು
ಅವರ ಆಸೆಯನ್ನ

ನಾನೊಂದು ಗುಡಿಯ ಪ್ರಾಂಗಣವಾಗಿ
ನನ್ನೆದೆಯ ಮೇಲೆ ಗೆಜ್ಜೆಕಟ್ಟಿದ
ಕಾಲುಗಳು ನರ್ತಿಸುತ್ತಿರಬೇಕು
ಲಯಬದ್ಧವಾಗಿ

ಇಲ್ಲಿ
ಈ ನಾಡಿನಲ್ಲಿ

ಶಾಂತಲೆ, ಹೊಯ್ಸಳ ಅರಸು ಬಿಟ್ಟಿದೇವನ (ವಿಷ್ಣುವರ್ಧನ) ಪಟ್ಟದರಸಿ. ಅವಳ ಬದುಕಿನ ಕಡೆಯ ದಿನಗಳಲ್ಲೊಮ್ಮೆ ಶಿವಗಂಗೆಗೆ ಬರುತ್ತಾಳೆ. ಬೆಟ್ಟವೇರಿ ತುದಿಮುಟ್ಟಿದ ಮೇಲೆ ಏಕಾಂತವಾಗಿ ಸೂರ್ಯಾಸ್ತಮಾನವನ್ನು ವೀಕ್ಷಿಸುವ ಬಯಕೆ ವ್ಯಕ್ತಪಡಿಸಿ, ಕಾವಲುಭಟರನ್ನು ಹಿಂದಿರುಗಲು ಆಜ್ಞಾಪಿಸುತ್ತಾಳೆ. ಅಪ್ಪದಾಸಿಯೊಬ್ಬಳು ಮಾತ್ರ ತುಸು ದೂರದಲ್ಲಿ ಒಡತಿಯ ಬೆಂಗಾವಲಿಗಿದ್ದು. ಸಮಯದ ಎಚ್ಚರಿಕೆ ನೀಡುತ್ತಿರುತ್ತಾಳೆ. ಸೂರ್ಯಾಸ್ತಮಾನದ ವೀಕ್ಷಣೆಯೊಂದಿಗೆ ಶಾಂತಲೆಯ ಅಂತರಂಗ ಬಿಚ್ಚಿಕೊಳ್ಳುತ್ತದೆ.

ಕೆ. ಎಂ. ಮುನಿಕೃಷ್ಣಪ್ಪ

'ನೋಡೋಣ ಬಾ ಗೆಳತಿ'

ರೇಮಾಂಡ್ ವಿಲಿಯಂಸ್ : ಕ್ರಿಯಾಶೀಲ ವಿಮರ್ಶಕ

ರೇಮಾಂಡ್ ವಿಲಿಯಂಸ್ ಇತ್ತೀಚೆಗೆ ತೀರಿಕೊಂಡರು. ಎಪ್ಪತ್ತರ ದಶಕದ ಕನ್ನಡ ವಿಮರ್ಶೆ, ಸಾಹಿತ್ಯ ಚಿಂತನೆಯ ಮೇಲೆ ತುಂಬ ದೊಡ್ಡ ಪ್ರಭಾವ ಅವರ ಬರವಣಿಗೆಗಳಿಂದ ಆಯಿತು. ಮಾರ್ಕ್ಸ್‌ವಾದಿ ವಿಮರ್ಶಕರಲ್ಲಿ ತುಂಬ ಸೂಕ್ಷ್ಮವಂತರೆಂಬ ಕೀರ್ತಿ ಅವರಿಗಿದೆ. ಮಾರ್ಕ್ಸ್‌ವಾದವನ್ನು ಆರ್ಥಿಕ ವಿಧಿವಾದ ಎಂದಾಗಲೀ, ಜಡತತ್ತ್ವ ಎಂದಾಗಲೀ ತಿಳಿಯದ ರೇಮಾಂಡ್ ವಿಲಿಯಂಸ್ ಅವರ ಬರಹ ಮಾರ್ಕ್ಸ್‌ವಾದಿ ಸಾಹಿತ್ಯ ಚಿಂತನೆ ಹಾಗೂ ಗ್ರಹಿಕೆಗಳು ಹೇಗೆ ವಿಭಿನ್ನ ನೆಲೆಗಳ ಮೂಲಕ ನಡೆಯಬಹುದೆಂಬುದಕ್ಕೆ ತಕ್ಕ ನಿರ್ದೇಶನ ತತ್ತ್ವಗಳನ್ನು ರೂಪಿಸಿಕೊಟ್ಟವು. ಇಂಗ್ಲೆಂಡ್ ನೆಲೆಯಲ್ಲಿ ನಿಂತು ಅಲ್ಲಿನ ರಾಜಕಾರಣದ ವಿಭಿನ್ನ ಅವಸ್ಥಾಂತರಗಳು, ಪ್ರಜಾಪ್ರಭುತ್ವವಾದಿ ಸಮಾಜದ ನಿರ್ಮಾಣದ ಹಂತಗಳಲ್ಲಿ ಸಾಹಿತ್ಯ, ಕಲೆ, ಸಂವಹನ ಹಾಗೂ ವಿದ್ಯಾಭ್ಯಾಸದ ಪರಿಣಾಮಗಳನ್ನು ಕುರಿತು ಅವರು ತಮ್ಮ ಕೃತಿಗಳಲ್ಲಿ ವಿಶ್ಲೇಷಿಸಿದ್ದಾರೆ.

ನಾನು ಓದಿದ ರೇಮಾಂಡ್ ವಿಲಿಯಂಸರ ಮೊದಲ ಪುಸ್ತಕ 'ಕಲ್ಚರ್ ಅಂಡ್ ಸೊಸೈಟಿ' ಇಂಗ್ಲಿಷ್ ರೊಮಾಂಟಿಕರ ಬಗೆಗೆ, ಸೃಜನಶೀಲ ಲೇಖಕರ ಬಗೆಗೆ, ಮಾಥ್ಯು ಆರ್ನಾಲ್ಡ್, ಟಿ.ಎಸ್. ಈಲಿಯಟ್ ಬಗೆಗೆ ಆ ಪುಸ್ತಕದಲ್ಲಿ ಚಿಂತನೆ ನಡೆದಿದೆ. ಮಾರ್ಕ್ಸ್‌ವಾದಿ ಚಿಂತನೆಯ ಸೂಕ್ಷ್ಮಗಳು ಆ ಹೊತ್ತಿಗೆ ನನ್ನ ಮೇಲೆ ತುಂಬ ಪರಿಣಾಮ ಉಂಟುಮಾಡಿತು. ಮಾರ್ಕ್ಸ್‌ವಾದಿ ಚಿಂತನೆಯನ್ನು ತುಂಬ ತಾಂತ್ರಿಕವಾಗಿ, ಯಾಂತ್ರಿಕವಾಗಿ ನಡೆಸುತ್ತಿದ್ದ ನಮ್ಮ ಸಂದರ್ಭದ ವಿಮರ್ಶೆಯಲ್ಲಿ ಹೊಸ ಅಪೇಕ್ಷೆಗಳನ್ನು, ವಿಧಾನಗಳನ್ನೇ ಕಂಡುಕೊಳ್ಳಲು ವಿಲಿಯಂಸರ ಬರಹಗಳು ಕಾರಣ ಆಯಿತು. ಆ ಪುಸ್ತಕದ ಪರಿಚಯ ಅವರು ಬರೆದಿರುವ ಇನ್ನಿತರ ಪುಸ್ತಕಗಳನ್ನು ಹುಡುಕುವಂತೆ ಮಾಡಿತು. ಅಂದಿನಿಂದ ನಾನು ರೇಮಾಂಡ್ ವಿಲಿಯಂಸರ ಶಿಷ್ಯನೇ ಆಗಿಬಿಟ್ಟೆ.

ರೇಮಾಂಡ್ ವಿಲಿಯಂಸ್–ಒಂದು ಕಾಲದ ನಿಲುವುಗಳಿಗೆ ಬದ್ಧರಾದ ಚಿಂತಕರಲ್ಲ. ಸಾಹಿತ್ಯದ ಓದು, ಹೊಸ ಚಿಂತನೆಗಳು, ವಿಭಿನ್ನ ಸಂಸ್ಕೃತಿಗಳಲ್ಲಿ ಆಗು

ಕಿ.ರಂ. ನಾಗರಾಜ, ಕನ್ನಡ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056

ತ್ತಿರುವ ಹೊಸ ಮಾರ್ಪಾಟುಗಳಿಗೆ ಸದಾ ಎಚ್ಚರಗೊಂಡವರು. ಸ್ವ-ವಿಮರ್ಶೆಯ ಬಗೆಗೆ ಬಹಳ ಹೆಚ್ಚು ಮಾತನಾಡುವ ನಾವು ರೇಮಾಂಡ್‌ವಿಲಿಯಂಸರ ಬರಹಗಳಿಂದ ಹೆಚ್ಚು ಕಲಿಯಬೇಕಾದ್ದಿದೆ.

ಎಂಭತ್ತರ ದಶಕದಲ್ಲಿ-ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕನ್ನಡ ಶಿಕ್ಷಣ ಕ್ರಮದಲ್ಲಿ ಅನೇಕ ಮೂಲಭೂತ ಬದಲಾವಣೆಗಳೇ ಆದವು. ಆಗ ಯೂರೋಪಿಯನ್ ಸಾಹಿತ್ಯದ ನಾನ್ ಫಿಕ್ಷನ್ಸ್ ಭಾಗವೊಂದು ಮಹತ್ವದ ಸಾಹಿತ್ಯಕ ತತ್ತ್ವ ಚಿಂತನೆಗಳನ್ನು, ತನ್ನ ಪಠ್ಯ ಭಾಗದಲ್ಲಿ ಅಳವಡಿಸಿಕೊಂಡಿತು. ಆಗ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿದ್ದ ಡಾ॥ ಜಿ. ಎಸ್. ಶಿವರುದ್ರಪ್ಪನವರು ಕಿರಿಯ ಸಹೋದ್ಯೋಗಿಗಳ ಸಲಹೆಯ ಮೇರೆಗೆ ರೇಮಾಂಡ್ ವಿಲಿಯಂಸ್ ಬರೆದ 'ಕಮ್ಯೂನಿಕೇಷನ್ಸ್' ಪುಸ್ತಕವನ್ನು ಪಠ್ಯವನ್ನಾಗಿ ನಿಯಮಿಸಿದರು. ಅದನ್ನು ಓದಿದ ವಿದ್ಯಾರ್ಥಿಗಳಿಗೆ–ವೃತ್ತಪತ್ರಿಕೆ, ಮಹಿಳೆಯ ಬರಹ, ರೇಡಿಯೋ, ಟೆಲಿವಿಷನ್, ಜಾಹಿರಾತು.... ಹೀಗೆ ಅನೇಕ ವಲಯಗಳನ್ನು ಕುರಿತ ಆಲೋಚನೆಗೆ ಒಂದು ಹೆದ್ದಾರಿಯೇ ನಿರ್ಮಾಣ ಆಯಿತು.

ನಮ್ಮ ಸಂದರ್ಭದಲ್ಲಿ ಪಾಶ್ಚಾತ್ಯ ವಾತಾವರಣದ ಬಗೆಗೆ ಅಂತರಂಗದ ಪ್ರೀತಿಯೂ, ಪಾಶ್ಚಾತ್ಯ ಚಿಂತನೆಯ ಬಗೆಗೆ ನಿರುದ್ದಿಶ್ಯ ವಿರೋಧವೂ ಏಕಕಾಲಕ್ಕೆ ಪ್ರಕಟಗೊಳ್ಳುವ ಒಂದು ವಿಲಕ್ಷಣ ವ್ಯಾಪಾರವನ್ನು ಕಾಣುತ್ತಿದ್ದೇವೆ. ಹಠಾತ್ತನೆ ಪಾಶ್ಚಾತ್ಯ ಸಂಸರ್ಗ, ಸಂಪರ್ಕಗಳನ್ನು ವಿರೋಧಿಸುತ್ತ–ಭೋಳೆ ಭಾರತೀಯತೆಯ ಕೆಟ್ಟ ವಕ್ತಾರರಾಗುವ ಕೃತಕತೆಯಿಂದ ಕನ್ನಡದ ಸಂದರ್ಭ ಪಾರಾಗಬೇಕು. ಹಾಗಾಗದಿದ್ದರೆ ನಮಗೆ ಗೊಡ್ಡು ಪಾಶ್ಚಾತ್ಯ ಕಲ್ಪನೆಗಳೇ ದೊಡ್ಡ ಆಧಾರವಾಗುವ ಅಪಾಯಗಳಿವೆ. ಇಂಥ ಸ್ಥಿತಿಗಳಿಂದ ರೇಮಾಂಡ್ ವಿಲಿಯಂಸ್ ಹೊರಗು ಎಂಬುದೇ ತುಂಬ ಮುಖ್ಯವಾದದ್ದು. ರೇಮಾಂಡ್ ವಿಲಿಯಂಸ್ ಕೃತಿಶ್ರೇಣಿ ತುಂಬ ವಿಶಿಷ್ಟ ಹಾಗೂ ಸತ್ತ್ವಶಾಲಿಯಾದದ್ದು. ರೇಮಾಂಡ್ ವಿಲಿಯಂಸ್ ಜಾಗತಿಕ ನಾಟಕ ಪರಂಪರೆಯನ್ನು ಕುರಿತು ಬರೆದ 'ಮಾಡರನ್ ಟ್ರ್ಯಾಜಿಡಿ' ಅವರ ತುಂಬ ಮಹತ್ವದ ಕೃತಿ. ಗ್ರೀಕ್ ಸಂಸ್ಕೃತಿಯ ದುರಂತ, ರಿನೆಸಾನ್ಸ್ ಮನುಷ್ಯನ ದುರಂತ ಹಾಗೂ ಆಧುನಿಕ ಮಾನವನ ದುರಂತದ ನೆಲೆಗಳನ್ನು ಕುರಿತ ವ್ಯಾಖ್ಯೆ ನಾಟಕ ಸಾಹಿತ್ಯದ ವಿದ್ಯಾರ್ಥಿಗೆ ಹೊಸ ಹೊಳಹುಗಳನ್ನು ಕೊಡುವಂಥ ಕೃತಿ. ಶ್ರೇಷ್ಠ ಪ್ರಾಧ್ಯಾಪಕನೊಬ್ಬನ ಚಿಂತನೆಗಳು ಎಷ್ಟು ವ್ಯಾಪ್ತಿಯನ್ನು ಪಡೆದಿರುತ್ತದೆಂಬ ಕಲ್ಪನೆ ಬರುವುದು ಇಂಥ ಪುಸ್ತಕದಿಂದ. ಈ ಹೊತ್ತಿಗೂ ನಾಟಕ ಸಾಹಿತ್ಯದ, ರಂಗಪ್ರಯೋಗಗಳಿಗೆ ಉಪಯುಕ್ತವಾದ ಅತ್ಯುತ್ತಮ ಕೃತಿ ಇದು. ರೇಮಾಂಡ್ ವಿಲಿಯಂಸ್–ಕಾವ್ಯ, ನಾಟಕ,

ಕಾದಂಬರಿ ಹಾಗೂ ಸಾಂಸ್ಕೃತಿಕ ಬರಹಗಳ ಮಹತ್ವದ ವಿಶ್ಲೇಷಕ. 'ಡ್ರಾಮಾ ಇನ್ ಪರ್‌ಫಾರ್‌ಮೆನ್ಸ್' ಎಂಬ ಅವರ ಕೃತಿ ನಾಟಕ ಕೃತಿ ಮತ್ತು ಪ್ರಯೋಗಗಳ ಸಾಧ್ಯತೆಯನ್ನು ಕುರಿತ ಮಹತ್ವದ ಒಳನೋಟಗಳನ್ನು ಅಲ್ಲಿ ಕಾಣಬಹುದು.

ನಗರ ಮತ್ತು ಗ್ರಾಮದ ಚಿಂತನೆಗಳನ್ನು ಕುರಿತು ರೇಮಾಂಡ್ ಬರೆದ ಕೃತಿ 'ಕಂಟ್ರಿ ಅಂಡ್ ದಿ ಸಿಟಿ' ಇಂಗ್ಲಿಷ್ ಭಾಷೆಯ ಕಾದಂಬರಿಗಳನ್ನು ಕುರಿತ ಮಹತ್ವದ ಕೃತಿ, ನಗರ ಕೇಂದ್ರೀತ ಸಂವೇದನೆಯೊಂದಿಗೆ ಗ್ರಾಮೀಣ ಪರಿಸರದ ಪ್ರಕ್ರಿಯೆಯ ವಿಭಿನ್ನ ಮಜಲುಗಳು ಈ ಕೃತಿಯ ಕೇಂದ್ರ. ಇಂಥ ವಿಚಾರಧಾರೆ ನಮ್ಮ ಸಂದರ್ಭದಲ್ಲಿ (ಸ್ವಲ್ಪ ದೂರವಾದರೂ) ಅನೇಕ ಅಂತರ್ ಸಂಬಂಧಗಳಿಗೆ ದಿಕ್ಸೂಚಿಯಾಗಿದೆ. ಇದೆಂದರೆ–ವಿಲಿಯಂಸ್ ಯಾವಾಗಲೂ ಮಾನವ ಸಂಬಂಧಗಳ ಮಹತ್ವವನ್ನು ತಮ್ಮ ವಿಚಾರದ ಕೇಂದ್ರವನ್ನಾಗಿ ಪರಿಗಣಿಸುತ್ತಾರೆ ಎಂಬುದೇ ಆಗಿದೆ.

ವಿಲಿಯಂಸ್‌ರ-ಸ್ವವಿಮರ್ಶೆಯ ಉನ್ನತ ಕಲ್ಪನೆ ನಮಗೆ ತಿಳಿಯುವುದು ಅವರ 'ಮಾರ್ಕ್ಸಿಸಂ ಅಂಡ್ ಲಿಟರೇಚರ್' ಕೃತಿಯಲ್ಲಿ. ಈ ಕೃತಿ ವಿಲಿಯಂಸ್ ಕೃತಿ ಶ್ರೇಣಿಯಲ್ಲಿ ತುಂಬ ದೊಡ್ಡದು. ತಾನು ಸಾಗಿ ಬಂದ ನೆಲೆಯನ್ನೆಲ್ಲ ಇಲ್ಲಿ ಪೃಥಕ್ಕರಿಸುವುದು ವಿಲಿಯಂಸ್ ಉದ್ದೇಶ. ತನ್ನ ನೆಲೆಯನ್ನು ವಿಮರ್ಶೆಗೆ ಒಳಪಡಿಸುತ್ತ ತಾನು ನೆಲೆಗೊಂಡ ಸಂದರ್ಭವನ್ನು ಅತ್ಯಂತ ಖಚಿತವಾಗಿ, ಅಷ್ಟೆ ಸಂದಿಗ್ಧತೆಯ ಸಂದರ್ಭದಲ್ಲಿ ವಿವರಿಸಿಕೊಳ್ಳುವ ಆಶಯ ಈ ಕೃತಿಗೆ ಇದೆ. ತಮ್ಮ ನಿಲುವುಗಳ ಗಂಟುಮೂಟೆಗಳನ್ನು ಹೊತ್ತು ಔಚಿತ್ಯಾನುಚಿತ್ಯಗಳ ದಾರಿಯನ್ನು ಕೇವಲ ಸವೆಸುವ ವಿಮರ್ಶಕವರೇಣ್ಯರನ್ನು ಎಚ್ಚರಿಸುವ ಧ್ವನಿ/ದನಿ ಈ ಕೃತಿಯ ಉದ್ದಕ್ಕೂ ಹರಡಿಕೊಂಡಿರುವುದು ತುಂಬ ಗಮನೀಯ, ಮನನೀಯ.

ರೇಮಾಂಡ್ ವಿಲಿಯಂಸ್–ತನ್ನ ವಿಚಾರಗಳನ್ನು ನಿರಂತರವಾಗಿ ವಿಸ್ತರಿಸಿದ ಲೇಖಕ. ಪ್ರಸಿದ್ಧ ಮಾರ್ಕ್ಸ್‌ವಾದಿ ಚಿಂತಕರಾದ ಜಾರ್ಜ್ ಲುಕಾಚ್ಸ್, ಅಲ್ತೂಸರ್, ಗೋಲ್ಡ್‌ಮನ್–ಮುಂತಾದವರ ಚಿಂತನೆಗಳನ್ನು ಸೂಕ್ಷ್ಮ ವಿಶ್ಲೇಷಣೆಗೆ ಒಡ್ಡಿ ತನ್ನದೇ ಆದ ವಿಚಾರಗಳನ್ನು ಆಪ್ತವಾಗಿ ಮಂಡಿಸಿದ್ದು ಒಂದು ವೈಶಿಷ್ಟ್ಯ. ಮಾರ್ಕ್ಸ್‌ವಾದಿ ಭಾಷಾತತ್ತ್ವ ಹಾಗೂ ಸಾಹಿತ್ಯ ತತ್ತ್ವಗಳನ್ನು ಸಮ್ಮಿಳನಗೊಳಿಸಿ ಸಾಂಸ್ಕೃತಿಕ ಭೌತವಾದದ ಹೊಸ ಆಯಾಮವನ್ನು ಪ್ರತಿಪಾದಿಸಿದ್ದು ಅವರ ಮಹತ್ವದ ಕೊಡುಗೆ.

1958ರ 'ಕಲ್ಚರ್ ಅಂಡ್ ಸೊಸೈಟಿ' ಪುಸ್ತಕದಲ್ಲೇ ಆರಂಭವಾದ ಸಂವಹನವನ್ನು ಕುರಿತ ವಿಚಾರಗಳು ಮುಂದಿನ 'ಕಮ್ಯೂನಿಕೇಷನ್ಸ್, ಕಂಟ್ರಿ ಅಂಡ್ ದಿ ಸಿಟಿ,

ರೈಟಿಂಗ್ ಇನ್ ಸೊಸೈಟಿ, ಲಾಂಗ್‌ರೆವಲ್ಯೂಷನ್' ಮುಂತಾದ ಪುಸ್ತಕಗಳಲ್ಲಿ ವಿಕಾಸ ಗೊಂಡಿವೆ. ಸಂಸ್ಕೃತಿ ಮತ್ತು ಸಮಾಜದ ಸಂಬಂಧಗಳು ಗಾಢ ಸಂಬಂಧಗಳನ್ನು ಪಡೆದುಕೊಂಡದ್ದೆಂಬುದನ್ನು ಇಂಗ್ಲಿಷ್ ಕಾವ್ಯ, ಕಾದಂಬರಿ ಹಾಗೂ ನಾಟಕಗಳ ವಿಶ್ಲೇಷಣೆಗಳ ಮೂಲಕ ಪ್ರಸ್ತುತಪಡಿಸಿದ್ದಾರೆ.

ಮಾರ್ಕ್ಸ್‌ವಾದಿ ಸಾಹಿತ್ಯ ತತ್ತ್ವ ಹಾಗೂ ಚಿಂತನೆಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತ ಬಂದುದನ್ನು ವಿಲಿಯಂಸ್ ಅವರ ಕೃತಿಗಳು ವಿವೇಚಿಸುತ್ತವೆ. ಮಾರ್ಕ್ಸ್ ವಾದಿ ವಿಮರ್ಶೆ ಹೆಚ್ಚು ಹೆಚ್ಚು ಮುಕ್ತವಾಗುತ್ತ, ಅನೇಕ ಸೂಕ್ಷ್ಮಗಳನ್ನು ಒಳ ಗೊಳ್ಳುತ್ತ, ತನ್ನ ವಿಚಾರಗಳನ್ನು ಬೆಳೆಸಿಕೊಂಡದ್ದನ್ನು ತಮ್ಮ ಸಂದರ್ಭಕ್ಕೂ ಅನ್ವಯಿಸಿಕೊಳ್ಳುವ ಅವರ ಕ್ರಮ ವಿಮರ್ಶೆಯ ಸಾಂಸ್ಕೃತಿಕ ಹೊಣೆಗಾರಿಕೆಗೆ ಉದಾ ಹರಣೆ. ಇದರಿಂದ ಈ ಹೊತ್ತಿನ ಸಾಹಿತ್ಯ ಹೇಗೆ ವಿವಾದಾತ್ಮಕ ಹಾಗೂ ಸಮಸ್ಯಾತ್ಮಕ ವಾದ ನೆಲೆಗಳನ್ನು ಹಾಯ್ದು ನಡೆಯುತ್ತಿದೆ ಎಂಬುದನ್ನು ಅಲ್ಲಿ ನೋಡಬಹುದು. ಮಾರ್ಕ್ಸ್‌ವಾದಿ ಸಾಹಿತ್ಯ ವಿಮರ್ಶೆಯನ್ನು ವಿವರಿಸಿಕೊಳ್ಳುತ್ತ ಅದಕ್ಕೆ ಹೊಸ ಆಯಾಮ ಗಳನ್ನು ಸೇರಿಸುವುದು ವಿಲಿಯಂಸರ ಉದ್ದೇಶವಾಗಿದೆ. ಹೀಗೆ ಸಾಧ್ಯವಾಗುವುದು ಈ ಮಾರ್ಕ್ಸ್‌ವಾದಿ ಸಾಹಿತ್ಯ ಚಿಂತನೆಗಳನ್ನು ಮರು ವಿಮರ್ಶೆಗೆ ಗುರಿಯಾಗಿಸುವುದ ರಿಂದ ಮಾತ್ರ ಸಾಧ್ಯ ಎಂಬುದು ಅವರ ಅಭಿಮತ. ಈ ಪ್ರಕ್ರಿಯೆಯಿಂದ ಮಾರ್ಕ್ಸೇ ತರ ಸಾಹಿತ್ಯ ತತ್ತ್ವಗಳೂ ಮತ್ತೆ ಚರ್ಚೆಗೆ ಒಳಪಡುವುದು ಅನಿವಾರ್ಯವಾಯಿತು. ಇದರಿಂದ ಮಾರ್ಕ್ಸ್‌ವಾದಿ ಸಾಹಿತ್ಯತತ್ತ್ವದ ವಿಮರ್ಶೆ ಮತ್ತು ವಾದದ ಮಂಡನೆ ಎರಡೂ ಸಾಧ್ಯವಾಗಿದೆ.

ವಿಲಿಯಂಸ್‌ರ ಚಿಂತನೆಗಳು ಪುಸ್ತಕ ಭಂಡಾರಗಳಲ್ಲಿ ಸಿದ್ಧಗೊಂಡದ್ದಲ್ಲ. ಇಲ್ಲವೇ ವಿಶ್ವವಿದ್ಯಾಲಯದ ಇಲಾಖೆಗಳಲ್ಲಿ ರೂಪುಗೊಂಡದ್ದೂ ಅಲ್ಲ. ಅವರು ಈ ಚಿಂತನೆಗೆ ಆಕರ್ಷಿತರಾದದ್ದು ವಿಶ್ವವಿದ್ಯಾನಿಲಯಗಳ ಆಚೆ ವಿದ್ಯಾರ್ಥಿಗಳೊಂದಿಗೆ ನಡೆಸುತ್ತಿದ್ದ ಸುದೀರ್ಘ ಸಮಾಲೋಚನೆಗಳಿಂದ. ಅನಂತರದ ದಿನಗಳಲ್ಲಿ ಬ್ರಿಟಿಷ್ ಕಾರ್ಮಿಕ ವರ್ಗ ಹಾಗೂ ಅವರ ಕುಟುಂಬಗಳ ನಡುವೆ ಸಕ್ರಿಯ ಸಂಪರ್ಕಗಳ ಸ್ಥಾಪಿಸಿಕೊಳ್ಳುತ್ತ ತಮ್ಮ ಬರಹಗಳನ್ನು ಸೃಷ್ಟಿಸಿದ್ದು ಒಂದು ವಿಶೇಷ. ತಮ್ಮ ಬರೆಹಗಳನ್ನು ವಿಸ್ತರಿಸಿ ಕೊಳ್ಳಲು, ಬೆಳೆಸಿಕೊಳ್ಳಲು, ಪರಿಷ್ಕತಗೊಳಿಸಿಕೊಳ್ಳಲೂ ಈ ಸಹಸಂಬಂಧದಿಂದ ಸಾಧ್ಯ ವಾಯಿತು ಎಂಬುದನ್ನು ಅವರೇ ಹೇಳಿಕೊಂಡಿದ್ದಾರೆ. ಇದು ವಿಚಾರದ ದಾರಿ. ವಿಮರ್ಶೆಯ ಕ್ರಿಯಾಶೀಲತೆ.

–ಕಿ.ರಂ. ನಾಗರಾಜ

ಗಂಗಾವಳಿ
(ಕೆಲವು ಲಬಸಾಗಳು)

ಮೂಲದಲ್ಲಿದ್ದವಳು ಶಾಲ್ಮಲೆ. ನಮ್ಮೆಲ್ಲರ ಪ್ರೀತಿಯ ಈ ಹೊಳೆ.
ಹುಟ್ಟಿದ್ದು ಬಹು ದೂರ ಘಟ್ಟದ ಮೇಲೆ ಬೆಟ್ಟದಲ್ಲಿ,
ಸೋಮೇಶ್ವರ ಶಿಖರದೆತ್ತರದಲ್ಲಿ.
ಬೆಟ್ಟವಿಳಿದವಳೆ ಧುಮ್ಮಿಕ್ಕುತ್ತ ದಾಟಿ ಕಣಿವೆಗಳ; ಸೀಳಿ ಕಾಡುಗಳ;
ಕುಣಿದು ಕುಪ್ಪಳಿಸುತ್ತ ಬಯಲುಗಳಲ್ಲಿ
ಕಡಲ ಕೂಡಿದ್ದಾಳೆ ನಮ್ಮೂರ ಅಳವೆಗೆ ಬಂದು:
ಗಂಗಾವಳಿ. ಥೇಟು ಗಂಗೆಯಂಥವಳು.

ಬಂದಿಹಳು ದಡಸೂಸುವ ಅಪಾರ
ಅನುಭವ ಸಮೃದ್ಧಿಯ ಭಾರ ಹೊತ್ತು.
ಧ್ಯಾನಗಂಭೀರ ಉತ್ತುಂಗ ಶಿಖರದ ನೋಟ ಕಣ್ಣಾಳದಲಿ ನೆಟ್ಟು.
ಮುದ್ರೆಯೊತ್ತಿದೆ ಹೃದಯ ಗವ್ವರದಲ್ಲಿ;
ಅಡವಿಗಳ ಹಸಿರುಗತ್ತಲೆ ನಿಗೂಢ ಮೌನದಲಿ ಕಲಿಸಿದ್ದು;
ಬಯಲುಗಳ ಅಪರಂಪಾರ ವಿಸ್ತಾರ ಕಿವಿಯಲ್ಲಿ ಉಸುರಿದ್ದು.
ಬರೇ ನೀರಲ್ಲ: ದಡ ಮುಟ್ಟಿದಲ್ಲೆಲ್ಲ
ಹುಟ್ಟಿಸಿ, ಹುಟ್ಟಿದ್ದ ಕಾಪಾಡುವ ಜಾಣ್ಮೆಯುಳ್ಳ
ಸಂಜೀವನ ಪ್ರವಹ.

ಹೊರೆಯಿಳಿಸಿಹಳು ದಡದಲ್ಲಿ ಹೊತ್ತು ತಂದುದನ್ನೆಲ್ಲ: ಅಡಿಕೆ ತೆಂಗುಗಳ
ತೋಟಗಳಲ್ಲಿ. ಹಲಸು ಮಾವು ಪೇರಳ; ಗಾಳಿಮರ ಗೇರು ನೀರಲ
ಹಿತ್ತಿಲು ಹಕ್ಕಲುಗಳಲ್ಲಿ. ಚೆಲ್ಲಿಂದು ಹಸಿರು ಬಿಟ್ಟಿದೆ ಮಣ್ಣು:
ಅಮೃತ ಸ್ಪರ್ಶಕ್ಕೆ ಚಿಗಿತು ಜಿಗಿದಿದೆ ಆಕಾಶದೆತ್ತರಕೆ,
ಗಾಳಿ ಬೆಳಕಿಗೂ ಜೀವ ತುಂಬಲಿಕ್ಕೆ;

ಯಶವಂತಚಿತ್ತಾಲ, 2, ಬ್ಯಾಂಡ್‌ಸ್ಟ್ಯಾಂಡ್ ಅಪಾರ್ಟ್‌ಮೆಂಟ್ಸ್, 215-ಎ, ಬ್ಯಾಂಡ್‌ಸ್ಟ್ಯಾಂಡ್
ಬಾಂದ್ರಾ, ಮುಂಬಯಿ–400 050

ಹೂವಾಗಿ ಕಣ್ಣು ಬಿಚ್ಚಿದೆ ತುತ್ತ ತುದಿಯಲ್ಲಿ,
ತವರೂರ ಶಿಖರ ನೋಡಲಿಕ್ಕೆ;
ದನಿಯೆತ್ತಿದೆ ಹಕ್ಕಿಗೊರಳಲ್ಲಿ ಹಿಗ್ಗಿನಲಿ,
ಬೆಟ್ಟ ಕಲಿಸಿದ ಹಾಡ ಹಾಡಲಿಕ್ಕೆ.

ಪರಿಷೆ ನೆರೆದಿದೆ ನೀರ ತಡಿಯಲ್ಲಿ. ಕೋಟಿ ಕಂಠಗಳಲ್ಲಿ
ಗುಲ್ಲೆಬ್ಬಿಸುತ ನಲಿದಿದೆ ಜೀವಕೋಟಿ ನಿತಾಂತ ಹರ್ಷದಲಿ.
ಹಾಡಿದೆ ತನ್ನತಾ ಹುರಿದುಂಬಿಸುತ ಜೀವನಗಾಥೆ: ಹುಟ್ಟು
ಬೆಳೆ ಬದುಕು ಎನ್ನುತ್ತ. ಪುಳಕಗೊಂಡಿದೆ ಸೃಷ್ಟಿಗೆ ಸೃಷ್ಟಿ
ಝಲ್ಲನೆ. ಹೆಣೆದಿವೆ ಗಾಳಿ ನೀರು ನೆಲ ಬೆಳಕುಗಳು, ಹಾಕುತ್ತ
ರಿಂಗಣಗುಣಿತ ಬಣ್ಣಗಳಲ್ಲಿ, ಜೀವ ಹೊಮ್ಮುವ ಗುಂಫನ.

ಇದು ಬಹಳ ಪುರಾತನ ಪುರಾಣ: ಸುಳಿದಿರಲಿಲ್ಲ ಆಗಿನ್ನು
ಕೊಡಲಿ ಹಿಡಿದವನ ನೆರಳು ಹತ್ತಿರವೆಲ್ಲು.
ಹೊಳೆ ಬರೇ ಹಳ್ಳವಾದದ್ದು; ದಡಗಳು ಸೊರಗಿ ಭಣಭಣಿಸಿದ್ದು:
ಹೇಳುವದಕ್ಕೇನಿದೆ ಮಣ್ಣು. ತಾಜಾ ವರ್ತಮಾನವಲ್ಲವೆ ನಾವೇ ಕಟ್ಟಿಸಿದ್ದು!

ಯಶವಂತಚಿತ್ತಾಲ

ಓದಿ :

ದಗಡೂ ಪರಬನ ಅಶ್ವಮೇಧ

(ಕಥಾ ಸಂಕಲನ)

ಜಯಂತ ಕಾಯ್ಕಿಣಿ

ಕೃತಿ ಪ್ರಕಾಶನ, ತ್ಯಾಗರಾಜನಗರ, ಬಂಗಳೂರು-28

ಅಜ್ಜನ ಹೆಗಲ ಸುಕ್ಕುಗಳು

(ಕವನ ಸಂಕಲನ)

ಯು.ಆರ್. ಅನಂತಮೂರ್ತಿ

ಋಜುವಾತು ಪ್ರಕಾಶನ, ಮೈಸೂರು

ಕನಸಿಗೊಂದು ಕಣ್ಣು

SA-RE-GA

ಸಾ-ರೇ–ಗಾ ಈ ಶಬ್ದವೇ ಒಂದುರೀತಿಯಲ್ಲಿ ಮೋಹಕವಾದ ಶಬ್ದ. ಒಂಟಿಯಾಗಿದ್ದಾಗ, ಅನಾಥ ಮನಸ್ಸಿನಿಂದ ನರಳುತ್ತಿರುವಾಗ ಎಳೆದೂ ಎಳೆದೂ ಆಲಾಪನೆಗೆ ಧ್ವನಿ ಸಂಯೋಜಿಸಲು ಋಷಿಯಿರಬಹುದು. ಆದರೆ ಈ ಸಾ–ರೆ–ಗಾ ಮಕ್ಕಳಿಗಾಗಿ ನಿರ್ದೇಶಿಸಿರುವ ಎಲ್. ಪಿ. ರೆಕಾರ್ಡ್. ಇದನ್ನು ಕೇಳಿದಂತೆಲ್ಲ ನಾವು ನಮ್ಮ ಬಾಲ್ಯಕ್ಕೆ ಹೋಗುತ್ತೇವೆ. ಇದರ ಧ್ವನಿ ತರಂಗಗಳಲ್ಲಿಯೇ ನಮ್ಮೆಲ್ಲರ ಭೂತದ ನಾದಲಯಗಳನ್ನು ವರ್ತಮಾನಕ್ಕೆ ತಂದು ಒಂದಷ್ಟು ಕ್ಷಣಗಳು ಹುಚ್ಚು ಮನಸ್ಸಿನ ತುಂಬ ನೂರಾರು ಭಾವನೆಗಳನ್ನು ಹರಡಿಕೊಂಡು ಅವುಗಳಿಗೆ ಬೇಕಾದ ಅರ್ಥಗಳನ್ನು ಹಚ್ಚುತ್ತ ಕೂರಬಹುದು.

ಇಂದು ನಾವು ನಮ್ಮ ಪರಿಸರವನ್ನು ಹಾಳುಮಾಡಿಕೊಂಡು ಕೂತಿದ್ದೇವೆ. ಹಕ್ಕಿ ಪಕ್ಕಿ ಹಾಡುವುದನ್ನು, ಮೃಗಗಳ ಘರ್ಜನೆಯ ಲಹರಿಯನ್ನು, ವಿವಿಧ ಪ್ರಾಣಿಗಳ ಓಟವನ್ನು ಕಳೆದುಕೊಂಡಿದ್ದೇವೆ. ಅವುಗಳ ಧ್ವನಿಗಳನ್ನು ಒಂದೆಡೆ ಯಾರಾದರು ಸೇರಿಸಿಡಬೇಕಾಗಿದೆ. 'SA–RE–GA MACHAN' ಈ ರೀತಿ ಮಾಡಿರುವ ಒಂದು ಅದ್ಭುತ ಕೆಲಸ. ಹಾಗೆ ನೋಡಿದರೆ ನಿಜವಾಗಿಯೂ 'ಕನಸಿಗೊಂದು ಕಣ್ಣು' ಮೊದಲಿನಂತೆ ಬರೆಯಲಾಗುತ್ತಿಲ್ಲ. ಬರೆಯಲಾಗದಂತಹ ಒತ್ತಡಗಳನ್ನು ಹಿಂದೆಯೂ ಎದುರಿಸಿದ್ದರೂ ಸಹ. ಆದರೆ ಬರೆಯಲೇಬೇಕಾಗಿದೆ–ಬದುಕಲೇಬೇಕಾಗಿದೆ ಅನ್ನುವಂತೆ ಬರೆಯುತ್ತಿದ್ದೇನೆ. ಇದನ್ನು ಆ ಒತ್ತಡದಲ್ಲಿ ಬರೆದದ್ದು.

ನಿನ್ನೆ ಒಂದು ರೀತಿಯ ಬೋರ್‌ಡಮ್ಮಿನಿಂದ ದಿನದ ಬಹುಪಾಲು ಕ್ಷಣಗಳನ್ನು ಕಳೆದಿದ್ದೆ. ಚನ್ನಪ್ಪ ಅವರನ್ನು ಹುಡುಕಿಕೊಂಡು ಹೋದೆ. (ಚನ್ನಪ್ಪ ಅವರು ಕಳೆದ ವರ್ಷ ಹತ್ತಿರದ ಗೆಳೆಯರಾದವರು. ಆದರೆ ಅವರ ಬಹುಪಾಲು ಗೆಳೆತನವನ್ನು ಡಾ॥ ಎಸ್. ಚಂದ್ರಶೇಖರ್ ಎಂಬ ಇತಿಹಾಸಕಾರನಿಗೆ ಮೀಸಲಿಟ್ಟಿದ್ದಾರೆ! ಇದು ಒಂದು

ರೀತಿಯಿಂದ ನನಗೆ ಹೊಟ್ಟೆ ಉರಿ! ಈ ಹೊಟ್ಟೆ ಉರಿಯ ವ್ಯಕ್ತಿಗಳಲ್ಲಿ ಭರತಾದ್ರಿ ಎಂಬ ತುಂಟನೂ ಇದ್ದಾನೆ. ಅದೇನೆ ಇರಲಿ, ಚನ್ನಪ್ಪ ಅವರು ಸಹಕಾರ ಸಂಘಗಳ ಜಾಯಿಂಟ್ ರಿಜಿಸ್ಟ್ರಾರ್ ಆಗಿದ್ದಾರೆ. ಲವಲವಿಕೆಯ ಮನುಷ್ಯ. ಕೆಲವು ತಿಂಗಳುಗಳ ಹಿಂದೆ ಮಲೆನಾಡನ್ನು ಆತ್ಮೀಯವಾಗಿ ಪರಿಚಯಿಸಿದವರು. ಇದರ ಜೊತೆಗೆ 'ಸ್ಕೂಲ್ ಮಾಸ್ಟರ್' ಚಲನಚಿತ್ರದ ದಿನಗಳಿಗೆ ನಮ್ಮನ್ನು ಕರೆದೊಯ್ದವರು. ಯಾಕೆಂದರೆ ದಿನಾ ಬೆಳಗ್ಗೆ ಕಾರು ಹೊರಡುವಾಗ 'ಸ್ವಾಮಿದೇವನೆ ಲೋಕಪಾಲನೆ' ಹಾಡು ಹಾಕು ತ್ತಿದ್ದರು. ನನಗೆ ಅತ್ಯಂತ ಪ್ರಿಯವಾದ ಹಾಡು. ದೇವರ ಮೇಲಿನ ಭಕ್ತಿಗಲ್ಲ. ಅದರ ಧ್ವನಿಗಾಗಿ ಅಥವಾ ನನ್ನ ಶಾಲಾ ದಿನಗಳ ನೆನಪಿಗಾಗಿ.) ಅವರು ಇರಲಿಲ್ಲ. ಕೊನೆಗೆ ಏಳೂವರೆವರೆವಿಗೆ ಕಾಲ ಕಳೆದು ಮತ್ತೊಬ್ಬರನ್ನು ನೋಡಲು ಹೋದೆ. ಯಾಕೆಂದರೆ 'ಶೂದ್ರ'ದ ಅವರ ಕಾಲಂಗೆ ರೆಮಾಂಡ್ ವಿಲಿಯಮ್ಸ್ ಬಗ್ಗೆ ಬರೆಸ ಬೇಕಾಗಿತ್ತು. ಅವರ ಮನೆಗೆ ಹೋದಾಗ ಎಲ್. ಪಿ. ರೆಕಾರ್ಡ್‌ಗಳು ರಾಶಿ ಯಾಗಿ ಬಿದ್ದಿದ್ದುವು. ಸಿಕ್ಕಿದಾಗಲೆಲ್ಲ ಮ್ಯೂಸಿಕ್ ಕೇಳಲು ಬರುವುದಿಲ್ಲವೇನಯ್ಯ ಎಂದಾಗ ಆ ಎಲ್. ಪಿ. ಗಳನ್ನು ಕೊಂಡುಕೊಳ್ಳುವಾಗಿನ ತುಂತುರು ಮಳೆಯ ಸಂಜೆ ನೆನಪಾಯಿತು. ಜಯನಗರದಲ್ಲಿ ಎಷ್ಟೋ ದಿನಗಳಿಂದ ಇದ್ದ ಎಲ್. ಪಿ. ರೆಕಾರ್ಡ್‌ ಗಳ ಭಂಡಾರವನ್ನು ಮುಚ್ಚುತ್ತಿದ್ದ. ಆಗ ತನ್ನಲ್ಲಿ ಇದ್ದದ್ದನ್ನೆಲ್ಲ ಮಾರುತ್ತಿದ್ದ. ಅವರು ಅದನ್ನು ಆಕಸ್ಮಾತ್ ತಿಳಿದು ಅಲ್ಲಿಗೆ ಕರೆದುಕೊಂಡು ಹೋದರು. ನೂರು ರೂಪಾಯಿನ ಎಲ್. ಪಿ. 25 ರೂ. ನಮ್ಮ ಸಂಗೀತದ ಸಾಮ್ರಾಟರೆಲ್ಲ ಅಲ್ಲಿದ್ದರು. ಒಂದು ಕ್ಷಣ ಗ್ರಾಮ್‌ಫೋನ್ ಪರಂಪರೆ ನೆನಪಾಯಿತು. (ಆ ಪರಂಪರೆಯ ವೈಭವ ವನ್ನು ಇಲ್ಲಿ ಪ್ರಸ್ತಾಪಿಸುವುದು ಬೇಡ) ಅದೇನೆ ಇರಲಿ ಅವರು ಮಗುವು ಆಟದ ಸಾಮಾನುಗಳನ್ನು ಕಂಡಾಗ ವಿಜೃಂಭಿಸುವಂತೆ ಎಲ್ಲವನ್ನು ಬಾಚಿಕೊಳ್ಳುವ ಆಸೆಯಿದ್ದರೂ ಸುಮಾರು ಮೂವತ್ತು ನಲವತ್ತು ಎಲ್. ಪಿ. ಗಳನ್ನು ಆರಿಸಿ ಪಕ್ಕಕ್ಕಿಟ್ಟರು; ನಾಳೆ ಬಂದು ತೆಗೆದುಕೊಂಡು ಹೋಗುವೆ ಎಂದು. ನಾನೂ ತೆಗೆದುಕೊಳ್ಳಬಹುದಾಗಿತ್ತಲ್ಲ ಎಂಬ ಧ್ವನಿ ಮನಸ್ಸಿನಲ್ಲಿ ಸುಳಿದು ಮಾಯವಾಯಿತು. ಆ ಎಲ್. ಪಿ. ಗಳ ಮಧ್ಯ ದಲ್ಲಿ ಇದ್ದುದೇ ಈ 'SA-RE-GA-MACHAN.

ನಮ್ಮ ಸೀತಾರ್ ಸಾಮ್ರಾಟ ರವಿಶಂಕರ್ ಅವರ ಮನೆತನದ ಕಥೆಯೇ ಒಂದು ಅದ್ಭುತ ರಮ್ಯ ಕಥೆಯಾಗಬಹುದು. ಈ 'ಕನಸಿಗೊಂದು ಕಣ್ಣಲ್ಲಿ' ಬರೆಯಲು ಸಮಯವಿಲ್ಲದಿದ್ದರೂ ಉದಯಶಂಕರ್ ಅವರ ಬ್ಯಾಲೆ ದಿನಗಳು ನೆನಪಿಗೆ ಬರುತ್ತದೆ. ತಮ್ಮ ಬ್ಯಾಲೆಗಳ ಮೂಲಕ ಬೀಮಲ್‌ರಾಯ್, ಗುರುದತ್ ರಾಜಕಪೂರ್ ರೀತಿಯಲ್ಲಿ ರೊಮ್ಯಾಂಟಿಕ್ ಪರಂಪರೆಯನ್ನು ಬೆಳೆಸಿದವರು. ಉದಯ್‌ಶಂಕರ್ ಅವರ 'ಕಲ್ಪನ'

ಚಿತ್ರ ಈಗಲೂ ಅಚ್ಚಳಿಯಂದ ನೆನಪು. ಈ ಪರಂಪರೆಯನ್ನು ಉದಯ್ ಅವರ ಮಗಳು ಮಮತಾಶಂಕರ್ ಮುಂದುವರೆಸುತ್ತಿದ್ದಾರೆ. 1987ರಲ್ಲಿ ಕಲಕತ್ತೆಯಲ್ಲಿ ಮಮತಾ ಅವರು ನಿರ್ದೇಶಿಸಿದ ಬ್ಯಾಲೆಯನ್ನು ನೋಡುವ ಅವಕಾಶ ಸಿಕ್ಕಿತ್ತು. ಆನಂದ ಶಂಕರ್ ಅವರು ನಿರ್ದೇಶಿಸಿರುವ ಈ SA-RE-GA ನಮ್ಮನ್ನು ಧ್ವನಿ ತರಂಗಗಳ ಯಾವುದೋ ಅಧೋ ಲೋಕಕ್ಕೆ ಕರೆದುಕೊಂಡು ಹೋಗುತ್ತದೆ. ಭೀಕರವಾದ ಕತ್ತಲಿನಲ್ಲಿ ನಿಬಿಡವಾದ ಅರಣ್ಯದಲ್ಲಿ ನಮ್ಮ ಕನಸಿನ ಪ್ರಾಣಿಗಳ ಜೊತೆಯಲ್ಲಿದ್ದೇವೆ ಅನ್ನಿಸುತ್ತದೆ. ನಿಶಬ್ದ ರಾತ್ರಿಯಲ್ಲಿ ಬೆಂಗಳೂರಿನ ರಾಕ್ಷಸಿ ಬದುಕು ನಿದ್ರಿಸಿದ ಮೇಲೆ ಆಲಿಸಲು ಒಂದು ಅಪೂರ್ವ ಅನುಭವ ಆಗಬಹುದು. ಯಾಕೆಂದರೆ ಪ್ರತಿಯೊಂದು ಪ್ರಾಣಿ ಪ್ರಪಂಚದ ಸುತ್ತ ನಾನಾ ವೈಚಿತ್ರ್ಯಗಳಿರುತ್ತವೆ. ಮನುಷ್ಯ ಎಂಬ ಪ್ರಾಣಿಯು ಸುತ್ತ ಇದ್ದಂತೆ. ಆದರೆ ಮನುಷ್ಯ ಪ್ರಾಣಿ ಹೆಚ್ಚು ಕ್ರೂರಿಯಾದ್ದರಿಂದ ಎಲ್ಲವನ್ನು ನಾಶಮಾಡಿ ಕೊನೆಗೆ ತನ್ನ 'ನಾಷ್ಟಾಲಜಿ'ಯ ತಂತಿಗಳನ್ನು ಮತ್ತೆ ಮತ್ತೆ ಮೀಟಿಕೊಂಡು ಭೂತದ ಲಕ್ಸುರಿಯಲ್ಲಿ ವಿಹರಿಸಲು ಈ ಅದ್ಭುತ ಪ್ರಾಣಿಗಳ ಧ್ವನಿಗಳನ್ನು ಮ್ಯೂಸಿಯಂಗಳಲ್ಲಿ ಇಡಲು ಪ್ರಯತ್ನಿಸುತ್ತಾನೆ. ಆದರೂ ನಮ್ಮ ಮಕ್ಕಳನ್ನು ಕೃತಕ ಶಿಕ್ಷಣ ವ್ಯವಸ್ಥೆಯಿಂದ ಬಿಡಿಸಲು 'SA-RE-GA MACHAN' ರೀತಿಯ ಏನೇ ಚಟುವಟಿಕೆಗಳು ಬಂದರೂ ಬೆಂಬಲಿಸಬೇಕಾಗಿದೆ.

ಅವರು ರೆಮಾಂಡ್ ವಿಲಿಯಮ್ಸ್ ಲೇಖನ ಕೊಟ್ಟರು. ಕೊಟ್ಟ ಸಂತೋಷದಲ್ಲಿ ಹೊರಟೆ. ಕಿವಿಯ ತುಂಬ ಮನಸ್ಸಿನ ತುಂಬ 'SA-RE-GA' ಜಗತ್ತಿನ ಪ್ರಾಣಿಗಳು ಹಾಡುತ್ತಿದ್ದವು-ಕುಣಿಯುತ್ತಿದ್ದುವು-ತಮ್ಮ ಹೆಂಡತಿ ಮಕ್ಕಳನ್ನು ರೇಗಿಸಿ ಕಿಲಕಿಲನೆ ನಗುತ್ತಿದ್ದುವು ಅಥವಾ ನಕ್ಕುನಕ್ಕು ಸುಸ್ತಾಗಿ ಅಳುತ್ತಿದ್ದುವು. ಹೀಗೆ ರಾತ್ರಿಯು ತಾತ್ಕಾಲಿಕ ಭಾವನೆಗಳನ್ನು ತುಂಬಿಕೊಂಡು ನನ್ನ ಪ್ರೀತಿಯ (ಇತ್ತೀಚೆಗೆ 'ಶೂದ್ರ' ತನ್ನ ಪ್ರೀತಿಯ 'ಪ್ರೀತಿ ಮತ್ತು ಸುಂದರ' ಶಬ್ದಗಳನ್ನು ಬಳಸುತ್ತಿಲ್ಲ ಎಂದು ರೇಗಿಸುವ ಗೆಳೆಯರಿದ್ದಾರೆ, ಅವರ ಬಾಯಿ ಮುಚ್ಚಿಸಲು 'ಪ್ರೀತಿ' ಶಬ್ದ ಬಳಸುತ್ತಿದ್ದೇನೆ.) ಟಿ. ವಿ. ಎಸ್. ಚಾಂಪ್ ತನ್ನ ಪಾಡಿಗೆ ತಾನು ಹೋಗುತ್ತಿತ್ತು. ಇದೆಲ್ಲ ಕಾಡಾಗಿರಬಾರದೆ ಅಂದುಕೊಂಡೆ—ಈಗಲೂ ಬೆಂಗಳೂರಿನ ಬಗ್ಗೆ ಯಾರಾದರು ಹಳೆಯ ತಲೆಮಾರಿನವರು ಮಾತಾಡುವಾಗ ಅದ್ಭುತವಾಗಿರುತ್ತದೆ! ಅಯ್ಯೋ ಇಲ್ಲೆಲ್ಲ ಎಷ್ಟೊಂದು ಪೊದೆಗಳಿದ್ದುವು. ಕೇದಿಗೆ ಪೊದೆಗಳಂತೂ ತುಂಬಿಕೊಂಡಿದ್ದುವು. ಇಂದು ಬಹುಪಾಲು ಮಂದಿಗೆ ಕೇದಿಗೆ ಪೊದೆ ಎಂದರೆ ಬಿಡಿಸಿ ಹೇಳಬೇಕು. ಜನ ಓಡಾಡಲು ಭಯಪಡುತ್ತಿದ್ದರು. ಎಂತೆಂಥ ತೋಟಗಳಿದ್ದುವು. ಆ ಕೆರೆಗಳೇನು-ಆ ಕುಂಟೆಗಳೇನು ಎಂದು ನೆನಪು ಮಾಡಿಕೊಂಡು ಆನಂದಿಸುವ ಜನ ನೆನಪಿಗೆ ಬಂದರು. ಇವರ ನೆನಪಿ

ನಲ್ಲಿಯೇ ಸಾಗುವಾಗ ಬೆಂಗಳೂರಿನ ಡೈರಿಯ ವೃತ್ತಕ್ಕೆ ಬಂದಾಗ ಹುಲಿ ಸಿಂಹ ಇರುವ ದೊಡ್ಡದಾದ ಪೋಸ್ಟರ್‌ನ ಬೋರ್ಡ್ ಕಾಣಿಸಿತು. ಬನ್ನೇರಘಟ್ಟ ರಾಷ್ಟ್ರೀಯ ಪಾರ್ಕ್‌ಗೆ ದಾರಿ ತೋರಿಸುವುದಕ್ಕಾಗಿ. ಪಾರ್ಕ್‌ನಲ್ಲಿ ಮನುಷ್ಯರೆಂಬ ಮೃಗಗಳನ್ನು ನೋಡಿ ನೋಡಿ ಭಯಪಟ್ಟು ಸೊರಗಿರುವಂತೆ ಪೋಸ್ಟರ್‌ನ ಹಲಿ-ಸಿಂಹವೂ ಸೊರಗಿತ್ತು. ಈ ಸೊರಗಿನ ಕಾರಣವೇ ಇರಬಹುದು SA-RE-GA MACHAN ನಮ್ಮ ಮುಂದಿರುವುದು. ಆದರೂ ಅದು ನಮಗೆ ಬೇಕಾಗಿದೆ. ಮನುಷ್ಯ ಪೂರ್ತಿ ಪ್ರಾಣಿಗಳ ರೀತಿಯಲ್ಲಿ ಘರ್ಜಿಸುವುದನ್ನು ತಪ್ಪಿಸಲು. ಅನಾಥ ಮನುಷ್ಯರನ್ನು ತಿಂದು ಮುಗಿಸುವುದನ್ನು ತಪ್ಪಿಸಲು.

27–7–89 –ಶೂದ್ರ ಶ್ರೀನಿವಾಸ್

ಸುದ್ದಿಯ ಸುದ್ದಿ

ನೆಂಜುಂಡೇಗೌಡ : ಈತನನ್ನು ಮೊದಲ ಬಾರಿಗೆ ಕಂಡದ್ದು ಲಂಕೇಶ್‌ರವರ ಮನೆಯಲ್ಲಿ. ಲಂಕೇಶ್‌ರವರು ಕೆಲವು ವರ್ಷ ಚಲನ ಚಿತ್ರದ ಹುಚ್ಚುತನದಲ್ಲಿ ತಲ್ಲೀನರಾಗಿದ್ದಾಗ. ಈಗಾಗಲೇ ಒಂದು ದಶಕಕ್ಕೂ ಮೇಲ್ಪಟ್ಟು ಕಾಲ ಸರಿದಿದೆ. ಇವರ ನಡುವೆ ನಂಜುಂಡೇಗೌಡ ನಾನಾ ರೀತಿಯ ಕಷ್ಟಗಳಲ್ಲಿ ಅದೇ ಚಲನಚಿತ್ರ ತೆಗೆಯುವ ಕನಸುಗಳಲ್ಲಿ ಸುತ್ತಾಡಿದ. ಸಿಕ್ಕಿದಲ್ಲೆಲ್ಲ ತಡೆಯಮ್ಮ ಮಾಡುವೆ ಎನ್ನುತ್ತಿದ್ದ. ಈಗ ಕೊನೆಗೂ 'ಸಂಕ್ರಾಂತಿ' ಎಂಬ ಚಿತ್ರವನ್ನು ನಿರ್ದೇಶಿಸಿದ್ದಾನೆ. ಇದು ಅಪ್ಪಟ ಕಲಾತ್ಮಕ ಚಿತ್ರವಲ್ಲ. ಅಪ್ಪಟ ವಾಣಿಜ್ಯ ಚಿತ್ರ. ಎಡಬಿಡಂಗಿ ಚಿತ್ರವಲ್ಲ. ಗ್ರಾಮೀಣ ಬದುಕು ಕುಸಿಯುತ್ತಿರುವಾಗ ಅದು ಕುಸಿಯಬಾರದು ಎಂಬ ಧೋರಣೆಯಿಂದ ತೆಗೆದಿರುವ ಚಿತ್ರ. ಆದರೆ ಆ ಧೋರಣೆಯನ್ನು ಎಲ್ಲಿಯೂ ಒತ್ತಾಯಪೂರ್ವಕವಾಗಿ ತುರುಕಿಲ್ಲದಿರುವುದ

ರಿಂದ ಒಟ್ಟು ಚಿತ್ರ ನೀಟಾಗಿದೆ. ನಂಜುಂಡೇಗೌಡ ಜನರಿಗೆ ಪ್ರಾಮಾಣಿಕವಾಗಿ ತಲುಪುವ ಉತ್ತಮ ಚಿತ್ರಗಳನ್ನು ತೆಗೆಯಬಲ್ಲ ಎಂಬುದಕ್ಕೆ 'ಸಂಕ್ರಾಂತಿ' ಸಾಕ್ಷಿಯಾಗಿದೆ. ರೈತ ಚಳುವಳಿಗೆ ಪರೋಕ್ಷವಾಗಿ ಕುಮ್ಮಕ್ಕು ಕೊಡುವ ಸಾಚಾತನ ಇಲ್ಲಿದೆ.

ನಟರಾಜಶರ್ಮ : ನಟರಾಜಶರ್ಮ ನಮ್ಮ ನಡುವಿನ ಹಿರಿಯ ಕವಿ ಬಿ. ಸಿ. ರಾಮ ಶರ್ಮ ಅವರ ಮಗ. ನಟರಾಜಶರ್ಮ ಎಲ್ಲಿಯೂ ತಾನು ರಾಮಚಂದ್ರಶರ್ಮ ಅವರ ಮಗ ಎಂದು ಕ್ಲೈಮ್ ಮಾಡಿಕೊಳ್ಳುವ ಸ್ವಭಾವದ ವ್ಯಕ್ತಿಯಲ್ಲ. ಅತ್ಯಂತ ಮಿತಭಾಷಿ. ಎಷ್ಟರಮಟ್ಟಿಗೆ ಮಿತಭಾಷಿಯೆಂದರೆ ತನಗೆ ಭಾಷೆ ಗೊತ್ತಿಲ್ಲವೇನೋ ಎನ್ನುವ ಮಟ್ಟಿಗೆ ಇರುತ್ತದೆ. ಇದೆಲ್ಲವನ್ನೂ ನಾವು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿರುವುದು ನಟರಾಜ್ ಅವರು ಉತ್ತಮ ಕಲಾವಿದರಾಗಿರುವುದರಿಂದ. ಶೂದ್ರದಲ್ಲಿ ಹಿಂದೆಯೇ ಇವರ ಬಗ್ಗೆ ಪ್ರಸ್ತಾಪಿಸಿದ್ದೆ. ಈತನನ್ನು ಮೊದಲು ಕಂಡಿದ್ದು ಕೆಲವು ವರ್ಷಗಳ ಹಿಂದೆ ಕಲಾಮೇಳ ದಲ್ಲಿ ಚಿತ್ರಬಿಡಿಸುವಾಗ. ಬರೋಡ ಮತ್ತು ಶಾಂತಿನಿಕೇತನದಲ್ಲಿ ಅಧ್ಯಯನ ಮುಗಿ ಸಿರುವ ಗಂಭೀರ ಕಲಾವಿದ. ಈಗಾಗಲೇ ರಾಷ್ಟ್ರೀಯ ಮಟ್ಟದಲ್ಲಿ ಗುರ್ತಿಸಿಕೊಂಡಿರುವ ನಟರಾಜ್ ಉತ್ತಮ ಸಾಧನೆಯ ಹಾದಿಯಲ್ಲಿರುವವರು. ಇತ್ತೀಚೆಗೆ ಇವರ ಶಿಲ್ಪ ವೊಂದನ್ನು ದೆಹಲಿಯಲ್ಲಿರುವ ರಾಷ್ಟ್ರೀಯ ಮ್ಯೂಸಿಯಂಗೆ ತೆಗೆದುಕೊಂಡಿದೆ. ಮತ್ತೊಂದು ಮೆಚ್ಚಿಗೆಯ ಮತ್ತು ಅಭಿನಂದನೆಯ ವಿಷಯವೆಂದರೆ ನಟರಾಜಶರ್ಮ ಅವರು **'ಕೆನಡಾದ ಎಲಿಜಬೆತ್ ಗ್ರೀನ್ ಷೀಲ್ಡ್ ಫೌಂಡೇಶನ್'**ನ ಸ್ಕಾಲರ್ ಷಿಪ್ ಪಡೆದಿದ್ದಾರೆ. ಇದರ ಮೊತ್ತ ಒಂದು ಲಕ್ಷ, ಐದುಸಾವಿರ ಚಿಲ್ಲರೆಯಷ್ಟು. ಅಷ್ಟು ಹಣದ ಚೆಕ್ಕನ್ನು ನೋಡಿದಾಗ ಅಭಿಮಾನದ ಅಸೂಯೆ ಮನದಲ್ಲಿ ಇಣುಕಿ ನೋಡಿತು. ರಾಮಚಂದ್ರಶರ್ಮರ ಮಾಮೂಲಿ ಉತ್ಸಾಹಕ್ಕೆ ಮತ್ತಷ್ಟು ಮಾರ್ಕ್ಸ್ ಸೇರಿಕೊಂಡಿದ್ದರಿಂದ ತುಂಟ ಹುಡುಗಿಯ ರೀತಿಯಲ್ಲಿ ವೈದೇಹಿಯವರ ಕಥೆಯನ್ನು ಟೈಪ್ ಮಾಡುತ್ತಿದ್ದರು. (ಇಂಗ್ಲೀಷಿಗೆ) ನಾನು ತುಂಟತನದಿಂದ ನಿಮಗೆ ಹೊಟ್ಟೆಕಿಚ್ಚು ಬಂದಿರಬಹುದು ಅಲ್ಲವೇ ಅಂದೆ. ಶರ್ಮ ಅವರು ನಾನ್ಯಾಕಪ್ಪ ನನ್ನ ಮಗನ ಬಗೆಗೆ ಹೊಟ್ಟೆಕಿಚ್ಚು ಪಡಲಿ ಎಂದರು ನಗುತ್ತ. ಆದರೆ ನಟರಾಜ್ ಅವರ ಕೈಕುಲುಕಲು ಅವರು ನಮ್ಮ ನಡುವೆ ಇರಲಿಲ್ಲ. ದೆಹಲಿಯಲ್ಲಿದ್ದರು. ಆ ಮೂವತ್ತು ವರ್ಷದ ಕಲಾವಿದ ಇನ್ನೂ ಚೆಕ್ ನೋಡಿಲ್ಲ. ನೋಡಿದರೂ ಅದರ ಮೂಲಕವೇನೂ ಆ ಕಲೆಯ ಬಗೆಗಿನ ಗಂಭೀರತೆ ಹಿಗ್ಗುವುದಿಲ್ಲ.

ಚದುರಂಗ : ಹೆಸರೇ ಅತ್ಯಂತ ಪ್ರಿಯವಾದ ಹೆಸರು. ಅವರ ಪೂರ್ವಾಶ್ರಮದ ಹೆಸರನ್ನು ನೆನಪಿಟ್ಟುಕೊಳ್ಳಲು ಸಾಧ್ಯವಾಗದಷ್ಟು ಚದುರಂಗ ಎಂಬ ಹೆಸರು ಆಕ್ರಮಿಸಿ

ಕೊಂಡಿದೆ. ಅದೇನೆ ಇರಲಿ ಅವರಿಗೆ 73 ವರ್ಷ ತುಂಬಿದೆ. ಇಚ್ಚೀಚೆಗೆ ಮೈಸೂರಿನಲ್ಲಿ ಸನ್ಮಾನಿಸಲಾಯಿತು. ಅವರ ಸಾಹಿತ್ಯ ಮತ್ತು ಬದುಕನ್ನು ಗುರುತಿಸಿ ಅಭಿನಂದನಾ ಗ್ರಂಥವನ್ನು ತಂದಿದ್ದಾರೆ. ಅಭಿನಂದನೆಗೆ ಅವರು ನಿಜವಾಗಿಯೂ ಅರ್ಹರು. ಏನು ಮಾಡಿದರೂ ಅದಕ್ಕೊಂದು ಅಚ್ಚುಕಟ್ಟುತನವನ್ನು ತುಂಬಿಸುವ ವ್ಯಕ್ತಿತ್ವ ಚದು ರಂಗರದ್ದು.

ಚದುರಂಗ ಅವರನ್ನು ಮೊದಲನೆಯ ಬಾರಿ ಕಂಡದ್ದು ಗಾಂಧಿ ಭವನದಲ್ಲಿ. ಕಾಂಗ್ರೆಸ್ ಅಧಿಕಾರ ಕಳೆದುಕೊಂಡು ಜನತಾಪಕ್ಷ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದಿತ್ತು. ಅಂದು ಪಕ್ಷದ ಅಧ್ಯಕ್ಷರಾದ ಚಂದ್ರಶೇಖರ್ ಅವರು ಬುದ್ಧಿಜೀವಿಗಳ ಸಭೆಯಲ್ಲಿ ಮಾತಾಡಲು ಭಾರತ ಯಾತ್ರೆಯನ್ನು ಮೊಟಕುಗೊಳಿಸಿ ಬಂದಿದ್ದರು. ಚಂದ್ರಶೇಖರ್ ಮುಂದಿನ ಪ್ರಧಾನಿಯಾಗುವರು ಎಂಬ ಸುದ್ದಿ ಇಡೀ ಭಾರತದಾದ್ಯಂತ ತುಂಬಿ ಕೊಂಡಿತ್ತು. ಅಥವಾ ಪತ್ರಿಕೆಗಳು ಸುದ್ದಿ ಮಾಡಿದ್ದರೂ ಚಂದ್ರಶೇಖರ್ ಅವರಿಗೆ ಪ್ರಧಾನಿಯಾಗುವ ವ್ಯಕ್ತಿತ್ವ ಇತ್ತು. ಆದರೆ ಮುಂದೆ ಚಂದ್ರಶೇಖರ್ ಅವರು ತಮ್ಮ ಯಂಗ್‌ಟರ್ಕ್ ದಿನಗಳ ಅಗ್ರೆಸಿವ್‌ನೆಸ್‌ನ್ನು ಉಳಿಸಿಕೊಳ್ಳಲಿಲ್ಲ. ಮುಂದೆ ಭಾರತದ ರಾಜಕಾರಣದಲ್ಲಿ ಹೇಗೆ ಎಮರ್ಜ್ ಆಗುವರೋ ಗೊತ್ತಿಲ್ಲ.

ಚದುರಂಗ ಅವರಂತೂ ತಮ್ಮ ಈ 73ನೇ ವಯಸ್ಸಿನಲ್ಲಿಯೂ ಲವಲವಿಕೆಯಿಂದ ನಮ್ಮ ನಡುವೆ ಎಮರ್ಜ್ ಆಗುತ್ತಿರುವವರು. ಅವರಿಗಿಂತ ಕಿರಿಯರಾದ ನಮ್ಮ ನಡು ವಿನ ಬಹುಮಂದಿ ವೃದ್ಧರಾಗಿದ್ದಾರೆ, ಸಿನಿಕರಾಗಿದ್ದಾರೆ. ಕಳೆದ ಎರಡು ವರ್ಷದಿಂದ ಚದುರಂಗರವರ ಮಧ್ಯೆ ಸಾಹಿತ್ಯ ಅಕಾಡೆಮಿಯಲ್ಲಿರುವುದೇ ನನಗೆ ಒಂದು ರೀತಿಯ ಮೆಚ್ಚಿಗೆಯ ವಿಷಯ. ನನ್ನಂಥವರು ಅಕಾಡೆಮಿಯ ಸಭೆಗಳಲ್ಲಿ ಹುಚ್ಚರಂತೆ ವರ್ತಿಸು ವಾಗ ಚದುರಂಗ ಮತ್ತು ಶಿವರುದ್ರಪ್ಪ ಅಂಥವರು ಭೀಷ್ಮಾಚಾರ್ಯರಂತಿರುತ್ತಾರೆ. (ಹಾ.ಮಾ. ನಾಯಕ್‌ರವರೂ ತುಂಬ ತಾಳ್ಮೆಯಿಂದ ಸಭೆಗಳನ್ನು ನಡೆಸುತ್ತಿದ್ದರಂತೆ.) ಅದೇನೆಯಿರಲಿ ನನ್ನ ಪ್ರೀತಿಯ ಲೇಖಕರಾದ ಚದುರಂಗ ಅವರಿಗೆ ಈ ಸಂದರ್ಭದಲ್ಲಿ ಅಭಿನಂದನೆಯನ್ನು ಸಲ್ಲಿಸುತ್ತೇನೆ.

—ಶೂದ್ರ

●

ದೂರವಾಣಿ 76088

ಸಪ್ನ ಬುಕ್ ಸ್ಟಾಲ್-ಕನ್ನಡ ವಿಭಾಗ

(ಕರ್ನಾಟಕ ಬುಕ್ ಏಜೆನ್ಸಿಯ ಸೋದರ ಸಂಸ್ಥೆ)

ತ್ರಿಭುವನ್ ಚಿತ್ರಮಂದಿರದ ಎದುರು, ಗಾಂಧಿನಗರ, ಬೆಂಗಳೂರು–560 009

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಉತ್ತಮ ಕೃತಿಗಳು

- ಕರ್ನಾಟಕದ ವಿವಿಧ ಪ್ರಕಾಶನದ ಎಲ್ಲಾ ಬಗೆಯ ಪುಸ್ತಕಗಳು ಲಭ್ಯ
- ಕರ್ನಾಟಕದಲ್ಲೇ ಅತ್ಯಂತ ದೊಡ್ಡ ಕನ್ನಡ ಪುಸ್ತಕ ಮಾರಾಟ ಮಳಿಗೆ
- ಶಾಲೆ, ಕಾಲೇಜು. ಗ್ರಂಥಾಲಯಗಳಿಗೆ, ಸಂಘ ಸಂಸ್ಥೆಗಳಿಗೆ ಹಾಗೂ ಸಗಟು ಖರೀದಿದಾರರಿಗೆ ರಿಯಾಯಿತಿ ದರದಲ್ಲಿ ಪೂರೈಸಲಾಗುವುದು
- ಸಾವಿರ ರೂಪಾಯಿ ಮೀರಿದ ಖರೀದಿಗೆ ಸಾಗಾಣಿಕೆ ವೆಚ್ಚ ಉಚಿತ.

ಇಂದೇ ಭೇಟಿ ಕೊಡಿ

ನಿಮ್ಮ ಜ್ಞಾನ ಭಂಡಾರವನ್ನು ಬೆಳೆಸಿಕೊಳ್ಳಿ

ಅನ್ಯೋನ್ಯ ಮತ್ತು ಶೂದ್ರ

26-8-89ನೇ ಶನಿವಾರ ಸಂಜೆ–6-00 ಘಂಟೆಗೆ

ರವೀಂದ್ರ ಕಲಾಕ್ಷೇತ್ರದ ವಿಶ್ರಾಂತಿಗೃಹದಲ್ಲಿ

ಬಿ. ಸರ್ವಮಂಗಳ ಮತ್ತು ಬಿ. ಚಿನ್ನಸ್ವಾಮಿ

ಅವರ ಕಾವ್ಯವಾಚನ

FNP/KRNU/72 No. M (2) PRB 211/73/74

SHOODRA Kannada Monthly

1989 ಸೆಪ್ಟೆಂಬರ್ ಸಂಚಿಕೆಯಲ್ಲಿ



ಪನ್ನಾಲಾಲ್ ಪಟೇಲ್
ಶ್ರೀದರ ಪಿಸ್ಸೆ
ವಿಜಯಶಂಕರ್
ಹೆಚ್. ದಂಡಪ್ಪ
ಸತೀಶಕುಲಕರ್ಣಿ
ಸ್ವಾಮಿನಾಥ
ಎಸ್. ಎಸ್. ಇಂದುವದನೆ
ಗೌರೀಶಕಾಯ್ಕಿಣಿ
ಪ್ರೇಮಲೀಲ
ಶಾಮಸುಂದರಬಿದರಕುಂದಿ
ಕೆ. ಎಸ್. ಗಂಗಾಧರ
ಕಿ. ರಂ ನಾಗರಾಜ
ರಂಗಭೂಮಿ
ಸುದ್ದಿಯ ಗುದ್ದಾಟ
ಕನಸಿಗೊಂದು ಕಣ್ಣು



M. Srinivas, Editor for Shudra, Printed at: Pallavi Printers, No. 1, 3rd Cross, Balaji Nagar, Suddagunte Palya, D. R. College Post, Bangalore-29